ಭಾನುವಾರ, ಜುಲೈ 13, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 193 | ಪುಟ 18
www.prajavani.net prajavani.net prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕುನೊ: ಚೀತಾ ಸಾವು



ನಮೀಬಿಯಾದಿಂದ ತರಲಾಗಿದ್ದ ಎಂಟು ವರ್ಷದ ಚೀತಾ ನಭಾ ಗಾಯಗೊಂಡು, ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ (ಕೆಎನ್‌ಪಿ) ಶನಿವಾರ ಮೃತಪಟ್ಟಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ

ನೇರ ತೆರಿಗೆ ಸಂಗ್ರಹ ಇಳಿಕೆ 14
ಶುಭಾಂಶು ಶುಕ್ಲಾ 15ಕ್ಕೆ ಭೂಮಿಗೆ ವಾಪಸ್ 9

ರಾಹುಲ್ ಶತಕ



ಲಾರ್ಡ್ಸ್‌ನಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ ಮೂರನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಭಾನುವಾರ ಭಾರತದ ಕೆ.ಎಲ್. ರಾಹುಲ್ ಶತಕ ಗಳಿಸಿದರು. ಲಾರ್ಡ್ಸ್‌ನಲ್ಲಿ ಎರಡು ಶತಕ ಹೊಡೆದ ನಾಲ್ಕನೇ ಬ್ಯಾಟರ್ ಅವರು

100	177	13
ರನ್	ಎಸೆತ	ಬೌಂಡರಿ

ಕಡಿತವಾಗಿತ್ತು ಇಂಧನ ಸಂಪರ್ಕ

ವಿಮಾನ ದುರಂತ: ಒಂದು ಸೆಕೆಂಡಿನಲ್ಲಿ ಎರಡೂ ಎಂಜಿನ್‌ಗಳಿಗೆ ಇಂಧನ ಪೂರೈಕೆ ಸ್ಥಗಿತ • ಪ್ರಾಥಮಿಕ ತನಿಖಾ ವರದಿ ಉಲ್ಲೇಖ

ನವದೆಹಲಿ (ಪಿಟಿಐ): ಅಹಮದಾಬಾದ್‌ನಲ್ಲಿ ಏರ್ ಇಂಡಿಯಾ ವಿಮಾನ ಪತನಗೊಳ್ಳುವುದಕ್ಕೂ ಮುನ್ನ ಅದರ ಎರಡೂ ಎಂಜಿನ್‌ಗಳಿಗೆ ಇಂಧನ ಪೂರೈಸುವ ಸ್ವಿಚ್‌ಗಳು 'ಕಟ್ ಆಫ್ ಸ್ಥಿತಿಯಲ್ಲಿ ಇದ್ದವು' ಮತ್ತು ಇದರಿಂದ ಪೈಲಟ್‌ಗಳು ಗೊಂದಲಕ್ಕೀಡಾಗಿದ್ದರು ಎಂಬ ವಿಷಯ ವಿಮಾನ ಅಪಘಾತ ತನಿಖಾ ಬ್ಯೂರೊ (ಎಎಐಬಿ) ತನಿಖೆಯಿಂದ ಗೊತ್ತಾಗಿದೆ.

ಈ ಲೋಪದಿಂದಾಗಿ ವಿಮಾನವು ಟೇಕ್-ಆಫ್ ಆದ ಕೆಲವೇ ಸೆಕೆಂಡ್‌ಗಳಲ್ಲಿ ಕೆಳಗಿಳಿಯಲು ಆರಂಭಿಸಿ, ದುರಂತ ಸಂಭವಿಸಿತು ಎಂದು ಎಎಐಬಿ ಪ್ರಾಥಮಿಕ ತನಿಖಾ ವರದಿ ತಿಳಿಸಿದೆ. ಬ್ರಿಟನ್‌ನ ವಾಯು ಅಪಘಾತ ತನಿಖಾ ಶಾಖೆ ಮತ್ತು ಅಮೆರಿಕ ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿಯ ನೆರವಿನಿಂದ ಎಎಐಬಿ ಈ ತನಿಖೆಯನ್ನು ನಡೆಸಿದೆ. ದುರಂತದ ಕುರಿತು 15 ಪುಟಗಳ ವರದಿಯನ್ನು ಅದು ಬಿಡುಗಡೆಗೊಳಿಸಿದ್ದು, ಕೆಲವು ಆಘಾತಕಾರಿ ಮಾಹಿತಿಗಳು ತಿಳಿದುಬಂದಿವೆ.

ಜೂನ್ 12ರಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಲಂಡನ್‌ಗೆ ತೆರಳಲು ಏರ್ ಇಂಡಿಯಾ ವಿಮಾನ (ಬೋಯಿಂಗ್ 787 ಡ್ರೀಮ್‌ಲೈನರ್) ಟೇಕ್-ಆಫ್ ಆದ ಕೆಲವೇ ಕ್ಷಣಗಳಲ್ಲಿ ಮೇಘಾನಿನಗರದ ವೈದ್ಯಕೀಯ ಕಾಲೇಜಿನ ಸಂಕೀರ್ಣದಲ್ಲಿದ್ದ ಕಟ್ಟಡಕ್ಕೆ ಅಪ್ಪಳಿಸಿತ್ತು. ವಿಮಾನದಲ್ಲಿದ್ದ 241 ಪ್ರಯಾಣಿಕರು, ಸಿಬ್ಬಂದಿ ಹಾಗೂ ಘಟನಾ ಸ್ಥಳದಲ್ಲಿದ್ದ 19 ಮಂದಿ ಮೃತಪಟ್ಟಿದ್ದರು. ಪ್ರಯಾಣಿಕರೊಬ್ಬರು ಅಪಾಯದಿಂದ ಪಾರಾಗಿದ್ದರು.

ವರದಿಯ ಪ್ರಮುಖಾಂಶಗಳು:

- ವಿಮಾನ ಟೇಕ್-ಆಫ್ ಆದ ಮೂರೇ ಸೆಕೆಂಡ್‌ಗಳಲ್ಲಿ ಎರಡೂ ಎಂಜಿನ್‌ಗಳ ಇಂಧನ ಪೂರೈಕೆ ಸ್ವಿಚ್‌ಗಳು, ಇದ್ದಕ್ಕಿದ್ದಂತೆ 'ರನ್' ಮೋಡ್‌ನಿಂದ 'ಕಟ್‌ಆಫ್' ಮೋಡ್‌ಗೆ ಬದಲಾದವು. ಎಂಜಿನ್‌ಗಳಿಗೆ ಇಂಧನ ಪೂರೈಕೆ ನಿಂತಿದ್ದರಿಂದ ಅವು ಕಾರ್ಯವನ್ನು ಸ್ಥಗಿತಗೊಂಡಿದ್ದವು ಎಂದು ವರದಿಯಲ್ಲಿ ಹೇಳಲಾಗಿದೆ

9

ಮುಖ್ಯಾಂಶಗಳು

- ವಿಮಾನದಲ್ಲಿನ ಇಂಧನ ಪೂರೈಕೆಯ ಸ್ವಿಚ್ ಆಕಸ್ಮಿಕವಾಗಿ ಬದಲಾಗುವುದಿಲ್ಲ: ಅನುಭವಿ ಪೈಲಟ್
- ದುರಂತದ ಬಗ್ಗೆ 15 ಪುಟಗಳ ವರದಿ ಬಿಡುಗಡೆ, ಆತಂಕಕಾರಿ ಅಂಶಗಳು ಬಹಿರಂಗ

ಸಿ.ಸಿ.ಟಿ.ವಿ ದೃಶ್ಯ
ವಿಮಾನ ಮೇಲೇರಿದ ತಕ್ಷಣ ರ್‍ಯಾಮ್ ಏರ್ ಟರ್ಬೈನ್ (ಆರ್‌ಎಟಿ) ಸಾಧನವು ಸಕ್ರಿಯವಾಗುವುದು ಕಾಣುತ್ತದೆ. ವಿಮಾನ ಹಾರಾಟದ ಮಾರ್ಗದಲ್ಲಿ ಪಕ್ಷಿಗಳ ಹಾರಾಟ ಕಂಡುಬಂದಿಲ್ಲ.

ಬ್ಲ್ಯಾಕ್ ಬಾಕ್ಸ್
ಜೂನ್ 13, 16: ಬ್ಲ್ಯಾಕ್ ಬಾಕ್ಸ್‌ಗಳು ಪತ್ತೆ
ಜೂನ್ 24: ದೆಹಲಿಗೆ ರವಾನೆ
- ಎರಡು ಗಂಟೆಗಳ ಆಡಿಯೊ ಮಾಹಿತಿ ಸಂಗ್ರಹ
- ವಿಮಾನದ ಹಿಂಭಾಗದಲ್ಲಿದ್ದ ಬ್ಲ್ಯಾಕ್‌ಬಾಕ್ಸ್ ತೀವ್ರ ಹಾನಿಗೊಳಗಾಗಿತ್ತು. ಸಾಂಪ್ರದಾಯಿಕ ವಿಧಾನದ ಮೂಲಕ ದತ್ತಾಂಶ ಹೊರತೆಗೆಯಲು ಸಾಧ್ಯವಾಗಿರಲಿಲ್ಲ. ಮೆಮೊರಿ ಕಾರ್ಡ್ ಪರಿಶೀಲನೆಗಾಗಿ ಅದನ್ನು ತೆರೆಯಲಾಗಿದೆ.



2013
ಎಐ-171 ವಿಮಾನ ತಯಾರಾದ ವರ್ಷ

41,868 ಗಂಟೆ
ವಿಮಾನ ಹಾರಾಟದ ಅವಧಿ

54,200 ಕೆ.ಜಿ.
ವಿಮಾನದಲ್ಲಿದ್ದ ಇಂಧನ

2,13,401 ಕೆ.ಜಿ.
ಟೇಕ್‌ಆಫ್ ಆದಾಗ ವಿಮಾನದ ಒಟ್ಟು ತೂಕ (ಗರಿಷ್ಠ 2,18,183 ಕೆ.ಜಿವರೆಗೂ ಅವಕಾಶ)

*ಯಾವುದೇ ಅಪಾಯಕಾರಿ ಸರಕು ಇರಲಿಲ್ಲ

'ಏಕೆ ಆಫ್ ಮಾಡಿದ್ದೀರಿ?'

ಎಂಜಿನ್‌ಗಳ ಇಂಧನ ಕಡಿತಕ್ಕೆ ಸಂಬಂಧಿಸಿದಂತೆ, ಕಾಕ್‌ಪಿಟ್‌ನಲ್ಲಿನ ಪೈಲಟ್‌ಗಳ ನಡುವಿನ ಸಂಭಾಷಣೆ ಬಗ್ಗೆ ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕಾಕ್‌ಪಿಟ್‌ನ ವಾಯ್ಸ್ ರೆಕಾರ್ಡರ್ (ಸಿವಿಆರ್) ಪ್ರಕಾರ, ಒಬ್ಬ ಪೈಲಟ್ ಮತ್ತೊಬ್ಬ ಪೈಲಟ್ ಬಳಿ, 'ನೀವು ಎಂಜಿನ್ ಅನ್ನು ಏಕೆ ಆಫ್ ಮಾಡಿದ್ದೀರಿ' ಎಂದು ಕೇಳಿದ್ದಾರೆ. ಆಗ ಮತ್ತೊಬ್ಬ ಪೈಲಟ್, 'ನಾನು ಏನನ್ನು ಮಾಡಲಿಲ್ಲ' ಎಂದು ಉತ್ತರಿಸಿದ್ದಾರೆ. ಆದರೆ ಈ ಲೋಪ ಹೇಗೆ ಸಂಭವಿಸಿತು ಮತ್ತು ಇದಕ್ಕೆ ಯಾರು ಕಾರಣ ಎಂಬುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿಲ್ಲ.

> ಇದು ಪ್ರಾಥಮಿಕ ವರದಿಯಾಗಿದ್ದು, ಅದರ ಆಧಾರದ ಮೇಲೆ ಯಾವುದೇ ತೀರ್ಮಾನ ತೆಗೆದುಕೊಳ್ಳಲು ಆಗುವುದಿಲ್ಲ. ಈ ಬಗ್ಗೆ ಪೂರ್ಣ ತನಿಖಾ ವರದಿಗಾಗಿ ನಿರೀಕ್ಷಿಸುತ್ತಿದ್ದೇವೆ
> **ಮುರಳೀಧರ್ ಮೊಹೋಲ್,** ಕೇಂದ್ರ ವಿಮಾನಯಾನ ರಾಜ್ಯ ಸಚಿವ

> ಎಎಐಬಿ ತನಿಖಾ ತಂಡ ಮತ್ತು ಇತರ ಅಧಿಕಾರಿಗಳೊಂದಿಗೆ ತನಿಖೆಗೆ ಸಂಪೂರ್ಣ ಸಹಕಾರ ಮುಂದುವರಿಸುತ್ತೇವೆ
> **ಏರ್ ಇಂಡಿಯಾ**

> ವಿಮಾನ ದುರಂತದ ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡುತ್ತೇವೆ ಮತ್ತು ನಮ್ಮ ಗ್ರಾಹಕರನ್ನು ಬೆಂಬಲಿಸುವುದನ್ನು ಮುಂದುವರಿಸುತ್ತೇವೆ
> **ಬೋಯಿಂಗ್**

'ಕೈ' ಭಿನ್ನರಾಗ: ತಪ್ಪಿದ ತಾಳ

'ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿಯಾಗಲು ಹೆಚ್ಚಿನ ಸಂಖ್ಯೆಯ ಶಾಸಕರ ಬೆಂಬಲ ಇಲ್ಲ' ಎಂದು ಸಿದ್ದರಾಮಯ್ಯ ಅವರ ಹೇಳಿಕೆ ನೀಡಿದ ನಂತರ ನಾಯಕತ್ವ ಬದಲಾವಣೆ ವಿಷಯ ರಾಜಕೀಯ ವಲಯದ ಚರ್ಚೆಯ ಕೇಂದ್ರ ಸ್ಥಾನಕ್ಕೆ ಬಂದು ನಿಂತಿದೆ. ಈ ಕುರಿತ ಸಚಿವರು, ಶಾಸಕರ ಹೇಳಿಕೆಗಳ ಸರಣಿ ಶನಿವಾರವೂ ಮುಂದುವರಿದಿದ್ದು, ಕಾಂಗ್ರೆಸ್ ಹೈಕಮಾಂಡ್‌ನತ್ತ ಎಲ್ಲರೂ ಕೈ ತೋರಿದ್ದಾರೆ.

ಹೈಕಮಾಂಡ್ ನಿರ್ಧಾರ: ಪ್ರಿಯಾಂಕ್



ಹುಬ್ಬಳ್ಳಿ: 'ಮುಖ್ಯಮಂತ್ರಿ ಬದಲಾಯಿಸಬೇಕೋ, ಬೇಡವೋ ಎನ್ನುವುದು ಹೈಕಮಾಂಡ್‌ಗೆ ಬಿಟ್ಟ ನಿರ್ಧಾರ. ಆ ಕುರಿತು ಅವರೇ ಮಾತನಾಡುತ್ತಿಲ್ಲ ಎಂದಾಗ, ನಾವು-ನೀವು ಚರ್ಚೆ ನಡೆಸುವುದರಲ್ಲಿ ಅರ್ಥವಿಲ್ಲ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಬದಲಾವಣೆ ಕುರಿತು ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಯಾರೊಂದಿಗೂ ಚರ್ಚಿಸಿಲ್ಲ. ಮುಖ್ಯಮಂತ್ರಿ ಬದಲಾಯಿಸುವ ಅಧಿಕಾರ ಇರುವ ಪಕ್ಷದ ನಾಯಕರು ಸುಮ್ಮನಿದ್ದಾರೆ' ಎಂದರು. 'ಸುರ್ಜೇವಾಲಾ ಅವರು ಸಭೆ ನಡೆಸಿದ್ದು, ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ಶಾಸಕರಿಗೆ ಸೂಚಿಸಿದ್ದಾರೆ. ಕೆಪಿಸಿಸಿ ಅಧ್ಯಕರ ಬದಲಾವಣೆ ಕುರಿತು ಸಹ ಯಾವ ಚರ್ಚೆಗಳು ನಡೆದಿಲ್ಲ' ಎಂದರು.

8

ಸಂಕ್ರಾಂತಿಯು ನಡೆದೇ ನಡೆಯುತ್ತದೆ: ಮಹದೇವಪ್ಪ



ಮೈಸೂರು: 'ಸಂಕ್ರಾಂತಿಯಂತೂ ನಡೆದೇ ನಡೆಯುತ್ತದೆ. ನಾಯಕತ್ವ ಬದಲಾವಣೆ ಇಲ್ಲವೆಂದು ಮುಖ್ಯಮಂತ್ರಿ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ ಸ್ಪಷ್ಟಪಡಿಸಿದ ಮೇಲೆ ಮತ್ತೇಕೆ ಪ್ರಶ್ನೆ ಕೇಳುತ್ತೀರಿ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಪ್ರಶ್ನಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಶಿವಕುಮಾರ್ ಅವರಿಗೆ ಹೆಚ್ಚಿನ ಶಾಸಕರ ಬೆಂಬಲವಿಲ್ಲ, ನಾನೇ 5 ವರ್ಷ ಮುಖ್ಯಮಂತ್ರಿ ಆಗಿರುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ ಮೇಲೆ ಎಲ್ಲ ಚರ್ಚೆಯೂ ಮುಗಿಯಿತಲ್ಲ ಬಿಡಿ' ಎಂದು ಹೇಳಿದರು.

8

ಶಾಸಕರ ಬೆಂಬಲ ಪಕ್ಷಕ್ಕಿದೆ: ತನ್ವೀರ್



ಮೈಸೂರು: 'ಅಧಿಕಾರ ಹಸ್ತಾಂತರ ಸೂತ್ರ ನಮಗೆ ಗೊತ್ತಿಲ್ಲ. ವರಿಷ್ಠರ ತೀರ್ಮಾನಕ್ಕೆ ನಾವು ಬದ್ಧ. ನಮ್ಮೆಲ್ಲ ಶಾಸಕರ ಬೆಂಬಲ ಪಕ್ಷಕ್ಕಿದೆ. ಇದು ರಾಜಕಾರಣ. ಪಕ್ಷದಲ್ಲಿ ಯಾವಾಗ ಬೇಕಾದರೂ ಕ್ರಾಂತಿ ಆಗಬಹುದು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಶಾಸಕ ತನ್ವೀರ್‌ಸೇಠ್ ಹೇಳಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಯಾರಿಗೂ ಅಧಿಕಾರ ಶಾಶ್ವತವಲ್ಲ. ನೂರು ವರ್ಷ ಬದುಕಬೇಕು ಅಂದುಕೊಂಡರೂ ಅದು ಸಾಧ್ಯವೇ ಎಂದು ನೋಡಬೇಕು. ನಾಳೆ ಬೆಳಿಗ್ಗೆ ಏನಾಗುತ್ತದೆಯೋ ಯಾರಿಗೂ ಗೊತ್ತಿಲ್ಲ. ಸಿದ್ದರಾಮಯ್ಯ ಎಲ್ಲಿಯವರೆಗೆ ಮುಖ್ಯಮಂತ್ರಿ ಆಗಿರುತ್ತಾರೆಯೋ ಅಲ್ಲಿಯವರೆಗೂ ಅವರೇ ನಮ್ಮ ಮುಖ್ಯಮಂತ್ರಿ' ಎಂದರು.

8

ವಿಷಾನಿಲ ಸೋರಿಕೆ –ಇಬ್ಬರು ಸಿಬ್ಬಂದಿ ಸಾವು

ಪ್ರಜಾವಾಣಿ ವಾರ್ತೆ

ಮಂಗಳೂರು: ಸುರತ್ಕಲ್ ಸಮೀಪದಲ್ಲಿರುವ ಮಂಗಳೂರು ರಿಫೈನರಿ ಆಂಡ್ ಪೆಟ್ರೋ ಕೆಮಿಕಲ್ (ಎಂಆರ್‌ಪಿಎಲ್) ಕಚ್ಚಾ ತೈಲ ಸಂಸ್ಕರಣ ಘಟಕದಲ್ಲಿ ವಿಷಾನಿಲ (ಹೈಡ್ರೋಜನ್ ಸಲ್ಫೈಡ್) ಸೋರಿಕೆಯಾಗಿ ಇಬ್ಬರು ಸಿಬ್ಬಂದಿ ಶನಿವಾರ ಮೃತಪಟ್ಟಿದ್ದಾರೆ.

ಕಂಪನಿಯ ಸಹಾಯಕ ಕಾರ್ಯಾಚರಣೆ ಅಧಿಕಾರಿಗಳಾಗಿದ್ದ ಪ್ರಯಾಗರಾಜ್‌ನ ದೀಪಚಂದ್ರ ಭಾರ್ತೀಯಾ (33) ಹಾಗೂ ಕೇರಳದ ಬಿಜಿಲ್ ಪ್ರಸಾದ್ ಪಿ. (33) ಮೃತರು. ಅವರನ್ನು ರಕ್ಷಿಸಲು ಯತ್ನಿಸಿದ ಗದಗದ ವಿನಾಯಕ ಮ್ಯಾಗೇರಿ ಅವರೂ ಅಸ್ವಸ್ಥಗೊಂಡಿದ್ದು, ಚಿಕಿತ್ಸೆ ಬಳಿಕ ಚೇತರಿಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಎಂಆರ್‌ಪಿಎಲ್ ಘಟಕದ ತೊಟ್ಟಿಯೊಂದರಲ್ಲಿ (ಎಫ್‌ಬಿ7029) ಲೋಪ ಕಾಣಿಸಿಕೊಂಡಿತ್ತು. ಅದನ್ನು ಪರಿಶೀಲಿಸಲು ಇಬ್ಬರೂ ಸಿಬ್ಬಂದಿ ತೊಟ್ಟಿ ಮೇಲೆ ಹತ್ತಿದ್ದರು. ಬೆಳಿಗ್ಗೆ 8 ಗಂಟೆ ಸುಮಾರಿಗೆ ಅವರು ಅಲ್ಲೇ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಅಷ್ಟರಲ್ಲೇ ಅವರಿಬ್ಬರು ಕೊನೆಯುಸಿರೆಳೆದಿದ್ದರು' ಎಂದು ಸಂಸ್ಥೆಯು ತಿಳಿಸಿದೆ.

'ಘಟಕದಲ್ಲಿ ಹೈಡ್ರೋಜನ್ ಸಲ್ಫೈಡ್ (H_2S) ಸೋರಿಕೆಯಾಗಿತ್ತು. ಮೃತರು ಅದನ್ನು ಉಸಿರಾಡಿರುವ ಸಾಧ್ಯತೆ ಇದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಸೂಪರ್ ಬಗ್' ಬಗ್ಗಿಸಲು ಅಸ್ತ್ರ

ಬೆಂಗಳೂರು: ಗಂಭೀರ ಸ್ವರೂಪದ ಕಾಯಿಲೆಗಳನ್ನು ಹರಡುವ ಬ್ಯಾಕ್ಟೀರಿಯಾ, ವೈರಸ್, ಫಂಗೈ ಮತ್ತು ಪರಾವಲಂಬಿಗಳು ಔಷಧ ಹಾಗೂ ರೋಗ ನಿರೋಧಕಗಳಿಗೆ, ಪ್ರತಿಜೀವಕ ನಿರೋಧಕ ಶಕ್ತಿ ಬೆಳೆಸಿಕೊಂಡಿರುವುದರಿಂದ ಅವು ಕೆಲಸ ಮಾಡದೇ ಸಾಯುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

ಇದು ಮಾನವರ ಸಮಸ್ಯೆ ಮಾತ್ರವಲ್ಲ, ಪ್ರಾಣಿಗಳು ಮತ್ತು ಕೃಷಿ ಕ್ಷೇತ್ರವೂ ಈ ಸಮಸ್ಯೆಯನ್ನು ಎದುರಿಸುತ್ತಿವೆ.

8

ಒಳನೋಟ

ವ್ಯಾಮೋಹದ ಜಿಮ್, ಸ್ಟೆರಾಯ್ಡ್



ವ್ಯಾಯಾಮ, ಕ್ರೀಡೆಗಳ ಮೂಲ ಉದ್ದೇಶ ಆರೋಗ್ಯವರ್ಧನೆ, ಮನೋಲ್ಲಾಸಗಳನ್ನು ನೀಡುವುದೇ ಆಗಿದೆ. ಆದರೆ, ಅಲ್ಪಕಾಲದ ಯಶಸ್ಸು, ಹಣ ಗಳಿಕೆ, ಖ್ಯಾತಿ ಮತ್ತಿತರ ಆಮಿಷಗಳಿಗೆ ಯುವಕರು ಬಲಿಯಾಗುತ್ತಿದ್ದಾರೆ.

6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ ಇದೆ

ಅಂಧರ ಸಂಚಾರಕ್ಕೆ 'ಆನ್‌ಬೋರ್ಡ್'

ಬಿಎಂಟಿಸಿಯ 125 ಬಸ್‌ಗಳಲ್ಲಿ ತಂತ್ರಜ್ಞಾನ ಅಳವಡಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಅಂಧರ ಅನುಕೂಲಕ್ಕಾಗಿ ಬಿಎಂಟಿಸಿಯ 125 ಬಸ್‌ಗಳಲ್ಲಿ ಆನ್‌ಬೋರ್ಡ್ ತಂತ್ರಜ್ಞಾನ ಪರಿಚಯಿಸಲಾಗಿದ್ದು, ಆಗಸ್ಟ್ ಅಂತ್ಯದ ಒಳಗೆ 500 ಬಸ್‌ಗಳಲ್ಲಿ, ಆನಂತರ ಎಲ್ಲ ಬಸ್‌ಗಳಲ್ಲಿ ಈ ತಂತ್ರಜ್ಞಾನ ಅಳವಡಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಈ ಯೋಜನೆಗೆ ಶನಿವಾರ ಚಾಲನೆ ನೀಡಿ ಮಾತನಾಡಿದ ಅವರು, 'ಕಾಂಟಿನೆಂಟಲ್ ಆಟೋಮೋಟಿವ್ ಕಾಂಪೊನೆಂಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ದೆಹಲಿ, ರೈಸ್ಡ್ ಲೈನ್ಸ್ ಫೌಂಡೇಷನ್ (ಆರ್‌ಎಲ್‌ಎಫ್) ಮತ್ತು ಎನೇಬಲ್ ಇಂಡಿಯಾ ಸಹಯೋಗದೊಂದಿಗೆ ಆನ್‌ಬೋರ್ಡ್ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿತ್ತು' ಎಂದು ತಿಳಿಸಿದರು.

'ಈ ಸಾಧನವನ್ನು ಪ್ರಾಯೋಗಿಕವಾಗಿ 401ಕೆ ಮತ್ತು 242ಬಿ ಮಾರ್ಗದ 25 ಬಸ್ಸುಗಳಲ್ಲಿ ಅಳವಡಿಸಲಾಗಿತ್ತು. ದೃಷ್ಟಿದೋಷ ಇರುವ ಪ್ರಯಾಣಿಕರು ಹೆಚ್ಚಾಗಿ ಪ್ರಯಾಣಿಸುವ ಮಾರ್ಗಗಳು ಇವು. 500 ಪ್ರಯಾಣಿಕರಿಗೆ ಆನ್‌ಬೋರ್ಡ್ ತಂತ್ರಜ್ಞಾನ ಬಳಸುವ ಬಗ್ಗೆ ತರಬೇತಿ ನೀಡಲಾಗಿತ್ತು. ಅದರಲ್ಲಿ 25 ಪ್ರಯಾಣಿಕರು ಉಪಕರಣವನ್ನು ಬಳಸಿದ್ದರು' ಎಂದು ವಿವರಿಸಿದರು.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ಮಾತನಾಡಿ, 'ಬಿಎಂಟಿಸಿ ಬಸ್‌ಗಳಲ್ಲಿ ಎಲ್ಲರೂ ಸಂಚರಿಸುವಂತಾಗಬೇಕು. ಯಾವುದೇ ದೈಹಿಕ ನ್ಯೂನತೆಗಳು ಸಂಚಾರಕ್ಕೆ ತೊಡಕಾಗಬಾರದು ಎಂಬುದು ಉದ್ದೇಶ. ಜೊತೆಗೆ ಇತರ ಪ್ರಮುಖ ಜಾಗತಿಕ ನಗರಗಳಿಗೆ ಸಮನಾಗಿ ಬೆಂಗಳೂರು ಇರಬೇಕು. ಈ ನಿಟ್ಟಿನಲ್ಲಿ ಆನ್‌ಬೋರ್ಡ್ ತಂತ್ರಜ್ಞಾನ ನಿರ್ಣಾಯಕ ಹೆಜ್ಜೆ' ಎಂದರು.

ಕಾಂಟಿನೆಂಟಲ್ ಅಧ್ಯಕ್ಷ ಪ್ರಶಾಂತ್ ದೊರೆಸ್ವಾಮಿ ಮಾತನಾಡಿ, 'ನಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು ಇಲ್ಲಿ ಬಳಕೆ ಮಾಡಲಾಗಿದೆ. ಎಲ್ಲರಿಗೂ ಸಂಚರಿಸುವ ಸ್ವಾತಂತ್ರ್ಯ ನೀಡುವುದೇ ನಮ್ಮ ಗುರಿ' ಎಂದರು.

ಬಿಎಂಟಿಸಿ ಮಾಹಿತಿ ತಂತ್ರಜ್ಞಾನ ವಿಭಾಗದ ನಿರ್ದೇಶಕಿ ಶಿಲ್ಪಾ ಎಂ., ದೆಹಲಿ ಐಐಟಿ ಪ್ರಾಧ್ಯಾಪಕ ಎಂ. ಬಾಲಕೃಷ್ಣ, ರೈಸ್ಡ್ ಲೇನ್ಸ್ ಫೌಂಡೇಶನ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪುಲ್ಕಿತ್ ಇದ್ದರು.



ಅಂಧರಿಗೆ ಬಸ್ ಪತ್ತೆ ಹಚ್ಚಿ ಸಂಚರಿಸಲು ಸುಲಭ ಮಾಡಿಕೊಡುವ 'ಆನ್‌ಬೋರ್ಡ್' ಸಾಧನಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶನಿವಾರ ಬಿಎಂಟಿಸಿ ಕೇಂದ್ರ ಕಚೇರಿ ಬಳಿ ಚಾಲನೆ ನೀಡಿದರು – ಪ್ರಜಾವಾಣಿ ಚಿತ್ರ

ಆನ್‌ಬೋರ್ಡ್ ಸಾಧನ ಬಳಕೆ ಹೇಗೆ?

ಆನ್‌ಬೋರ್ಡ್ ಸಾಧನವು ದೃಷ್ಟಿ ಸಮಸ್ಯೆಯ ವ್ಯಕ್ತಿಗಳಿಗೆ ಬಸ್ ಮಾರ್ಗ ಸಂಖ್ಯೆಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ಅವರು ಆ ಸಾಧನದಲ್ಲಿ ಸಂಖ್ಯೆ ಒತ್ತಿದಾಗ ಬಸ್‌ನಲ್ಲಿ ಅಳವಡಿಸಿದ್ದ ಮೌಂಟೆಡ್ ಸ್ಪೀಕರ್ ಧ್ವನಿ ಹೊರಡಿಸುತ್ತದೆ. ಇದು ಬಸ್‌ನ ಚಾಲಕ ಮತ್ತು ನಿರ್ವಾಹಕರಿಗೂ ಮಾಹಿತಿ ನೀಡುವುದರಿಂದ ಅವರು ದೃಷ್ಟಿದೋಷ ಇರುವವರನ್ನು ಬಸ್ ಹತ್ತಿಸಲು ಸಹಾಯ ಮಾಡುತ್ತಾರೆ. ಅಲ್ಲದೇ ಇದೇ ಧ್ವನಿಯ ಆಧಾರದಲ್ಲಿ ಆ ವ್ಯಕ್ತಿಗಳು ಕೂಡ ಬಸ್‌ನ ಬಾಗಿಲಿನತ್ತ ಬರಲು ಉಪಯೋಗವಾಗುತ್ತದೆ. ಇಳಿಯಬೇಕಾದ ಸ್ಥಳದಲ್ಲಿಯೂ ಬಟನ್ ಒತ್ತಿದರೆ ಅವರನ್ನು ಸುರಕ್ಷಿತವಾಗಿ ಇಳಿಸಲು ಸಾಧ್ಯವಾಗುತ್ತದೆ.

ಚಿಟಿಕೆ ಸುದ್ದಿ

ಗುರುತಿನ ಚೀಟಿ ನೇಪಾಳಿ ಮಹಿಳೆ ಬಂಧನ



ಬೆಂಗಳೂರು: ಅಕ್ರಮವಾಗಿ ಭಾರತೀಯ ಚುನಾವಣಾ ಗುರುತಿನ ಚೀಟಿ ಹೊಂದಿದ್ದ ನೇಪಾಳಿ ಮಹಿಳೆಯನ್ನು ಪೊಲೀಸರು ಬಂಧಿಸಿದ್ದಾರೆ.

ವಿಮಾನ ನಿಲ್ದಾಣದ ವಲಸೆ ವಿಭಾಗದ ಅಧಿಕಾರಿ ಶೈಲೇಂದ್ರ ಕುಮಾರ್ ಮೀನಾ ಅವರ ದೂರಿನ ಮೇರೆಗೆ ರೇಖಾ ಎಂಬುವರನ್ನು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

ಜುಲೈ 10ರಂದು ರೇಖಾ ಅವರು ನೇಪಾಳದಿಂದ ವಿಮಾನದ ಮೂಲಕ ಬೆಂಗಳೂರಿಗೆ ಬಂದಿದ್ದಾರೆ. ವಿಮಾನ ನಿಲ್ದಾಣದಲ್ಲಿ ವಲಸಿಗರ ವಿಭಾಗದ ಅಧಿಕಾರಿಗಳು ಮಹಿಳೆಯ ದಾಖಲೆಗಳ ಪರಿಶೀಲನೆ ನಡೆಸಿದ ವೇಳೆ ನೇಪಾಳ ಹಾಗೂ ಭಾರತೀಯ ಚುನಾವಣಾ ಗುರುತಿನ ಚೀಟಿಗಳು ಪತ್ತೆಯಾಗಿವೆ.

ಈ ಬಗ್ಗೆ ಪ್ರಶ್ನಿಸಿದಾಗ ಹುಣಸೇಮಾರನಹಳ್ಳಿಯ ಗ್ರಾಮ ಪಂಚಾಯಿತಿ ಅಧಿಕಾರಿಗಳು ಗುರುತಿನ ಚೀಟಿ ಮಾಡಿಕೊಟ್ಟಿದ್ದಾರೆ ಎಂದು ಮಹಿಳೆ ಹೇಳಿದ್ದಾಳೆ. ನೇಪಾಳ ದೇಶದ ನಾಗರಿಕರಾಗಿದ್ದರೂ ಭಾರತದ ಗುರುತಿನ ಚೀಟಿಯನ್ನು ಅಕ್ರಮವಾಗಿ ಪಡೆದುಕೊಂಡಿರುವ ಈಕೆ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಅಧಿಕಾರಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕಾರಿನ ಮೇಲೆ ಬಿದ್ದ ಮರ: ಚಾಲಕ ಪಾರು

ಬೆಂಗಳೂರು: ನಗರದಲ್ಲಿ ಸುರಿದ ಭಾರಿ ಮಳೆಗೆ ಶೇಷಾದ್ರಿಪುರ ಕಾನೂನು ಕಾಲೇಜು ಹಿಂಭಾಗದ ರಸ್ತೆಯಲ್ಲಿ ಚಲಿಸುತ್ತಿದ್ದ ಕಾರಿನ ಮೇಲೆ ಮರ ಬಿದ್ದಿದ್ದು, ಚಾಲಕ ಸೇರಿ ಮೂವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮರ ಬಿದ್ದ ರಭಸಕ್ಕೆ ಕಾರಿನ ಗಾಜು ಸಂಪೂರ್ಣ ಜಖಂ ಆಗಿದ್ದು, ಪ್ರಯಾಣಿಕರಿಗೆ ಪೆಟ್ಟಾಗಿಲ್ಲ. ಎರಡು ವಿದ್ಯುತ್ ಕಂಬಗಳು ತುಂಡಾಗಿವೆ. ಇದರಿಂದಾಗಿ ಕೆಲಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು.

ಸ್ಥಳಕ್ಕೆ ಬಿಬಿಎಂಪಿ, ಅರಣ್ಯ ಇಲಾಖೆ, ಬೆಸ್ಕಾಂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಮರಗಳನ್ನು ತೆರವುಗೊಳಿಸಿದ್ದಾರೆ. ಬೆಸ್ಕಾಂ ಸಿಬ್ಬಂದಿ ವಿದ್ಯುತ್ ಕಂಬ ದುರಸ್ತಿಗೊಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಹಿಳೆ ಸ್ನಾನ ಮಾಡುವ ವಿಡಿಯೊ ಮಾಡಿ ಸಿಕ್ಕಿಬಿದ್ದ ಎಲೆಕ್ಟ್ರಿಷಿಯನ್



ಮೊಯಿನುದ್ದೀನ್

ಬೆಂಗಳೂರು: ತಾಯಿ, ಮಗಳು ಸ್ನಾನ ಮಾಡುವ ವಿಡಿಯೊ ಚಿತ್ರೀಕರಿಸುತ್ತಿದ್ದ ಆರೋಪದ ಮೇರೆಗೆ ಆರೋಪಿಯೊಬ್ಬನನ್ನು ಕಾಡುಗೋಡಿ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.

ಕೇರಳ ಮೂಲದ, ಚೆನ್ನಸಂದ್ರ ನಿವಾಸಿ ಮೊಯಿನುದ್ದೀನ್ (24) ಬಂಧಿತ ಆರೋಪಿ. ಆರೋಪಿಯು ಬಾತ್ ರೂಮ್‌ನ ಕಿಟಕಿಯಿಂದ ಮೊಬೈಲ್‌ನಲ್ಲಿ ದೃಶ್ಯ ಸೆರೆಹಿಡಿಯುತ್ತಿದ್ದ. ಮಹಿಳೆಯ ಪತಿ ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೂರುದಾರರ ಮನೆಯ ಸಮೀಪದಲ್ಲೇ ವಾಸವಿರುವ ಆರೋಪಿ, ಜುಲೈ 8ರ ಬೆಳಗ್ಗೆ ಕೃತ್ಯ ಎಸಗುತ್ತಿರುವುದನ್ನು ಬಾಲಕಿ ಗಮನಿಸಿ, ತಾಯಿಗೆ ಹೇಳಿದ್ದಳು. ಬಾಲಕಿ ತಂದೆ ಹೊರಗೆ ಬಂದು ನೋಡುವಷ್ಟರಲ್ಲಿ ಆರೋಪಿ ಪರಾರಿಯಾಗಿದ್ದ.

ಆರೋಪಿ ಕಾಡುಗೋಡಿಯಲ್ಲಿ ಎಲೆಕ್ಟ್ರಿಷಿಯನ್ ಕೆಲಸ ಮಾಡುತ್ತಿದ್ದು, ಆತನ ಮೊಬೈಲ್ ಫೋನ್‌ನಲ್ಲಿದ್ದ ವಿಡಿಯೊ ಅಳಿಸಿ ಹಾಕಲಾಗಿದೆ. ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಟ್ ಕಾಯಿನ್‌ನಲ್ಲಿ ಹೂಡಿಕೆ: ವಂಚನೆ



ತುಮಕೂರು: ಫೇಸ್‌ಬುಕ್‌ನಲ್ಲಿ ಪರಿಚಯವಾದ ವ್ಯಕ್ತಿಯೊಬ್ಬರು ಬಿಟ್ ಕಾಯಿನ್‌ನಲ್ಲಿ ಹೂಡಿಕೆ ಮಾಡಿದರೆ ತ್ವರಿತವಾಗಿ ಹೆಚ್ಚಿನ ಲಾಭ ಗಳಿಸಬಹುದು ಎಂದು ಒಡ್ಡಿದ ಆಮಿಷಕ್ಕೆ ಒಳಗಾದ ಇಲ್ಲಿಯ ನಿವಾಸಿಯೊಬ್ಬರು ₹79.75 ಲಕ್ಷ ಕಳೆದುಕೊಂಡಿದ್ದಾರೆ.

ನಗರದ ಕೆ.ಆರ್. ಬಡಾವಣೆಯ ಪಿ.ಕಿಶೋರ್ ಕುಮಾರ್ ಹಣ ಕಳೆದುಕೊಂಡ ವ್ಯಕ್ತಿ. ಫೇಸ್‌ಬುಕ್‌ನಲ್ಲಿ ಪರಿಚಯವಾದ ಜಿಯಾ ಶರ್ಮಾ ಬಿಟ್ ಕಾಯಿನ್ ಹೂಡಿಕೆ ಮಾಡಿದರೆ ವೇಗವಾಗಿ ಹೆಚ್ಚಿನ ಲಾಭ ಗಳಿಸಬಹುದು ಎಂದು ಹೇಳಿ ವಂಚಿಸಿದ್ದಾರೆ.

ಪೊಲೀಸರ ಕರ್ತವ್ಯಕ್ಕೆ ಅಡ್ಡಿಯಾದ ನಕಲಿ ವಕೀಲನ ಬಂಧನ

ಪ್ರಜಾವಾಣಿ ವಾರ್ತೆ



ಯೋಗಾನಂದ್

ಅಪರಾಧ ಸುದ್ದಿ

ಬೆಂಗಳೂರು: ಮಹಿಳೆಯರಿಗೆ ₹30 ಕೋಟಿಗೂ ಹೆಚ್ಚು ವಂಚನೆ ಮಾಡಿದ್ದ ಆರೋಪಿಯ ಪರ ಬಂದು ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ನಕಲಿ ವಕೀಲರೊಬ್ಬರನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಾಜಿನಗರ 4ನೇ ಹಂತದ ನಿವಾಸಿ ಯೋಗಾನಂದ್ (52) ಅವರನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ನೀಡಲಾಗಿದೆ.

ಆರೋಪಿ ಸವಿತಾ ಪರ ವಕೀಲನೆಂದು ಹೇಳಿಕೊಂಡು ಬಸವೇಶ್ವರ ನಗರ ಠಾಣೆ ಬಳಿ ತೆರಳಿದ್ದ ಯೋಗಾನಂದ್, 'ಯಾವ ಆಧಾರದಲ್ಲಿ ಬಂಧಿಸಿದ್ದೀರಿ?' ಎಂದು ಪೊಲೀಸರನ್ನು ಪ್ರಶ್ನಿಸಿದ್ದರು. ನಂತರ ಠಾಣೆಯಲ್ಲಿದ್ದ ಸವಿತಾ ಅವರಿಂದ ಮನೆ ಬೀಗವನ್ನು ಪಡೆದುಕೊಂಡು ಹೋಗಲು ಯತ್ನಿಸಿದ್ದರು. 'ಬೀಗವನ್ನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ' ಎಂದು ತಡೆದಾಗ ಅವರು ಪೊಲೀಸ್ ಸಿಬ್ಬಂದಿಗೆ ಬೆದರಿಸಿದ್ದರು.

ಇದೇ ವೇಳೆ ಸ್ಥಳದಲ್ಲಿದ್ದ ಕೆ.ಪಿ. ಅಗ್ರಹಾರ ಠಾಣೆಯ ಇನ್‌ಸ್ಪೆಕ್ಟರ್ ಗೋವಿಂದರಾಜ್, ಈ ಹಿಂದೆ ತಾವು ಬಸವೇಶ್ವರ ನಗರ ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ವೇಳೆ ವೃದ್ಧೆಯ ಮೇಲೆ ಹಲ್ಲೆಗೈದ ಪ್ರಕರಣದಲ್ಲಿ ಯೋಗಾನಂದ್ ಬಂಧಿಸಿದ್ದನ್ನು ನೆನಪಿಸಿಕೊಂಡರು. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ ವಕೀಲ ಅಲ್ಲ ಎಂಬುದು ಗೊತ್ತಾಗಿದೆ. ಈತ ಸವಿತಾಳ ಕಾಲೇಜು ಸಹಪಾಠಿಯಾಗಿದ್ದ ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ಹಿನ್ನೆಲೆ: ಪ್ರಭಾವಿ ರಾಜಕಾರಣಿಗಳ ಸಂಬಂಧಿ ಸೋಗಿನಲ್ಲಿ ಕಡಿಮೆ ಬೆಲೆಗೆ ಚಿನ್ನ ಕೊಡಿಸುವುದಾಗಿ ನಂಬಿಸಿ ಮಹಿಳೆಯರಿಗೆ ₹30 ಕೋಟಿಗೂ ಹೆಚ್ಚು ವಂಚನೆ ಮಾಡಿದ್ದ ಸವಿತಾ (49) ಮತ್ತು ಆಕೆಯ ಸಹಚರನಾದ ಪುನೀತ್ (28) ಎಂಬಾತನನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದರು.

'ಶ್ರೀಮಂತ ಮಹಿಳೆಯರನ್ನು ಪರಿಚಯಿಸಿಕೊಳ್ಳುತ್ತಿದ್ದ ಆರೋಪಿ, ಅವರನ್ನು ಕಿಟ್ಟಿ ಪಾರ್ಟಿಗೆ ಆಹ್ವಾನಿಸುತ್ತಿದ್ದಳು. ಪ್ರಭಾವಿ ರಾಜಕಾರಣಿಗಳು ಸಂಬಂಧಿಕರು, ಇನ್ನೂ ಹಲವರ ಪರಿಚಯವಿದೆ ಎಂದು ನಂಬಿಸಿದ್ದಳು. ಅಲ್ಲದೇ, ತನ್ನ ಪತಿ ಹಾಗೂ ಕೆಲ ಸಂಬಂಧಿಕರು ವಿದೇಶದಲ್ಲಿ ನೆಲಸಿದ್ದು, ಅಲ್ಲಿಂದ ಕಡಿಮೆ ಬೆಲೆಗೆ ಚಿನ್ನ ತರಿಸಿ ಕೊಡುವುದಾಗಿ, ಉದ್ಯಮದಲ್ಲಿ ಹೂಡಿಕೆ ಮಾಡಿದರೆ ಲಾಭ ನೀಡುವುದಾಗಿ ಹಣ ಪಡೆದು ವಂಚಿಸಿದ್ದಳು' ಎಂದು ಪೊಲೀಸರು ತಿಳಿಸಿದ್ದಾರೆ.

ಸವಿತಾಳ ಮಾತು ನಂಬಿ ₹95 ಲಕ್ಷ ನೀಡಿ ವಂಚನೆಗೊಳಗಾಗಿದ್ದ ಕುಸುಮಾ ಎಂಬುವವರು ಠಾಣೆಗೆ ದೂರು ನೀಡಿದ್ದರು. ಆರೋಪಿಯು 20ಕ್ಕೂ ಹೆಚ್ಚು ಮಹಿಳೆಯರಿಗೆ ಸುಮಾರು ₹30 ಕೋಟಿ ವಂಚಿಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದ್ದು, ಸವಿತಾ ಮತ್ತು ಪುನೀತ್‌ನನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಸುದ್ದಿ 2 ನಿಮಿಷ

ಕಾರಾಗೃಹದಲ್ಲಿ ಉಗ್ರರಿಗೆ ನೆರವು ಹಣದ ಮೂಲ ಪತ್ತೆಗೆ ತನಿಖೆ

ಬೆಂಗಳೂರು: ಕೇಂದ್ರ ಕಾರಾಗೃಹದಲ್ಲಿ ಉಗ್ರರಿಗೆ ನೆರವು ನೀಡಿದ ಆರೋಪದಡಿ ಬಂಧಿಸಲಾಗಿರುವ ಮೂವರು ಆರೋಪಿಗಳ ವಿಚಾರಣೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತೀವ್ರಗೊಳಿಸಿದೆ.

ಪರಪ್ಪನ ಅಗ್ರಹಾರ ಜೈಲಿನ ಮನೋವೈದ್ಯ ನಾಗರಾಜ್, ಸಶಸ್ತ್ರ ಮೀಸಲು ಪಡೆಯ ಎಎಸ್‌ಐ ಚಾಂದ್ ಪಾಷಾ ಹಾಗೂ ವಿದೇಶದಲ್ಲಿ ತಲೆಮರೆಸಿಕೊಂಡಿರುವ ಆರೋಪಿ ಜುನೈದ್ ಅಹಮದ್‌ನ ತಾಯಿ ಅನೀಸ್ ಫಾತೀಮಾ ಅವರ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿರುವ ಎನ್‌ಐಎ, ಲಕ್ಷಾಂತರ ರೂಪಾಯಿ ವಹಿವಾಟು ನಡೆಸಿರುವುದನ್ನು ಪತ್ತೆ ಹಚ್ಚಿದೆ.

ಮೂವರು ಆನ್‌ಲೈನ್, ನಗದು ಹಾಗೂ ಕೊಡುಗೆ ರೂಪದಲ್ಲಿ ಸ್ವೀಕರಿಸಿದ್ದಾರೆ. ಉಗ್ರ ಟಿ.ನಾಸೀರ್ ಸೂಚನೆ ಮೇರೆಗೆ ಹಣ ಪಡೆದಿರುವುದು ಗೊತ್ತಾಗಿದೆ. ಚಾಂದ್ ಪಾಷಾ ಅವರು ತನ್ನ ಖಾತೆ ಮಾತ್ರವಲ್ಲದೇ ಪುತ್ರನ ಖಾತೆಗೂ ಹಣ ಹಾಕಿಸಿಕೊಂಡಿದ್ದಾರೆ.

ನಾಗರಾಜು ಸಹಾಯಕಿ ಪವಿತ್ರಾ ಅವರ ಖಾತೆಯಲ್ಲಿ ಸುಮಾರು ₹70 ಲಕ್ಷ ವಹಿವಾಟು ನಡೆದಿರುವುದು ಪತ್ತೆಯಾಗಿದೆ. ದೇಶ, ವಿದೇಶಗಳಿಂದ ಆರೋಪಿಗಳಿಗೆ ಹಣ ಸಂದಾಯವಾಗಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ.

ಚಾಂದ್ ಪಾಷಾ ಮನೆಯಲ್ಲಿ ಎನ್‌ಐಎ ಶೋಧ ನಡೆಸಿದ ವೇಳೆ ಪತ್ತೆಯಾದ ಹಾರ್ಡ್‌ಡಿಸ್ಕ್, ಪೆನ್‌ಡ್ರೈವ್ ಹಾಗೂ ಡೈರಿಯಲ್ಲಿ ಮಹತ್ವದ ಮಾಹಿತಿ ಲಭ್ಯವಾಗಿದೆ.



ಜೈಲಿಗೆ ಬರುವ ಶಂಕಿತ ಉಗ್ರರು, ಕೈದಿಗಳು ಹಾಗೂ ಪ್ರಭಾವಿಗಳಿಗೆ 2012ರಿಂದ ಮೊಬೈಲ್ ಸೇರಿ ಇತರೆ ವಸ್ತುಗಳನ್ನು ಪೂರೈಸಿ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡಿರುವುದು ಎನ್‌ಐಎ ವಿಚಾರಣೆ ಗೊತ್ತಾಗಿದೆ. ಅಕ್ರಮ ಸಂಪಾದನೆಯಿಂದ ಬೇರೆ ಕಡೆ ಆಸ್ತಿ, ನಿವೇಶನ ಹೊಂದಿರುವ ಬಗ್ಗೆ ಎನ್‌ಐಎ ಪರಿಶೀಲನೆ ನಡೆಸುತ್ತಿದೆ.

ಸಾಲ: ಇಬ್ಬರಿಗೆ ಚಾಕು ಇರಿತ

ಬೆಂಗಳೂರು: ನೆಲಮಂಗಲದ ವಿನಾಯಕ ಜ್ಯೂಸ್ ಸೆಂಟರ್‌ನಲ್ಲಿ ಸಾಲದ ಹಣ ನೀಡುವ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಇಬ್ಬರು ಯುವಕರಿಗೆ ಚಾಕುವಿನಿಂದ ಇರಿಯಲಾಗಿದೆ.

ಗಾಯಗೊಂಡಿರುವ ಚೇತನ್, ಸುದೀಪ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸುದೀಪ್ ದೂರು ಆಧರಿಸಿ ನೆಲಮಂಗಲ ಪೊಲೀಸರು ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

'ಹಲ್ಲೆಗೊಳಗಾದ ಸುದೀಪ್ ಎರಡು ವರ್ಷದ ಹಿಂದೆ ಯುವತಿಯನ್ನು ಪ್ರೀತಿಸುತ್ತಿದ್ದ. ಆಕೆಗೆ ₹2 ಸಾವಿರ ಹಣ ಕೊಟ್ಟಿದ್ದ. ಇತ್ತೀಚಿಗೆ ಆಕೆ ಅಂತರ ಕಾಯ್ದುಕೊಂಡಿದ್ದಳು. ಹಾಗಾಗಿ ಹಣವನ್ನು ನೀಡುವಂತೆ ಕೇಳಿದ್ದಾನೆ. ಆಕೆ ₹1 ಸಾವಿರ ಹಣವನ್ನು ಯುಪಿಐ ಮೂಲಕ ಕಳಿಸಿದ್ದಾಳೆ. ಉಳಿದ ಹಣವನ್ನು ನೀಡುವಂತೆ ಕರೆ ಮಾಡಿ ಕೇಳಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಈ ವಿಚಾರವನ್ನು ಯುವತಿ ತನ್ನ ಸ್ನೇಹಿತರಿಗೆ ಹೇಳಿದ್ದಾಳೆ. ಜುಲೈ 9 ರಂದು ಸುದೀಪ್ ಕೆಲಸ ಮಾಡುತ್ತಿದ್ದ ಜ್ಯೂಸ್ ಅಂಗಡಿ ಬಳಿಗೆ ಬಂದ ನಾಲ್ವರ ತಂಡ, ಯುಪಿಐ ಮೂಲಕ ₹1 ಸಾವಿರ ಹಣ ಹಾಕಿದ್ದಾರೆ. ಕೆಲ ಹೊತ್ತಿನ ಬಳಿಕ ಜ್ಯೂಸ್ ಅಂಗಡಿ ಬಳಿಗೆ ಬಂದ ಅದೇ ಯುವಕರು ಗಲಾಟೆ ಆರಂಭಿಸಿದ್ದಾರೆ. ಆಗ ಜಗಳ ಬಿಡಿಸಲು ಬಂದ ಚೇತನ್ ಹಾಗೂ ಸುದೀಪ್‌ಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ' ಎಂದಿದ್ದಾರೆ.

'ಕೊಟ್ಟಿದ್ದ ಹಣ ವಾಪಸ್ ಕೇಳಿದ್ದಕ್ಕೆ ಯುವತಿ ಕಡೆಯ ನಾಲ್ವರು ಯುವಕರು ಬಂದು ಹಣ ನೀಡಿ, ಗಲಾಟೆ ಮಾಡಿ ಹೋಗಿದ್ದರು. ಕೆಲ ಹೊತ್ತಿನ ಬಳಿಕ ಮತ್ತೆ ಬಂದು ಗಲಾಟೆ ಮಾಡುತ್ತಿದ್ದರು. ಅದನ್ನು ತಡೆಯಲು ಹೋದ ಇಬ್ಬರಿಗೂ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ' ಎಂದು ಸುದೀಪ್ ದೂರು ನೀಡಿದ್ದಾರೆ.

'ಕಿತ್ತೂರು– ಕಲ್ಯಾಣ'ದ ಯುವಜನರಿಗೆ ಪೂರಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಕೆಲಸಗಳನ್ನೂ ಸರ್ಕಾರವೇ ಮಾಡುವುದು ಕಷ್ಟ. ಖಾಸಗಿಯವರ ಯಶಸ್ವಿ ಕೈಗಾರಿಕಾ ಮಾದರಿಗಳಿಂದ ಸರ್ಕಾರವೂ ಕಲಿಯಬಹುದಾಗಿದೆ' ಎಂದು ಕೌಶಲ್ಯಾಭಿವೃದ್ಧಿ, ಜೀವನೋಪಾಯ ಖಾತೆ ಸಚಿವ ಡಾ. ಶರಣಪ್ರಕಾಶ ಪಾಟೀಲ ತಿಳಿಸಿದರು.

ಪಿಇಎಸ್ ವಿಶ್ವವಿದ್ಯಾಲಯದಲ್ಲಿ ನಡೆದ ಬಜಾಜ್ ಎಂಜಿನಿಯರಿಂಗ್ ಕೌಶಲ ತರಬೇತಿ (ಬೆಸ್ಟ್) ಕೇಂದ್ರದ ಮೊದಲ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು. 'ಬೆಸ್ಟ್' ಕೇಂದ್ರವು, ಬಜಾಜ್ ಆಟೊ ಲಿಮಿಟೆಡ್‌ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ-(ಸಿಎಸ್‌ಆರ್) ಉಪಕ್ರಮವಾಗಿದೆ.

'ಬಜಾಜ್ ಆಟೊ ಮತ್ತು ಪಿಇಎಸ್ ವಿಶ್ವವಿದ್ಯಾಲಯದ ನಡುವಿನ ಈ ಸಹಯೋಗವು ಸಾರ್ವಜನಿಕ-ಖಾಸಗಿ ಸಹಭಾಗಿತ್ವಕ್ಕೆ ಉತ್ತಮ ಉದಾಹರಣೆಯಾಗಿದೆ. ಕೌಶಲಾಭಿವೃದ್ಧಿಗೆ ಹೆಚ್ಚು ಒತ್ತು ನೀಡಲು ಹಾಗೂ ಯುವಜನರನ್ನು ಸಬಲೀಕರಣಗೊಳಿಸಲು ಇಂಥ ಸಹಯೋಗದ ಪ್ರಯತ್ನಗಳಿಗೆ ಆದ್ಯತೆ ನೀಡಲಾಗುವುದು' ಎಂದು ಭರವಸೆ ನೀಡಿದರು.

'ಇಂಥ ಯೋಜನೆಗಳು ವಿಶೇಷವಾಗಿ ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನಕಾರಿ. ಆ ಭಾಗದ ಜಿಲ್ಲೆಗಳ ಯುವಜನರನ್ನು ಉನ್ನತೀಕರಿಸುವ ಮಾದರಿಯಾಗಿದೆ' ಎಂದರು.

'ಕೌಶಲ ಅಭಿವೃದ್ಧಿ ಮತ್ತು ಉದ್ಯೋಗದ ಗುರಿಗಳನ್ನು ಸಾಧಿಸಲು ಬಲವಾದ ಸರ್ಕಾರಿ-ಶೈಕ್ಷಣಿಕ-ಉದ್ಯಮ ಪಾಲುದಾರಿಕೆಯನ್ನು ಸರ್ಕಾರ ಇನ್ನಷ್ಟು ಅನ್ವೇಷಿಸಬೇಕಾಗಿದೆ' ಎಂದು ಅಭಿಪ್ರಾಯಪಟ್ಟರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಡಿ. ಜವಾಹರ್, ಕುಲಪತಿ ಜೆ. ಸೂರ್ಯ ಪ್ರಸಾದ್ ಮತ್ತು ಬಜಾಜ್ ಆಟೊ ಲಿಮಿಟೆಡ್‌ನ ಸಿಎಸ್‌ಆರ್ ಉಪಾಧ್ಯಕ್ಷ ಸುಧಾಕರ್ ಗುಡಿಪತಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕೈದಿ ಹೊಟ್ಟೆಯಲ್ಲಿ ಮೊಬೈಲ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಸೋಗಾನೆಯ ಕೇಂದ್ರ ಕಾರಾಗೃಹದಲ್ಲಿರುವ ಕೈದಿಯೊಬ್ಬನ ಹೊಟ್ಟೆಯಲ್ಲಿ ಮೊಬೈಲ್ ಫೋನ್ ಪತ್ತೆಯಾಗಿದೆ. ಮೆಗ್ಗಾನ್ ಆಸ್ಪತ್ರೆಯ ವೈದ್ಯರು ಶುಕ್ರವಾರ ಶಸ್ತ್ರಚಿಕಿತ್ಸೆ ನಡೆಸಿ ಹೊರತೆಗೆದಿದ್ದಾರೆ.

ಕೈದಿ ದೌಲತ್ ಖಾನ್ ಅಲಿಯಾಸ್ ಗುಂಡಾ (30) ಎಂಬಾತನ ಹೊಟ್ಟೆಯಲ್ಲಿ ಒಂದು ಇಂಚು ಅಗಲ ಮತ್ತು ಮೂರು ಇಂಚು ಉದ್ದದ ಕೀ ಪ್ಯಾಡ್ ಮೊಬೈಲ್ ಫೋನ್ ದೊರೆತಿದೆ.

ಕಲ್ಲು ನುಂಗಿದ್ದೇನೆ ಎಂದಿದ್ದ: ಪ್ರಕರಣವೊಂದರಲ್ಲಿ ಈತನಿಗೆ ಶಿವಮೊಗ್ಗದ ನ್ಯಾಯಾಲಯ 10 ವರ್ಷ ಜೈಲು ಶಿಕ್ಷೆ ವಿಧಿಸಿದೆ. ದೌಲತ್ ಖಾನ್ ಜೂನ್ 24ರಂದು ಜೈಲಿನ ಆಸ್ಪತ್ರೆಗೆ ಬಂದು, ಕಲ್ಲು ನುಂಗಿರುವುದಾಗಿ ವೈದ್ಯರಿಗೆ ತಿಳಿಸಿದ್ದ. ಅದಕ್ಕೆ ಅವರು ಔಷಧಿ ಕೊಟ್ಟಿದ್ದರು.

ಹೊಟ್ಟೆ ನೋವು ಹೆಚ್ಚಾದ ಕಾರಣ ಪರೀಕ್ಷೆಗೆ ಒಳಪಡಿಸಿದ್ದ ವೈದ್ಯರು, ಹೆಚ್ಚಿನ ಚಿಕಿತ್ಸೆಗಾಗಿ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿದ್ದರು. ಎಕ್ಸ್‌ರೇ ಮಾಡಿದಾಗ ದೌಲತ್‌ನ ಹೊಟ್ಟೆಯಲ್ಲಿ ವಸ್ತುವೊಂದು ಇರುವುದು ಗೊತ್ತಾಗಿತ್ತು. ಶಸ್ತ್ರಚಿಕಿತ್ಸೆ ನಡೆಸಿದಾಗ ಮೊಬೈಲ್ ಫೋನ್ ಪತ್ತೆಯಾಗಿದೆ.

ನಿಷೇಧವಿದ್ದರೂ ಜೈಲಿನೊಳಗೆ ಮೊಬೈಲ್ ಫೋನ್ ಇಟ್ಟುಕೊಂಡ ಕುರಿತು ತನಿಖೆ ನಡೆಸುವಂತೆ ಕೇಂದ್ರ ಕಾರಾಗೃಹದ ಅಧೀಕ್ಷಕ ಪಿ. ರಂಗನಾಥ್ ಅವರು ಇಲ್ಲಿನ ತುಂಗಾ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.



ಕೈದಿ ದೌಲತ್ ಖಾನ್ ಹೊಟ್ಟೆಯಲ್ಲಿ ಪತ್ತೆಯಾಗಿರುವ ಮೊಬೈಲ್ ಫೋನ್

'ಜಾಗತಿಕ ಮಟ್ಟದಲ್ಲಿ ಕನ್ನಡ ಸಾಹಿತ್ಯದ ಚರ್ಚೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾನು ಮುಷ್ತಾಕ್, ದೀಪಾ ಭಾಸ್ತಿ ಅವರಿಂದಾಗಿ ಕನ್ನಡ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ಚರ್ಚೆ ಆಗುತ್ತಿದೆ. ಕನ್ನಡದ ಮೇರು ಕೃತಿಗಳು ವಿಶ್ವಮಟ್ಟದಲ್ಲಿ ಪರಿಚಯವಾಗಬೇಕಾದರೆ ಇಂಗ್ಲಿಷ್ ಭಾಷಾಂತರ ಅಗತ್ಯ' ಎಂದು ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಹೇಳಿದರು.

ಸಪ್ನ ಬುಕ್ ಹೌಸ್ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 15 ಪುಸ್ತಕಗಳ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕುವೆಂಪು ಅವರ ಮಲೆಗಳಲ್ಲಿ ಮದುಮಗಳು, ಶಿವರಾಮ ಕಾರಂತರ ಚೋಮನದುಡಿ ಸೇರಿದಂತೆ ಕನ್ನಡದ ಹಲವು ಮಹತ್ವದ ಕೃತಿಗಳು ಜಾಗತಿಕ ಮಟ್ಟದ ಪ್ರಶಸ್ತಿಗಳಿಗೆ ಅರ್ಹವಾಗಿವೆ. ಆದರೆ 600ರಿಂದ 700 ಪುಟದ ಈ ಕೃತಿಗಳು ಭಾಷಾಂತರಗೊಂಡಾಗ 150 ಪುಟಗಳಿಗೆ ಇಳಿಸಲಾಗಿದೆ. ಕನ್ನಡ ಸಾಹಿತ್ಯದ ಮೌಲ್ಯ ಜಾಗತಿಕ ಮಟ್ಟದಲ್ಲಿ ಸಿಗಬೇಕಾದರೆ ಸಮರ್ಪಕವಾಗಿ ಭಾಷಾಂತರ ಮಾಡಬೇಕು' ಎಂದರು.

'ಇತ್ತೀಚೆಗೆ ಸೃಜನಶೀಲ ಸಾಹಿತ್ಯಕ್ಕೆ ಸಿಗುತ್ತಿರುವ ಮಹತ್ವ ವೈಚಾರಿಕ ಸಾಹಿತ್ಯ, ವಿಮರ್ಶೆಗೂ ಸಿಗುತ್ತಿದೆ. ಪುಸ್ತಕಗಳನ್ನು ಓದುವವರ ಸಂಖ್ಯೆ ಕಡಿಮೆ ಆಗುತ್ತಿದೆ ಎನ್ನುವುದರ ನಡುವೆ ಒಂದೇ ವೇದಿಕೆಯಲ್ಲಿ 15 ಪುಸ್ತಕಗಳು ಜನಾರ್ಪಣೆ ಆಗುತ್ತಿರುವುದು ಪುಸ್ತಕ ಓದುವವರ ಸಂಖ್ಯೆಯು ಹೆಚ್ಚುತ್ತಿದೆ ಎಂಬುದಕ್ಕೆ ಸಾಕ್ಷಿ' ಎಂದು ಹೇಳಿದರು.

'ಕನ್ನಡಪ್ರಭ' ಪುರವಣಿ ಸಂಪಾದಕ ಗಿರೀಶ್‌ರಾವ್ ಹತ್ವಾರ್ (ಜೋಗಿ), ಲೇಖಕ ಡಿ.ವಿ.ಗುರುಪ್ರಸಾದ್, ಜಯಪ್ರಕಾಶ್ ನಾಗತಿಹಳ್ಳಿ, ಸಪ್ನ ಬುಕ್ ಹೌಸ್‌ನ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ, ಆರ್. ದೊಡ್ಡೇಗೌಡ ಉಪಸ್ಥಿತರಿದ್ದರು.



ಸಪ್ನ ಪುಸ್ತಕ ಮಳಿಗೆಯಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗಿರೀಶ್ ಕಾಸರವಳ್ಳಿ ಮಾತನಾಡಿದರು. ಡುಂಡಿರಾಜ್, ಜೋಗಿ, ಡಿ.ವಿ.ಗುರುಪ್ರಸಾದ್, ಎಂ.ಕೆ.ಮಂಜುನಾಥ ಮತ್ತು ಜಯಪ್ರಕಾಶ್ ನಾಗತಿಹಳ್ಳಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

SAKRA WORLD HOSPITAL
JV by SECOM & TOYOTA TSUSHO, JAPAN

ನಮ್ಮ ಹೃದ್ರೋಗ ವಿಜ್ಞಾನ ತಂಡದಲ್ಲಿರುವ ಅತ್ಯಾಧುನಿಕ ತಂತ್ರಜ್ಞಾನವೆಂದರೆ – ನಮ್ಮ ವೈದ್ಯರು

ತಂತ್ರಜ್ಞಾನ ಎಷ್ಟೇ ಮುಂದುವರೆದಿದ್ದರೂ ರೋಗಿಗಳನ್ನು ಕಾಪಾಡುವಲ್ಲಿ ವೈದ್ಯರ ಪಾತ್ರವೇ ಅತ್ಯಂತ ಮುಖ್ಯವಾದುದು ಎಂದು ಸಾಕ್ರ ವರ್ಲ್ಡ್ ಹಾಸ್ಪಿಟಲ್ ದೃಢವಾಗಿ ನಂಬಿದೆ. ನಮ್ಮ ವಿಶ್ವ-ದರ್ಜೆಯ ಸಾಕ್ರ ಹೃದ್ರೋಗ ವಿಜ್ಞಾನ ತಂಡಕ್ಕೆ **ಡಾ. ಪ್ರದೀಪ್ ಕುಮಾರ್ ಡಿ.**, ಸೀನಿಯರ್ ಕನ್ಸಲ್ಟೆಂಟ್ – ಕಾರ್ಡಿಯಾಲಜಿ, ಎಂಡಿ, ಡಿಎಂ (ಕಾರ್ಡಿಯಾಲಜಿ) ಹೊಸದಾಗಿ ಸೇರುತ್ತಿದ್ದಾರೆ. ಇವರಿಗೆ ನಮ್ಮ ಹೃತ್ಪೂರ್ವಕ ಸ್ವಾಗತ.



ಡಾ. ಸುನಿಲ್ ಕುಮಾರ್ ಎನ್.ಕೆ.
ಸೀನಿಯರ್ ಕನ್ಸಲ್ಟೆಂಟ್ ಮತ್ತು ಚೀಫ್, ಕಾರ್ಡಿಯಾಕ್ ಅನಸ್ತೀಸ್ಯ
ಎಂಡಿ (ಅನಸ್ತೀಸ್ಯಾಲಜಿ)
ಪಿಡಿಸಿಸಿ (ಕಾರ್ಡಿಯಾಕ್ ಅನಸ್ತೀಸ್ಯಾಲಜಿ),
ಫೆಲೋಶಿಪ್ – ಟ್ರಾನ್ಸ್‌ಈಸೋಫೆಜಿಯಲ್ ಇಕೊಕಾರ್ಡಿಯಾಗ್ರಫಿ

ಡಾ. ಶ್ರೀಕಾಂತ್ ಶೆಟ್ಟಿ
ಡೈರೆಕ್ಟರ್ ಮತ್ತು ಎಚ್‌ಒಡಿ – ಕಾರ್ಡಿಯಾಲಜಿ
ಎಂಡಿ (ಜನರಲ್ ಮೆಡಿಸಿನ್),
ಡಿಎಂ (ಕಾರ್ಡಿಯಾಲಜಿ)
ಫೆಲೋ – ಯೂರೋಪಿಯನ್ ಸೊಸೈಟಿ ಆಫ್ ಕಾರ್ಡಿಯಾಲಜಿ

ಡಾ. ಪ್ರದೀಪ್ ಕುಮಾರ್ ಡಿ.
ಸೀನಿಯರ್ ಕನ್ಸಲ್ಟೆಂಟ್ – ಕಾರ್ಡಿಯಾಲಜಿ
ಎಂಡಿ, ಡಿಎಂ (ಕಾರ್ಡಿಯಾಲಜಿ)

ಡಾ. ಆದಿಲ್ ಸಾದಿಕ್
ಡೈರೆಕ್ಟರ್ ಮತ್ತು ಹೆಡ್ – ಕಾರ್ಡಿಯೊ ತೊರಾಸಿಕ್ ಮತ್ತು ವ್ಯಾಸ್ಕ್ಯುಲರ್ ಸರ್ಜರಿ
ಎಂಎಸ್ (ಜನರಲ್ ಸರ್ಜರಿ),
ಎಂಸಿಎಚ್ (ಸಿಟಿವಿಎಸ್), ಎಫ್‌ಎಸಿಎಸ್ (ಯುಎಸ್‌ಎ),
ಎಫ್‌ಎಂಐಸಿಎಸ್ (ಯುಎಸ್‌ಎ)

ಡಾ. ದೀಪಕ್ ಗೌಡ
ಕನ್ಸಲ್ಟೆಂಟ್ – ಕಾರ್ಡಿಯೊ ತೊರಾಸಿಕ್ ಮತ್ತು ವ್ಯಾಸ್ಕ್ಯುಲರ್ ಸರ್ಜರಿ
ಡಿಎನ್‌ಬಿ (ಕಾರ್ಡಿಯೊ ತೊರಾಸಿಕ್ ಸರ್ಜರಿ),
ಎಂಎನ್‌ಎಎಂಎಸ್, ಎಫ್‌ಎಸಿಎಸ್ (ಕೆನಡ)

• ರೊಬೊಟಿಕ್ ಸಹಾಯದ ಹೃದಯ ಶಸ್ತ್ರ ಚಿಕಿತ್ಸೆ • ಸಂಕೀರ್ಣವಾದ ಆ್ಯಂಜಿಯೊಪ್ಲಾಸ್ಟಿಗಳು • ಟಿಎವಿಆರ್‌ಗಳು • ಮೈಟ್ರ ಕ್ಲಿಪ್ • ಲೀಡ್‌ಲೆಸ್ ಪೇಸ್‌ಮೇಕರ್ • 24/7 ಹೃದಯದ ತುರ್ತು ಚಿಕಿತ್ಸೆ
• ರೊಬೊಟಿಕ್ ವಾಲ್ವ್ ಮತ್ತು ಕನಿಷ್ಠ ಛೇದಿಸಿ ವಾಲ್ವ್ ಬದಲಿಸುವುದು ಮತ್ತು ದುರಸ್ತಿ • ಅತ್ಯಾಧುನಿಕ ಕಾರ್ಡಿಯಾಕ್ ಇಮೇಜಿಂಗ್ ಮತ್ತು ಟ್ರಾನ್ಸ್‌ಈಸೋಫೆಜಿಯಲ್ ಇಕೊಕಾರ್ಡಿಯಾಗ್ರಫಿ

ಭೇಟಿಗಾಗಿ ಕರೆ ಮಾಡಿ: 080 4969 4969 | info@sakraworldhospital.com | www.sakraworldhospital.com
ಸರ್ವೇ ನಂ. 52/2 ಮತ್ತು 52/3, ದೇವರಬೀಸನಹಳ್ಳಿ, ವರ್ತೂರು ಹೋಬಳಿ, ಇಂಟೆಲ್ ಎದುರು, ಹೊರ ವರ್ತುಲ ರಸ್ತೆ, ಬೆಂಗಳೂರು – 560 103.

* ಇದು, ವೃತ್ತಿ ವಿಳಾಸ ಬದಲಾದಾಗ / ಬೇರೊಂದು ವೃತ್ತಿಗೆ ಹೋಗುವಾಗ / ವೃತ್ತಿಯ ಬಗ್ಗೆ ಬದಲಾದಾಗ ಮಾತ್ರ ನೀಡಬೇಕಾದ ಪ್ರಕಟಣೆ. ಸಾರ್ವಜನಿಕ ಹಿತಾಸಕ್ತಿಗಾಗಿ ಪ್ರಕಟಿಸಲಾಗಿದೆ.



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ನಿಮ್ಮ ಆಸ್ತಿ ನಮ್ಮ ಗ್ಯಾರಂಟಿ
ಇ-ಖಾತಾ ಪಡೆಯಿರಿ ನಿಮ್ಮ ಆಸ್ತಿಯನ್ನು ರಕ್ಷಿಸಿಕೊಳ್ಳಿ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ವಿಶೇಷ ಇ-ಖಾತಾ ಆಂದೋಲನ

2025ರ ಜುಲೈ 1 ರಿಂದ 31 ರವರೆಗೆ
ಬೆಂಗಳೂರಿನಲ್ಲಿ ನಡೆಯುವ ಇ-ಖಾತಾ ಅಭಿಯಾನದಲ್ಲಿ ಪಾಲ್ಗೊಳ್ಳಿ!!

ಜನಸೇವಕರಿಂದ ಸೇವೆ ಪಡೆಯಲು ಕರೆ ಮಾಡಿ
080 - 4920 3888
ಅಥವಾ
https://janasevaka.karnataka.gov.in

ಜನಸೇವಕ


ಮನೆಯಲ್ಲೇ ಕುಳಿತು ಆನ್ ಲೈನ್ ಮೂಲಕ ಅಂತಿಮ ಇ-ಖಾತಾವನ್ನು https://www.bbmpeaasthi.karnataka.gov.in ನಿಂದಲೂ ಪಡೆಯಬಹುದು.

ಇವುಗಳೊಂದಿಗೆ ಸಿದ್ಧರಾಗಿರಿ:
- ಮಾಲೀಕರ ಆಧಾರ್
- ಆಸ್ತಿ ತೆರಿಗೆ ಎಸ್.ಎ.ಎಸ್. ಅರ್ಜಿ ಸಂಖ್ಯೆ
- ಸ್ವತ್ತಿನ ಕ್ರಯ/ನೋಂದಾಯಿತ ಪತ್ರ ಸಂಖ್ಯೆ (ಕಾವೇರಿ ತಂತ್ರಾಂಶದಿಂದ ವಿದ್ಯುನ್ಮಾನವಾಗಿ ಪಡೆದುಕೊಳ್ಳುತ್ತದೆ)
- ಬೆಸ್ಕಾಂ ಖಾತೆ ಸಂಖ್ಯೆ (ಖಾಲಿ ನಿವೇಶನಗಳಿಗೆ ಅಗತ್ಯವಿಲ್ಲ)
- ಸ್ವತ್ತಿನ ಛಾಯಾಚಿತ್ರ

ಇ-ಖಾತಾ ಸಂಬಂಧಿತ ವೀಡಿಯೋವನ್ನು ಕೆಳಗಿನ ಲಿಂಕ್ ನಿಂದ ವೀಕ್ಷಿಸಬಹುದು.
https://tinyurl.com/36suwvn2







ಮಾನ್ಯ ಉಪಮುಖ್ಯಮಂತ್ರಿಗಳಾದ **ಶ್ರೀ ಡಿ.ಕೆ. ಶಿವಕುಮಾರ್** ಅವರು ಹಾಗೂ ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರಾದ **ಶ್ರೀ ರಾಮಲಿಂಗಾರೆಡ್ಡಿ** ಅವರು ಇ-ಖಾತಾ ವಿತರಿಸುತ್ತಿರುವುದು.

ಜನಸೇವಕನಿಗೆ ಪಾವತಿಸಬೇಕಾದ ಮೊತ್ತ
ಇ-ಖಾತಾ ಅರ್ಜಿಗೆ : ರೂ. 45/-
ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಲು (ಪ್ರತಿ ಪುಟಕ್ಕೆ) : ರೂ. 5/-
ನಿಮ್ಮ ಮನೆ ಬಾಗಿಲಿಗೆ ಜನಸೇವಕನ ಸೇವಾ ಶುಲ್ಕ : ರೂ. 115/-

ಯಾವುದೇ ಬಿಬಿಎಂಪಿ ಕಚೇರಿಗೆ ಭೇಟಿ ನೀಡಬೇಡಿ ಅಥವಾ ಕರೆ ಮಾಡಬೇಡಿ.

ಇ-ಖಾತಾ ಸಹಾಯವಾಣಿ ಸಂಖ್ಯೆ: **94806 83695**

ದ್ವಿಚಕ್ರ ವಾಹನ ಕಳ್ಳರ ಪತ್ತೆ ಸವಾಲು

ನಂಬರ್ ಪ್ಲೇಟ್, ಎಂಜಿನ್ ಸಂಖ್ಯೆ ಬದಲಿಸಿ ಹೊರ ರಾಜ್ಯದಲ್ಲಿ ಮಾರಾಟ

• ಆದಿತ್ಯ ಕೆ.ಎ.

ಬೆಂಗಳೂರು: ದ್ವಿಚಕ್ರ ವಾಹನ ಕಳ್ಳರ ತಂಡಗಳು ನಗರದಲ್ಲಿ ಮತ್ತೆ ಸಕ್ರಿಯವಾಗಿವೆ. ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳಿಂದ ರಾಜಧಾನಿಗೆ ಬಂದಿರುವ ಕಳ್ಳರು, ಸ್ಥಳೀಯ ಆರೋಪಿಗಳ ನೆರವು ಪಡೆದು ಕ್ಷಣಾರ್ಧದಲ್ಲಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿಕೊಂಡು ಪರಾರಿ ಆಗುತ್ತಿದ್ದಾರೆ.

ರಸ್ತೆ ಬದಿಯಲ್ಲಿ ದ್ವಿಚಕ್ರ ವಾಹನವನ್ನು ನಿಲುಗಡೆ ಮಾಡಿ, ಅಂಗಡಿಗೆ ತೆರಳಿ ವಾಪಸ್ ಬರುವಷ್ಟರಲ್ಲಿಯೇ ವಾಹನಗಳು ಕಳ್ಳತನ ಆಗುತ್ತಿವೆ. ಕಳ್ಳತನವಾದ ವಾಹನಗಳ ಪತ್ತೆ ಕಾರ್ಯವು ನಗರ ಪೊಲೀಸರಿಗೆ ತಲೆನೋವಾಗಿ ಪರಿಣಮಿಸಿದೆ. ದ್ವಿಚಕ್ರ ವಾಹನ ಕಳ್ಳರನ್ನು ಪತ್ತೆಹಚ್ಚುವ ಕಾರ್ಯವನ್ನು ಚುರುಕು ಮಾಡುವಂತೆ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಎಲ್ಲ ಠಾಣೆಗಳ ಪೊಲೀಸರಿಗೆ ಸೂಚನೆ ನೀಡಿದ್ದಾರೆ.

ಪೂರ್ವ, ಪಶ್ಚಿಮ, ಉತ್ತರ ಹಾಗೂ ಆಗ್ನೇಯ ವಿಭಾಗದಲ್ಲಿ ಹೆಚ್ಚು ಕಳ್ಳತನ ಪ್ರಕರಣಗಳು ನಡೆಯುತ್ತಿವೆ. ಕಳೆದ ಎರಡೂವರೆ ವರ್ಷಗಳ ಅಂಕಿಅಂಶಗಳನ್ನು ಗಮನಿಸಿದರೆ ಕಳ್ಳತನ ಆಗಿರುವ ದ್ವಿಚಕ್ರ ವಾಹನಗಳ ಪೈಕಿ, ಪತ್ತೆ ಆಗುತ್ತಿರುವ ದ್ವಿಚಕ್ರ ವಾಹನಗಳ ಸಂಖ್ಯೆ ತೀರಾ ಕಡಿಮೆಯಿದೆ. ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯಲ್ಲಿ ಕಳೆದ ಎರಡೂವರೆ ವರ್ಷದಲ್ಲಿ 13,394 ದ್ವಿಚಕ್ರ ವಾಹನ ಕಳ್ಳತನ ಆಗಿವೆ. ಆ ಪೈಕಿ 4,605 ವಾಹನಗಳನ್ನಷ್ಟೇ ಪತ್ತೆಹಚ್ಚಿ ಪೊಲೀಸರು ಜಪ್ತಿ ಮಾಡಿದ್ದಾರೆ. ಉಳಿದ ದ್ವಿಚಕ್ರ ವಾಹನಗಳ ಸುಳಿವೇ ಸಿಕ್ಕಿಲ್ಲ.



ಕಳ್ಳತನವಾದ ದ್ವಿಚಕ್ರ ವಾಹನಗಳ ಪತ್ತೆ ಕಾರ್ಯವನ್ನು ಚುರುಕುಗೊಳಿಸುವಂತೆ ಕಮಿಷನರೇಟ್ ವ್ಯಾಪ್ತಿಯ ಎಲ್ಲ ಠಾಣೆಯ ಸಿಬ್ಬಂದಿಗೆ ಸೂಚಿಸಲಾಗಿದೆ
ಸೀಮಂತ್ ಕುಮಾರ್ ಸಿಂಗ್
ನಗರ ಪೊಲೀಸ್ ಕಮಿಷನರ್



ಪೊಲೀಸರ ಸಲಹೆಗಳು ಏನು?

- ಪಾರ್ಕಿಂಗ್ ಸ್ಥಳದಲ್ಲೇ ದ್ವಿಚಕ್ರ ವಾಹನ ನಿಲುಗಡೆ ಮಾಡಬೇಕು
- ವಾಹನದಲ್ಲಿ ಕೀ ಬಿಟ್ಟು ಹೋಗಬಾರದು. ಹ್ಯಾಂಡಲ್ ಲಾಕ್ ಬಳಸಬೇಕು
- ಬೆಳಕು ಹಾಗೂ ಸಿಸಿಟಿವಿ ಕ್ಯಾಮೆರಾಗಳ ಕಣ್ಗಾವಲು ಇರುವ ಸ್ಥಳಗಳಲ್ಲಿ ದ್ವಿಚಕ್ರ ವಾಹನ ನಿಲುಗಡೆ ಮಾಡಬೇಕು
- ಕಳ್ಳರು ನಕಲಿ ಕೀ ಬಳಸಿ ವಾಹನ ಕಳವು ಮಾಡಲು ಯತ್ನಿಸಿದರೆ ಎಚ್ಚರಿಕೆ ನೀಡುವಂತೆ ಸೈರನ್ ಅಳವಡಿಸಿಕೊಳ್ಳಬೇಕು

ದ್ವಿಚಕ್ರ ವಾಹನ ಕಳ್ಳತನ ಪ್ರಕರಣಗಳು

ವರ್ಷ	ದಾಖಲಾದ ಪ್ರಕರಣ	ಪತ್ತೆಯಾದ ಪ್ರಕರಣ
2023	5,908	2,157
2024	5,352	1,966
2025	2,134	482
	(ಜೂನ್ ಅಂತ್ಯಕ್ಕೆ)	

ಕದ್ದ ದಿನವೇ ಹೊರ ರಾಜ್ಯಕ್ಕೆ ಸಾಗಣೆ: ‘ಆಂಧ್ರಪ್ರದೇಶ ಹಾಗೂ ತೆಲಂಗಾಣದಿಂದ ಬಸ್‌ನಲ್ಲಿ ನಗರಕ್ಕೆ ಬರುವ ಕಳ್ಳರು, ನಕಲಿ ದಾಖಲೆಗಳನ್ನು ನೀಡಿ ಬಾಡಿಗೆ ಕೊಠಡಿ ಪಡೆದುಕೊಳ್ಳುತ್ತಾರೆ. ವಿವಿಧ ಬಡಾವಣೆಗಳಲ್ಲಿ ಓಡಾಟ ನಡೆಸಿ ರಾತ್ರಿ ವೇಳೆ ಮನೆಯಿಂದ ಹೊರ ಭಾಗದಲ್ಲಿ ನಿಲುಗಡೆ ಮಾಡುವ ದ್ವಿಚಕ್ರ ವಾಹನಗಳನ್ನು ಗುರುತಿಸುತ್ತಾರೆ. ಕೆಲವು ದಿನಗಳು ಕಳೆದ ಬಳಿಕ ಬಾಡಿಗೆ ಕೊಠಡಿ ಖಾಲಿ ಮಾಡುತ್ತಾರೆ. ಆಗ ನಕಲಿ ಕೀ ಬಳಸಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿಕೊಂಡು ತಮ್ಮ ರಾಜ್ಯಕ್ಕೆ ತೆರಳುತ್ತಿದ್ದಾರೆ. ಅಲ್ಲಿ ಪರಿಚಯಸ್ಥರಿಗೆ ಕಡಿಮೆ ದರಕ್ಕೆ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡುತ್ತಿದ್ದಾರೆ. ಇನ್ನೂ ಕೆಲವು ಆರೋಪಿಗಳು, ವಾಹನಗಳ ಬಿಡಿ ಭಾಗವನ್ನು ಕಳಚಿ ಮಾರಾಟ ಮಾಡುತ್ತಾರೆ. ಇದರಿಂದಾಗಿ ಕಳ್ಳತನವಾದ ವಾಹನಗಳ ಪತ್ತೆಹಚ್ಚುವುದು ಕಷ್ಟವಾಗಿದೆ’ ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.

ಆಂಧ್ರಪ್ರದೇಶದಿಂದ ಬಸ್‌ನಲ್ಲಿ ನಗರಕ್ಕೆ ಬಂದು, ನಕಲಿ ಕೀಗಳನ್ನು ಬಳಸಿ 32 ದ್ವಿಚಕ್ರ ವಾಹನ ಕಳ್ಳತನ ಮಾಡಿದ್ದ ಆರೋಪಿಯನ್ನು ಕಳೆದ ವಾರ ಎಚ್‌ಎಎಲ್ ಠಾಣೆಯ ಪೊಲೀಸರು ಆಂಧ್ರಪ್ರದೇಶದಲ್ಲಿ ಬಂಧಿಸಿದ್ದರು. ಈತನ ವಿಚಾರಣೆ ನಡೆಸಿದಾಗ, ನಗರದ ಕಳ್ಳರು ಆತನಿಗೆ ನೆರವು ನೀಡಿದ್ದು ಗೊತ್ತಾಗಿತ್ತು.

ದ್ವಿಚಕ್ರ ವಾಹನಗಳ ಕಳ್ಳತನದಲ್ಲಿ ಶತಕ ಬಾರಿಸಿದ್ದ ಅಂತರ ರಾಜ್ಯ ಕಳ್ಳನನ್ನು ಕೆಲವು ದಿನಗಳ ಹಿಂದೆ ಕೆ.ಆರ್. ಪುರ ಠಾಣೆಯ ಪೊಲೀಸರು ಬಂಧಿಸಿದ್ದರು. ಈತ ದುಬಾರಿ ಬೆಲೆಯ ಬೈಕ್‌ಗಳನ್ನು ಮಾತ್ರವೇ ಕಳ್ಳತನ ಮಾಡಿಕೊಂಡು ಆಂಧ್ರಪದೇಶಕ್ಕೆ ಕೊಂಡೊಯ್ದು ಮಾರಾಟ ಮಾಡುತ್ತಿದ್ದ.

ಕದ್ದ ದ್ವಿಚಕ್ರ ವಾಹನಗಳನ್ನು ನಂಬರ್ ಪ್ಲೇಟ್, ಎಂಜಿನ್ ಸಂಖ್ಯೆಯನ್ನು ಬದಲಿಸಿ ಹೊರ ರಾಜ್ಯಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಆರೋಪಿಗಳ ಪತ್ತೆ ಸವಾಲಾಗಿದೆ ಎಂದು ಪೊಲೀಸರು ಹೇಳಿದರು.

ಗಾಳಿ ಆಂಜನೇಯ ದೇಗುಲ: ಕಾನೂನು ಹೋರಾಟ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಬೆಂಗಳೂರಿನ ಗಾಳಿ ಆಂಜನೇಯಸ್ವಾಮಿ ದೇಗುಲವನ್ನು ಮುಜರಾಯಿ ಇಲಾಖೆ ವಶಕ್ಕೆ ಪಡೆಯಲು ಸರ್ಕಾರ ಮುಂದಾಗಿದೆ. ಇದರ ವಿರುದ್ಧ ನ್ಯಾಯಾಲಯ ಮತ್ತು ಜನ ಹೋರಾಟ ಎರಡನ್ನೂ ರೂಪಿಸಲಾಗುವುದು ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.



ತೇಜಸ್ವಿ ಸೂರ್ಯ

‘ಹಿಂದೂ ದೇಗುಲ ಅಲ್ಲಿನ ಭಕ್ತರಿಗೆ ಸೇರಿದೆ. ಜನ ಭಯ ಮತ್ತು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಕ್ಷುಲ್ಲಕ ಕಾರಣ ಸೃಷ್ಟಿಸಿ ದೇವಸ್ಥಾನಗಳ ಮೇಲೆ ಸರ್ಕಾರ ಕಣ್ಣಿಡುವುದು ಸರಿಯಲ್ಲ’ ಎಂದು ಸುದ್ದಿಗಾರರಿಗೆ ಶನಿವಾರ ಹೇಳಿದರು.

‘ಯಾವುದೇ ನೋಟಿಸ್ ಇಲ್ಲದೆ, ತನಿಖೆ ಮಾಡದೆ ಕೋಟ್ಯಂತರ ರೂಪಾಯಿ ಹುಂಡಿ ಮೇಲೆ ಸರ್ಕಾರ ಕಣ್ಣಿರಿಸಿದೆ. ದೇಗುಲದ ಟ್ರಸ್ಟಿ ಅವರೊಂದಿಗೆ ಮಾತನಾಡಿದ್ದೇನೆ. ಜಯನಗರದಲ್ಲಿ ಜನ ಹೋರಾಟವನ್ನೂ ರೂಪಿಸುತ್ತೇವೆ’ ಎಂದರು.

ಮಸೀದಿ ಮತ್ತು ಚರ್ಚ್‌ಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಧೈರ್ಯ ಇದೆಯೇ? ಹಿಂದೂಗಳು ಸುಮ್ಮನಿರುತ್ತಾರೆ ಎಂಬ ಕಾರಣಕ್ಕೆ ಅವರ ದೇಗುಲದ ಮೇಲೆ ಕಣ್ಣು ಹಾಕುವುದು ಸರಿಯಲ್ಲ ಎಂದು ಹೇಳಿದರು.


ಸುದ್ದಿ 2 ನಿಮಿಷ

ನಾಯಿಗಳ ಹೆಸರಿನಲ್ಲೂ ಲೂಟಿಗೆ ಯೋಜನೆ: ಅಶೋಕ

ಬೆಂಗಳೂರು: ‘ಬಿಬಿಎಂಪಿ ಮೂಲಕ ಬೀದಿನಾಯಿಗಳಿಗೆ ಬಿರಿಯಾನಿ ನೀಡುವ ಯೋಜನೆಯ ಹಿಂದೆ ಇರುವುದು ತೆರಿಗೆ ಹಣ ಲೂಟಿ ಹೊಡೆಯುವ ಉದ್ದೇಶ ಮಾತ್ರ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.

ಶನಿವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಬೀದಿನಾಯಿಗಳ ಉಪಟಳದಿಂದ ಮಕ್ಕಳಿಗೆ ತೊಂದರೆಯಾಗುತ್ತಿದೆ. ನಾಯಿಗಳ ಸಂಖ್ಯೆ ಕಡಿಮೆ ಮಾಡಬೇಕು ಎಂಬ ಉದ್ದೇಶದ ಯೋಜನೆ ಬಿಬಿಎಂಪಿಯಲ್ಲಿದೆ. ಅದನ್ನು ಮೊದಲು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲಿ’ ಎಂದರು.

‘ಬೀದಿನಾಯಿಗಳ ಬಗ್ಗೆ ಇವರಿಗೆ ಕಾಳಜಿ ಪ್ರಾಮಾಣಿಕವೇ ಆಗಿದ್ದರೆ, ಅವುಗಳಿಗಾಗಿ ಒಂದು ಆಸ್ಪತ್ರೆ ನಿರ್ಮಿಸಬಹುದಿತ್ತು. ಬೀದಿ ಬದಿಯಲ್ಲಿ ಬಿದ್ದಿರುವ ನಾಯಿ ಅಥವಾ ಅಪಘಾತಕ್ಕೊಳಗಾದ ನಾಯಿಗಳನ್ನು ತಂದು ಚಿಕಿತ್ಸೆ ನೀಡಬಹುದಿತ್ತು. ಅದನ್ನು ಬಿಟ್ಟು, ಬಿರಿಯಾನಿ ಹಾಕುವ ಅಗತ್ಯವೇನಿದೆ’ ಎಂದು ಪ್ರಶ್ನಿಸಿದರು.



‘ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿವೆ. ಉದ್ಯಾನಗಳ ನಿರ್ವಹಣೆ ಆಗುತ್ತಿಲ್ಲ. ಬಿಬಿಎಂಪಿ ಆಸ್ಪತ್ರೆಗಳಲ್ಲಿ ಸಿಬ್ಬಂದಿಗೆ ಸಂಬಳ ಕೊಡಲು ಹಣವಿಲ್ಲ. ಶಾಲೆಗಳ ಶಿಕ್ಷಕರಿಗೆ ಸಂಬಳ ನೀಡುತ್ತಿಲ್ಲ. ಯಾವುದಕ್ಕೂ ಹಣ ಇಲ್ಲ ಎಂದಾಗಿರುವಾಗ, ಇಂತಹ ದುಂದುವೆಚ್ಚದ ಯೋಜನೆ ಅಗತ್ಯವಿಲ್ಲ’ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಮಕ್ಕಳಿಗೆ ₹12.45, ನಾಯಿಗಳಿಗೆ ₹22’

ಬೆಂಗಳೂರು: ರಾಜ್ಯ ಸರ್ಕಾರವು ಪೌಷ್ಟಿಕ ಆಹಾರ, ಬಿಸಿಯೂಟ ಯೋಜನೆ ಅಡಿಯಲ್ಲಿ ಪ್ರತಿ ಮಗುವಿಗೆ ₹12.45 ವೆಚ್ಚ ಮಾಡುತ್ತಿದೆ. ಆದರೆ ಪ್ರತಿ ಬೀದಿ ನಾಯಿಗೆ ಬಿರಿಯಾನಿ ನೀಡಲು ₹22 ವೆಚ್ಚ ಮಾಡಲು ಮುಂದಾಗಿದೆ. ಬಡಮಕ್ಕಳಿಗೆ ಅನ್ಯಾಯ ಮಾಡುತ್ತಿದೆ’ ಎಂದು ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಅಸಮಾಧಾನ ವ್ಯಕ್ತಪಡಿಸಿದರು.

‘ಬಿಬಿಎಂಪಿಯು 2023ರಲ್ಲಿ ನಡೆಸಿದ್ದ ಸಮೀಕ್ಷೆ ಪ್ರಕಾರ, ನಗರದಲ್ಲಿ ಸುಮಾರು 4 ಲಕ್ಷ ಬೀದಿ ನಾಯಿಗಳಿವೆ. ಆದರೆ ಈಗ 4,000 ನಾಯಿಗಳಿಗಷ್ಟೇ ಚಿಕನ್ ಬಿರಿಯಾನಿ ನೀಡಲು ಸರ್ಕಾರ ಯೋಜನೆ ರೂಪಿಸಿ, ಉಳಿದ ಲಕ್ಷಾಂತರ ನಾಯಿಗಳನ್ನು ಕಡೆಗಣಿಸಿದೆ’ ಎಂದರು.

ಬೆಂಗಳೂರು ಕಿರುನಾಟಕೋತ್ಸವ: ಪ್ರದರ್ಶನ ನೀಡಿದ ಆರು ತಂಡಗಳು

ಖಾಲಿರಂಗ, ವೀಕೆಂಡ್ ಥಿಯೇಟರ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ ಥಿಯೇಟರ್ ಮತ್ತು ಅಶ್ವಘೋಷ ಥಿಯೇಟರ್ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಶನಿವಾರ ಆಯೋಜಿಸಿದ್ದ ‘ಬೆಂಗಳೂರು ಕಿರು-ನಾಟಕೋತ್ಸವ’ದ 5ನೇ ಆವೃತ್ತಿಯ ಅಂತಿಮ ಸ್ಪರ್ಧೆಯಲ್ಲಿ ಖಾಲಿರಂಗ ತಂಡದ ‘ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ’ (ತೀರ್ಪುಗಾರರ ಆಯ್ಕೆ) ಹಾಗೂ ಆನೇಕಲ್‌ನ ವೀಕೆಂಡ್ ಥಿಯೇಟರ್‌ನ ‘3/4’ (ಪ್ರೇಕ್ಷಕರ ಆಯ್ಕೆ) ಅತ್ಯುತ್ತಮ ನಾಟಕವಾಗಿ ಹೊರಹೊಮ್ಮಿದವು.

ಈ ತಂಡಗಳು ತಲಾ ₹10 ಸಾವಿರ ನಗದು ಹಾಗೂ ಪಾರಿತೋಷಕ ಪಡೆದವು. ನಾಟಕೋತ್ಸವವು ‘ಪ್ರಜಾವಾಣಿ’ ಮಾಧ್ಯಮ ಸಹಯೋಗದಲ್ಲಿ ನಡೆಯಿತು. ‘ಸಮಗ್ರತೆ’ ನಾಟಕೋತ್ಸವದ ವಿಷಯವಾಗಿತ್ತು. ಮೊದಲ ಹಂತದ ಸ್ಪರ್ಧೆಯಲ್ಲಿ 13 ತಂಡಗಳು ಭಾಗವಹಿಸಿದ್ದವು. ಆರು ತಂಡಗಳು ಅಂತಿಮ ಸ್ಪರ್ಧೆಯಲ್ಲಿ ಪ್ರದರ್ಶನ ನೀಡಿದವು.

ದೃಶ್ಯಕಾವ್ಯ ತಂಡದ ‘ನೀಲಿ-ನೀರು’, ರಂಗಚಿರಂತನ ತಂಡದ ‘ಅಕ್ಕ’, ಖಾಲಿರಂಗ ತಂಡದ ‘ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ’, ವೀಕೆಂಡ್ ಥಿಯೇಟರ್‌ನ ‘3/4’, ರಿ-ವ್ಯೂ ಥಿಯೇಟರ್ ಕಲೆಕ್ಟಿವ್ ತಂಡದ ‘ವಿಧುರ’ ಹಾಗೂ ಸ್ಪಷ್ಟ ಥಿಯೇಟರ್ ತಂಡದ ‘ಪಲ್ಸ್’ ನಾಟಕ ಅಂತಿಮ ಸ್ಪರ್ಧೆಯಲ್ಲಿ ಪ್ರದರ್ಶನ ನೀಡಿ, ಪ್ರೇಕ್ಷಕರನ್ನು ರಂಜಿಸಿದವು.

ರಂಗಕರ್ಮಿಗಳಾದ ಕೆ.ಎಸ್.ಡಿ.ಎಲ್. ಚಂದು, ಪ್ರದೀಪ್ ಚಂದ್ರ ಕುತ್ಪಾಡಿ ಮತ್ತು ಲೇಖಕಿ ಸಂಧ್ಯಾರಾಣಿ ಅವರು ಅಂತಿಮ ಹಂತದ ಸ್ಪರ್ಧೆಯ ತೀರ್ಪುಗಾರರಾಗಿದ್ದರು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಂಗಕರ್ಮಿ ಬಿ. ಸುರೇಶ್, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾದ ಜೆಪಿಜಿ ಚಂದ್ರು, ಜಗದೀಶ್ ಜಾಲ ಹಾಗೂ ರಂಗಕರ್ಮಿ ಮಾಲತೇಶ್ ಬಡಿಗೇರ್ ಅವರು ಅತಿಥಿಗಳಾಗಿ ಭಾಗವಹಿಸಿ, ಪ್ರದರ್ಶನಗೊಂಡ ನಾಟಕಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಬೆಂಗಳೂರು ಕಿರುನಾಟಕೋತ್ಸವದ ಕಲಾತ್ಮಕ ನಿರ್ದೇಶಕರಾದ ಹನು ರಾಮಸಂಜೀವ ಮತ್ತು ನಂದೀಶ್ ದೇವ್, ತಾಂತ್ರಿಕ ನಿರ್ದೇಶಕರಾದ ಮಂಜು ನಾರಾಯಣ್ ಉಪಸ್ಥಿತರಿದ್ದರು.

ಪ್ರಶಸ್ತಿಗಳು: ‘ಅಕ್ಕ’ ನಾಟಕಕ್ಕೆ ಬೇಲೂರು ರಘುನಂದನ್ ಅವರು ಆರ್ .ನಾಗೇಶ್ ಹೆಸರಿನಲ್ಲಿ ನೀಡುವ ‘ಅತ್ಯುತ್ತಮ ನಿರ್ದೇಶನ’ ಪ್ರಶಸ್ತಿ ಪಡೆದರು. ‘ವಿಧುರ’ ನಾಟಕದ ಪಾತ್ರಕ್ಕೆ ರಾಜ್ ಅವರು ಸಂಚಾರಿ ವಿಜಯ್ ಹೆಸರಿನಲ್ಲಿ ನೀಡುವ ‘ಅತ್ಯುತ್ತಮ ನಟ’ ಪ್ರಶಸ್ತಿ, ‘ನೀಲಿ-ನೀರು’ ನಾಟಕದ ಪಾತ್ರಕ್ಕೆ ರಾಣಿ ವಿಶ್ವನಾಥ್ ಅವರು ಉಮಾಶ್ರೀ ಹೆಸರಿನಲ್ಲಿ ನೀಡುವ ‘ಅತ್ಯುತ್ತಮ ನಟಿ’ ಪ್ರಶಸ್ತಿಗೆ ಭಾಜನರಾದರು.

‘ಚನ್ನಕೇಶವ. ಜಿ’ ಅತ್ಯುತ್ತಮ ನಿರ್ವಹಣೆ ಫಲಕಕ್ಕೆ ರಂಗಚಿರಂತನ ತಂಡ, ‘ಟಿ. ಪಿ.ಕೈಲಾಸಂ’ ಅತ್ಯುತ್ತಮ ನಾಟಕ ರಚನೆಗೆ ಮದನ್ ರಂಗಭೂಮಿ, ಅತ್ಯುತ್ತಮ ನಾಟಕ ವಿನ್ಯಾಸ ಫಲಕಕ್ಕೆ ಬೇಲೂರು ರಘುನಂದನ್, ಅತ್ಯುತ್ತಮ ಭಿತ್ತಿಪತ್ರ ವಿನ್ಯಾಸ ಫಲಕಕ್ಕೆ ಗಗನ್ ಪ್ರಸಾದ್ (ಪಲ್ಸ್ ನಾಟಕ) ಹಾಗೂ ‘ಗೋಕುಲ ಸಹೃದಯ’ ಅತ್ಯುತ್ತಮ ಬಾಲ ರಂಗಪ್ರತಿಭೆ ಫಲಕಕ್ಕೆ ತೇಜು.ಡಿ (3/4 ನಾಟಕ) ಭಾಜನರಾದರು. ಈ ಪ್ರಶಸ್ತಿಗಳು ತಲಾ ₹2,500 ನಗದು ಒಳಗೊಂಡಿದ್ದವು.



ಬಹುಮಾನ ವಿತರಣಾ ಸಮಾರಂಭದಲ್ಲಿ ಹನು ರಾಮಸಂಜೀವ, ನಂದೀಶ್ ದೇವ್, ಸಂಧ್ಯಾ ರಾಣಿ, ಬಿ. ಸುರೇಶ್, ಕೆ.ಎಸ್‌ಡಿ.ಎಲ್ ಚಂದ್ರು, ಜಗದೀಶ್ ಜಾಲ, ಪ್ರದೀಪ್ ಚಂದ್ರ ಕುತ್ಪಾಡಿ, ಮಾಲತೇಶ್ ಬಡಿಗೇರ್ ಮತ್ತು ಅತ್ಯುತ್ತಮ ನಾಟಕ ಪ್ರಶಸ್ತಿ ವಿಜೇತ ತಂಡದ ಸದಸ್ಯರಿದ್ದರು ಪ್ರಜಾವಾಣಿ ಚಿತ್ರ

ಕೆಎಸ್‌ಆರ್‌ಟಿಸಿಗೆ ಪ್ರಶಸ್ತಿ

ಬೆಂಗಳೂರು: ಅತ್ಯುತ್ತಮ ಮಾನವ ಸಂಪನ್ಮೂಲ ಉಪಕ್ರಮಗಳಿಗಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಇಟಿಎಚ್‌ಆರ್ ವಿಶ್ವ ಉದ್ಯೋಗಿ ಅನುಭವಿ ಪ್ರಶಸ್ತಿ ಲಭಿಸಿದೆ. ಅತ್ಯುತ್ತಮ ನೌಕರ ಅನುಭವ–ಸಾರ್ವಜನಿಕ ವಲಯ ಸಂಸ್ಥೆಗಳು (ಪಿಎಸ್‌ಯುಎಸ್) ವರ್ಗದಲ್ಲಿ ಈ ಪುರಸ್ಕಾರ ದೊರಕಿದೆ. ಶನಿವಾರ ನಗರದ ಶೆರಟನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆದ ಸಮಾರಂಭದಲ್ಲಿ ಕೆಎಸ್‌ಆರ್‌ಟಿಸಿ ಪರವಾಗಿ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕ ಅಶ್ರಫ್ ಕೆ.ಎಂ. ಪ್ರಶಸ್ತಿ ಸ್ವೀಕರಿಸಿದರು.

‘ಭದ್ರತೆ ಇಲ್ಲದೆ ಸ್ತ್ರೀಯರಿಗೆ ಸಾಲ’

ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯರು ಸಕಾಲದಲ್ಲಿ ಸಾಲ ಮರುಪಾವತಿ ಮಾಡುತ್ತಾರೆ. ಈ ನಂಬಿಕೆಯಿಂದ ಶ್ರೀ ತ್ಯಾಗರಾಜ ಕೋ- ಆಪರೇಟಿವ್ ಬ್ಯಾಂಕ್ ಯಾವುದೇ ಭದ್ರತೆ ಇಲ್ಲದೆ ಸಾಲ ನೀಡುತ್ತದೆ’ ಎಂದು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸಿ.ಎನ್.ದೇವರಾಜ್ ಹೇಳಿದರು.

ಶ್ರೀ ತ್ಯಾಗರಾಜ ಕೋ- ಆಪರೇಟಿವ್ ಬ್ಯಾಂಕ್ ಆಯೋಜಿಸಿದ್ದ ‘ಮಹಿಳಾ |ಉದ್ದಿಮೆದಾರರಿಗೆ ಸಾಲ ಸೌಲಭ್ಯ ವಿತರಣಾ’ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಸ್ವ ಉದ್ಯೋಗ ಆರಂಭಿಸುವ ಮೂಲಕ ಮಹಿಳೆಯರು ಸ್ವಾವಲಂಬಿಗಳಾಗಬೇಕು. ಇದಕ್ಕಾಗಿ ತ್ಯಾಗರಾಜ ಬ್ಯಾಂಕ್‌ನಲ್ಲಿ ಭದ್ರತೆ ಇಲ್ಲದೆ ಸಾಲ ನೀಡಲಾಗುತ್ತಿದೆ. ಇದರಿಂದ ಮಹಿಳೆಯರು ಆರ್ಥಿಕವಾಗಿ ಸಬಲವಾಗುವುದರ ಜೊತೆಗೆ ದೇಶದ ಆರ್ಥಿಕತೆಗೆ ಕೊಡುಗೆ ನೀಡಲಿದ್ದಾರೆ. ಉದ್ಯೋಗದಲ್ಲಿ ಯಶಸ್ಸು ಗಳಿಸಿ, ಸಕಾಲದಲ್ಲಿ ಸಾಲ ಮರುಪಾವತಿಸಬೇಕು’ ಎಂದು ಸಲಹೆ ನೀಡಿದರು.

ಬ್ಯಾಂಕ್ ಅಧ್ಯಕ್ಷ ಎಂ.ಆರ್ ವೆಂಕಟೇಶ್ ಮಾತನಾಡಿ, ಮಹಿಳೆಯರ ಅಭಿವೃದ್ಧಿಗಾಗಿ ಬ್ಯಾಂಕಿನಿಂದ ನಮ್ಮ ಇತಿ-ಮಿತಿಯಲ್ಲಿ ಸಹಾಯ ಮಾಡುತ್ತಿದ್ದೇವೆ. ₹1 ಲಕ್ಷದಿಂದ ₹5 ಲಕ್ಷದವರೆಗೂ ಭದ್ರತೆ ಇಲ್ಲದೆ ಸಾಲ ನೀಡುವ ಮೂಲಕ, ಸ್ವ -ಉದ್ಯೋಗ ಆರಂಭಿಸಲು ಪ್ರೋತ್ಸಾಹ ನೀಡುತ್ತಿದ್ದೇವೆ’ ಎಂದು ತಿಳಿಸಿದರು.



ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಸಾಲ ಮಂಜೂರಾತಿ ಪತ್ರಗಳನ್ನು ವಿತರಿಸಲಾಯಿತು. ಸಿ.ಎನ್ ದೇವರಾಜ್, ಸ್ಮಿತಾ ರಂಗನಾಥ್, ಎಂ.ಆರ್ ವೆಂಕಟೇಶ್ ಉಪಸ್ಥಿತರಿದ್ದರು

ಬನ್ನೇರುಘಟ್ಟ ಮೂರು ಹುಲಿಮರಿ ಸಾವು

ಆನೇಕಲ್: ಐದು ದಿನಗಳ ಹಿಂದೆ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಜನಿಸಿದ್ದ ಮೂರು ಹುಲಿ ಮರಿಗಳು ತಾಯಿ ಹುಲಿ ಹಾಲುಣಿಸದ ಕಾರಣ ಹಸಿವು ಮತ್ತು ಗಾಯಗಳಿಂದ ಮೃತಪಟ್ಟಿವೆ.

ಜುಲೈ7ರಂದು ಹಿಮಾ ದಾಸ್ ಎಂಬ ಏಳು ವರ್ಷದ ಹೆಣ್ಣು ಹುಲಿ ಎರಡು ಗಂಡು, ಒಂದು ಹೆಣ್ಣು ಸೇರಿ ಮೂರು ಮರಿಗಳಿಗೆ ಜನ್ಮ ನೀಡಿತ್ತು. ಜನಿಸಿದ ಮೂರು ದಿನಗಳಲ್ಲಿ ಮರಿ ಮೃತಪಟ್ಟಿವೆ.

ಮರಿಗಳನ್ನು ತಾಯಿ ಹುಲಿ ಸರಿಯಾಗಿ ನೋಡಿಕೊಳ್ಳಲಿಲ್ಲ. ಹಾಲು ಉಣಿಸದೆ ನಿರ್ಲಕ್ಷಿಸಿತ್ತು. ತಾಯಿ ಹುಲಿ ಕಚ್ಚಿದ ಕಾರಣ ಮರಿಗಳು ಗಾಯಗೊಂಡಿದ್ದವು.

‘ಗಾಯಗೊಂಡು ನಿತ್ರಾಣಗೊಂಡಿದ್ದ ಮರಿಗಳನ್ನು ಆರೈಕೆಗಾಗಿ ಬನ್ನೇರುಘಟ್ಟ ಜೈವಿಕ ಉದ್ಯಾನದ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಮರಿಗಳನ್ನು ಉಳಿಸಿಕೊಳ್ಳಲು ಪಶು ವೈದ್ಯರು, ಸಿಬ್ಬಂದಿ ಪ್ರಯತ್ನಿಸಿದರು. ಆದರೆ, ಮರಿಗಳು ಬದುಕಿ ಉಳಿಯಲಿಲ್ಲ’ ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಅಧಿಕೃತ ಪ್ರಕಟಣೆ ತಿಳಿಸಿದೆ.

ಬನ್ನೇರುಘಟ್ಟ ಉದ್ಯಾನದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ. ತಾಯಿ ಮತ್ತು ಮರಿಗಳ ಚಲನ ವಲನದ ಮೇಲೆ ಉದ್ಯಾನದ ಆಸ್ಪತ್ರೆಯ ತಜ್ಞ ವೈದ್ಯರು ಮತ್ತು ಸಿಬ್ಬಂದಿ ನಿಗಾ ಇಟ್ಟಿರುತ್ತಾರೆ ಎಂದು ಸ್ಪಷ್ಟನೆ ನೀಡಿದೆ.

‘ಸಾಮಾನ್ಯವಾಗಿ ತಾಯಿ ತನ್ನ ಮರಿಗಳನ್ನು ನೋಡಿಕೊಳ್ಳುತ್ತದೆ. ಆದರೆ, ಕೆಲವು ಸಂದರ್ಭದಲ್ಲಿ ತಾಯಿ ಹುಲಿ, ಮರಿಗಳ ಆರೈಕೆ ನಿರ್ಲಕ್ಷಿಸುತ್ತದೆ. ಇಂತಹ ಸಂದರ್ಭದಲ್ಲಿ ತಾಯಿಯಿಂದ ಬೇರ್ಪಡಿಸಿ ಮೃಗಾಲಯದ ಸಿಬ್ಬಂದಿ ಮರಿಗಳನ್ನು ಸಾಕುತ್ತಾರೆ. ಆದರೆ, ಈ ಪ್ರಕರಣದಲ್ಲಿ ನಮ್ಮ ಪ್ರಯತ್ನ ಫಲ ನೀಡಲಿಲ್ಲ’ ಎಂದು ಉದ್ಯಾನದ ಮೂಲಗಳು ಹೇಳಿವೆ.

ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆಯಲ್ಲಿ ಜಲಕೃಷಿ ತಜ್ಞ ಮೋಹನ್ ಆಗ್ರಹ

‘ಮೀನು ಕೃಷಿ; ಚರ್ಚಿಸಿ ಸಮಸ್ಯೆ ಬಗೆಹರಿಸಿ’



ಬಾರ್ಬೋಡ್ಸ್ ಕರ್ನಾಟಿಕಸ್ ಮತ್ತು ಕೆಮ್ಮೀನಿನ ಮರಿಗಳನ್ನು ಹೆಸರಘಟ್ಟ ಕೆರೆಗೆ ಬಿಡಲಾಯಿತು

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ‘ಮೀನು ಕೃಷಿಯಲ್ಲಿನ ಸಮಸ್ಯೆಗಳ ಕುರಿತು ವಿಜ್ಞಾನಿಗಳೊಂದಿಗೆ ಚರ್ಚಿಸಿದಾಗ, ಸೂಕ್ತ ಪರಿಹಾರಗಳು ಲಭ್ಯ ಆಗುತ್ತವೆ’ಎಂದು ಜಲಕೃಷಿ ತಜ್ಞ ಸಿ.ವಿ. ಮೋಹನ್ ತಿಳಿಸಿದರು.

ಇಲ್ಲಿನ ಐಸಿಎಆರ್- ಒಳನಾಡು ಮೀನುಗಾರಿಕೆ ಸಂಶೋಧನಾ ಕೇಂದ್ರ, ಸಿಫ್ರಿ-ಸಿಫಾ ಆವರಣದಲ್ಲಿ ನಡೆದ ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

‘ಮೀನು ಕೃಷಿಕರು ಮತ್ತು ವಿಜ್ಞಾನಿಗಳ ನಡುವೆ ನಿರಂತರ ಸಂವಹನ ನಡೆಯಬೇಕು. ವಿಜ್ಞಾನಿಗಳು ಹೊಸ ಆವಿಷ್ಕಾರಗಳನ್ನು ರೈತರಿಗೆ ತಲುಪಿಸುವ ಕೆಲಸ ಮಾಡಬೇಕು’ ಎಂದು ಅವರು ತಿಳಿಸಿದರು.

‘ಮೀನು ಅತಿ ಹೆಚ್ಚು ಪೌಷ್ಟಿಕಾಂಶಗಳನ್ನು ಹೊಂದಿದೆ. ಈ ಬಗ್ಗೆ ಜನರಿಗೆ ಅರಿವು ಮೂಡಿಸುವ ಅಗತ್ಯವಿದೆ’ ಎಂದು ಶಿವಮೊಗ್ಗ ಕೆಳದಿ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಸಿ. ವಾಸುದೇವಪ್ಪ ಹೇಳಿದರು.

ಕಾರ್ಯಕ್ರಮದ ಅಂಗವಾಗಿ ಕರ್ನಾಟಕದ ನಾಡ ಮೀನು ಬಾರ್ಬೋಡ್ಸ್ ಕರ್ನಾಟಿಕಸ್ ಮತ್ತು ಕೆಮ್ಮೀನಿನ ಮರಿಗಳನ್ನು ಹೆಸರಘಟ್ಟ ಕೆರೆಗೆ ಬಿಡಲಾಯಿತು. ನಂತರ ಪ್ರಗತಿಪರ ಮೀನು ಕೃಷಿಕರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಮೀನುಗಾರಿಕೆ ಇಲಾಖೆ ನಿರ್ದೇಶಕ ದಿನೇಶ್ ಕುಮಾರ್ ಕಲ್ಲೇರ್, ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ವಿಶ್ವನಾಥ್ ಟಿ.ಎಸ್, ಪ್ರಧಾನ ವಿಜ್ಞಾನಿಗಳಾದ ಎಲ್. ನರಸಿಂಹಮೂರ್ತಿ, ಗಂಗಾಧರ ಬಾರ್ಲಯ ಮತ್ತು ಮೀನು ಕೃಷಿಕರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಕನ್ನಡ ಸಾಹಿತ್ಯ ಸಂಭ್ರಮ-2025: ಸಾನ್ನಿಧ್ಯ: ಆರೂಢ ಭಾರತೀ ಸ್ವಾಮೀಜಿ, ಉದ್ಘಾಟನೆ: ಆರ್. ಅಶೋಕ, ಉಪಸ್ಥಿತಿ: ತೇಜಸ್ವಿ ಸೂರ್ಯ, ಸಿ.ಕೆ. ರಾಮಮೂರ್ತಿ, ಸಿ.ಎಸ್. ಷಡಾಕ್ಷರಿ, ಬಿ.ಎಸ್. ಮಂಜುನಾಥ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ್, ಸ್ಥಳ: ಜೆಎಸ್‌ಎಸ್ ಪಬ್ಲಿಕ್ ಶಾಲೆ, ಘನಲಿಂಗ ಶಿವಯೋಗಿ ಸಭಾಭವನ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 9ರಿಂದ

ರೇಣುಕ ಭಗವತ್ಪಾದರ, ಬಸವೇಶ್ವರ ಜಯಂತಿ, ಟಿ.ಆರ್. ಮಹಾದೇವಯ್ಯನವರ 18ನೇ ಸಾತ್ವಿಕ ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ಪ್ರದಾನ: ಸಾನ್ನಿಧ್ಯ: ಶಿವಸಿದ್ಧೇಶ್ವರ ಸ್ವಾಮೀಜಿ, ಅಧ್ಯಕ್ಷತೆ: ಬಿ.ಎಸ್. ಪರಮಶಿವಯ್ಯ, ಪ್ರಶಸ್ತಿ ಸ್ವೀಕರಿಸುವವರು: ಬಿ. ಸಿದ್ಧಲಿಂಗಸ್ವಾಮಿ, ಅತಿಥಿ: ಕೊಪ್ಪಲ್ ನಾಗರಾಜು, ಆಯೋಜನೆ: ಶ್ರೀಬಸವ ವಿದ್ಯಾಭಿವೃದ್ಧಿ ಸಂಘ, ಸ್ಥಳ: ಶರಣ ಸೇವಾ ಸಮಾ, ಮಹಾಲಕ್ಷ್ಮಿ ಮೆಟ್ರೊ ನಿಲ್ದಾಣದ ಹತ್ತಿರ, ಬೆಳಿಗ್ಗೆ 10

ಚಿಕೇನಕೊಪ್ಪದ ಚನ್ನವೀರ ಶರಣರ 30ನೇ ಪುಣ್ಯಸ್ಮರಣೆ: ಸಾನ್ನಿಧ್ಯ: ಶಿವಶಾಂತವೀರ ಶರಣರು, ಉದ್ಘಾಟನೆ: ವಿ. ಶ್ರೀಶಾನಂದ, ಉಪನ್ಯಾಸ: ಶಂಭು ಬಳಿಗಾರ, ಆಯೋಜನೆ: ಚಿಕೇನಕೊಪ್ಪದ ಶ್ರೀ ಚನ್ನವೀರ ಶರಣರ ಬಳಗ, ಸ್ಥಳ: ಜಗದ್ಗುರು ರೇಣುಕಾಚಾರ್ಯ ವಿದ್ಯಾಸಂಸ್ಥೆ, ಆನಂದರಾವ್ ವೃತ್ತ, ಬೆಳಿಗ್ಗೆ 10

ಸಾರಿಗೆ ಸಂಸ್ಥೆ ಕಾರ್ಮಿಕರಿಗೆ ‘ಕನ್ನಡ ಮತ್ತು ಸಂಸ್ಕೃತಿ ಜಾಗೃತಿ ಶಿಬಿರ’: ಉದ್ಘಾಟನೆ: ಎಸ್.ಆರ್. ವಿಜಯಶಂಕರ್, ಅಧ್ಯಕ್ಷತೆ: ಮನು ಬಳಿಗಾರ್, ಆಶಯ ನುಡಿ: ವ.ಚ. ಚನ್ನೇಗೌಡ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಕನ್ನಡ ಕ್ರಿಯಾ ಸಮಿತಿ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

‘ಮಹಾನಾಯಕ ಸಾಮ್ರಾಟ್ ಅಶೋಕ’ ನಾಟಕ ಪ್ರದರ್ಶನ: ನಿರ್ದೇಶನ: ಅಶೋಕ ಜಾಂಬುಲ್ಕರ್, ಪ್ರಸ್ತುತಿ: ಬುದ್ಧಿಸ್ಟ್ ಅಕಾಡೆಮಿ ಆಫ್ ಪರ್ಫಾರ್ಮಿಂಗ್ ಆರ್ಟ್ ನಾಗಪುರ, ಅತಿಥಿಗಳು: ಮಲ್ಲಿಕಾರ್ಜುನ್ ಖರ್ಗೆ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಪ್ರಿಯಾಂಕ್ ಖರ್ಗೆ, ಕೆ.ಎಚ್. ಮುನಿಯಪ್ಪ, ಡಾ. ಶರಣಪ್ರಕಾಶ ಪಾಟೀಲ, ಈಶ್ವರ್ ಖಂಡ್ರೆ, ರಾಧಾಕೃಷ್ಣ ದೊಡ್ಡಮನಿ, ಆಯೋಜನೆ: ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಮಧ್ಯಾಹ್ನ 12ರಿಂದ

‘ನಾಯಿ ಕಳೆದಿದೆ’ ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ, ಆಯೋಜನೆ: ನಮ್ದೆ ನಟನೆ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

‘ಲಕ್ಷ್ಮಿ ಕಟಾಕ್ಷ’ ನಾಟಕ ಪ್ರದರ್ಶನ: ಪ್ರಸ್ತುತಿ: ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಷನ್, ನಿರ್ದೇಶನ: ಕಿಶೋರ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ರಾಮಕೃಷ್ಣ ಸಂಗೀತ ಸೌರಭ: ಗಾಯನ: ಕುಮಾರ್ ಮೋದಕ ಮತ್ತು ತಂಡ, ತಬಲಾ: ಪ್ರದ್ಯುಮ್ನ್ ಕರ್ಪೂರ್, ವೀಣಾ ವಾದನ: ಚಿನ್ಮಯ್ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ದೊಡ್ಡಬಸವಣ್ಣ ರಸ್ತೆ, ಬಸವನಗುಡಿ, ಸಂಜೆ 6

ಸಾಹಿತ್ಯ, ಸಂಗೀತ, ಸನ್ಮಾನ ಕಾರ್ಯಕ್ರಮ: ‘ಬಾಂಧವ್ಯ’, ‘ಶಿಕ್ಷಣ ಅಂದು ಇಂದು’ ಪುಸ್ತಕಗಳ ಬಿಡುಗಡೆ: ಉದ್ಘಾಟನೆ: ಶೈಲಜಾ ಸುರೇಶ್, ಪುಸ್ತಕಗಳ ಬಿಡುಗಡೆ: ಸವಿತಾ ಶ್ರೀನಿವಾಸ್, ಪ್ರಶಸ್ತಿ ಪ್ರದಾನ: ಮುಕುಂದ ಗಂಗೂರು, ಪ್ರಶಸ್ತಿ ಸ್ವೀಕರಿಸುವವರು: ಟಿ.ಎನ್. ನಾಗರತ್ನ, ಪ್ರಭಾವತಿ, ಆಯೋಜನೆ: ಲೇಖಿಕಾ ಸಾಹಿತ್ಯ ವೇದಿಕೆ, ಸ್ಥಳ: ಜೆ.ಪಿ. ನಗರ ಕ್ಷೇಮಾಭಿವೃದ್ಧಿ ಸಂಘದ ಆವರಣ, ಜೆ.ಪಿ. ನಗರ, ಒಂದನೇ ಹಂತ, ಬೆಳಿಗ್ಗೆ 10.30

ತಿಂಗಳ ಕವಿಗೋಷ್ಠಿ, ಗೀತ-ಗಾಯನ, ಪ್ರಶಸ್ತಿ ಪ್ರದಾನ: ಸಿ.ವಿ. ಮುರಳೀಧರ್, ಅಧ್ಯಕ್ಷತೆ: ವಿ. ರೇಣುಕಾಪ್ರಸನ್ನ, ಅತಿಥಿ: ಬೆಮೆಲ್ ಜಯಶಂಕರ್ ಪ್ರಕಾಶ್, ಪ್ರಶಸ್ತಿ ಸ್ವೀಕರಿಸುವವರು: ಬಿ.ಡಿ. ಜಗದೀಶ್, ಜೆ.ಕೆ. ರಾಜು, ಸಿರಿಗಂಧ ರಾಮಕೃಷ್ಣ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಸಂಸ್ಥೆಯ ದಶಮಾನೋತ್ಸವ, ‘ಸರ್ವ ಧರ್ಮ ಸಮ್ಮೇಳನ’: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ದಿಂಗಾಲೇಶ್ವರ ಸ್ವಾಮೀಜಿ, ನಿರಂಜನಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಎಂ.ಬಿ. ಪಾಟೀಲ, ಶಿವರಾಜ್ ವಿ. ಪಾಟೀಲ, ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ಎಸ್. ಟಿ. ಸೋಮಶೇಖರ್, ಆಯೋಜನೆ: ಅಖಿಲ ಭಾರತ ವಚನ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತ್ತು, ಸ್ಥಳ: ಪೂರ್ಣಿಮಾ ಪ್ಯಾಲೇಸ್, ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಪಕ್ಕ, ಪಟ್ಟಣಗೆರೆ ಮೆಟ್ರೊ ನಿಲ್ದಾಣದ ಹತ್ತಿರ, ಮೈಸೂರು ರಸ್ತೆ, ಬೆಳಿಗ್ಗೆ 11

‘ಬೆಂಗಳೂರು ಪರಿಸರದ ಪ್ರಾಚೀನ ಕೆರೆಗಳು’ ಉಪನ್ಯಾಸ: ಟಿ.ವಿ. ನಾಗರಾಜ, ‘ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಬೆಂಗಳೂರು ಪರಿಸರವನ್ನು ಅರ್ಥೈಸಿ ಕೊಳ್ಳುವುದು’ ಉಪನ್ಯಾಸ: ಟಿ.ವಿ. ರಾಮಚಂದ್ರ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಗುರು ಪೂರ್ಣಿಮೆಯ ಕುರಿತು ಉಪನ್ಯಾಸ: ಈಶ್ವರನ್, ಆಯೋಜನೆ: ವೇದಾಂತ ಇನ್‌ಸ್ಟಿಟ್ಯೂಟ್ ಬೆಂಗಳೂರು, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11.45

ರಂಗ ‘ಭಾಗವತ’ ಕೆ. ರೇವಣ್ಣ-60, ಗೀತಗಾಯನ, ಪುಸ್ತಕ ಬಿಡುಗಡೆ, ರಂಗ ಸಮ್ಮಾನ: ಪುಸ್ತಕ ಬಿಡುಗಡೆ: ಎಲ್. ಹನುಮಂತಯ್ಯ, ಪ್ರಾಸ್ತಾವಿಕ ನುಡಿ: ಜಿ.ಎನ್. ಮೋಹನ್, ಅಧ್ಯಕ್ಷತೆ: ವಿಜಯಾ, ಉಪಸ್ಥಿತಿ: ಕೆ.ಬಿ. ಕಿರಣ್‌ಸಿಂಗ್, ರಾಜು ಮಳವಳ್ಳಿ, ರಂಗ ಸಮ್ಮಾನ: ಕೆ. ರೇವಣ್ಣ, ಅಭಿನಂದಿಸುವವರು: ಕೆ. ಮರುಳಸಿದ್ಧಪ್ಪ, ಅತಿಥಿಗಳು: ಶ್ರೀನಿವಾಸ್ ಜಿ. ಕಪ್ಪಣ್ಣ, ಬಿ.ವಿ. ರಾಜಾರಾಂ, ಮಾಲತಿ ಸುಧೀರ್, ಎಲ್.ಬಿ. ಶೇಖ್ ಮಾಸ್ತರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಸಾಂಸ್ಕೃತಿಕ ಪರಿಚಾರಕ ಕೆ. ರೇವಣ್ಣ ಅಭಿನಂದನಾ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3ರಿಂದ



‘ಶ್ರೇಷ್ಠ ಆಚಾರ್ಯ ಪುರಸ್ಕಾರ’, ಭರತನಾಟ್ಯ ಪ್ರದರ್ಶನ: ಪ್ರಶಸ್ತಿ ಸ್ವೀಕರಿಸುವವರು: ಹರಿನೂಪುರ, ದೇವರಾಜು ಬಿ.ವಿ., ಅರ್ಚನಾ ಪುಣ್ಯೇಶ್, ಆಯೋಜನೆ: ನಟನಂ, ಸ್ಥಳ: ವ್ರೋಮ್ ಆರ್ಟ್ ಸ್ಪೇಸ್, ಮೂರನೇ ಹಂತ, ಜೆ.ಪಿ. ನಗರ, ಸಂಜೆ 5

ಗುರುವಂದನಾ ಕಾರ್ಯಕ್ರಮ: ಗಾಯನ: ಸ್ಮಿತಾ ನಿತ್ಯಾನಂದ, ಪಿಟೀಲು: ಕೆ.ಎಸ್. ವಾಸುಕಿ, ಮೃದಂಗ: ಶ್ರೀವತ್ಸ ಎಸ್., ಗಾಯನ: ಉತ್ತರ ಸ್ವಾಮಿನಾಥನ್, ಪಿಟೀಲು: ಎನ್. ಮೋಹನ್, ಮೃದಂಗ: ರವಿಶಂಕರ್ ಶರ್ಮಾ, ಆಯೋಜನೆ: ಗುಡಿಬಂಡೆ ಸಂಗೀತ ಕಲಾ ಶಾಲೆ ಟ್ರಸ್ಟ್, ಸ್ಥಳ: ಶ್ರೀ ಜಯರಾಮ ಸೇವಾ ಮಂಡಳಿ, ಜಯನಗರ, ಎಂಟನೇ ಬ್ಲಾಕ್, ಜಯನಗರ, ಸಂಜೆ 5

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

‘ನೋಟಿಸ್ ಬಂದಿದ್ದರೆ ಉತ್ತರಿಸಿ’

ಬೇಕರಿ, ಹೋಟೆಲ್ ಮಾಲೀಕರಿಗೆ ಕಾನೂನು ತಜ್ಞರ ಸಲಹೆ

• ಜಯಸಿಂಹ ಆರ್.

ಬೆಂಗಳೂರು: ಜಿಎಸ್‌ಟಿಗೆ ನೋಂದಣಿ ಮಾಡಿಸದೇ ಇದ್ದರೂ ತೆರಿಗೆ ಕಟ್ಟಿ ಎಂದು ನೋಟಿಸ್ ಬಂದಿರುವ ಬೇಕರಿ, ಹೋಟೆಲ್, ಟೀ-ಅಂಗಡಿ ಮಾಲೀಕರು, ಶೀಘ್ರವೇ ನೋಟಿಸ್‌ಗೆ ಉತ್ತರ ನೀಡಬೇಕು. ಇದರಿಂದ ದಂಡ ಮತ್ತು ಬಡ್ಡಿ ವಿಧಿಸಿಕೊಳ್ಳುವುದರಿಂದ ತಪ್ಪಿಸಿಕೊಳ್ಳಬಹುದು.

ರಾಜ್ಯದ ಎಲ್ಲೆಡೆ ಸಣ್ಣ ಬೇಕರಿ, ಹೋಟೆಲ್, ಟೀ ಅಂಗಡಿ, ಸಲೂನ್‌ಗಳನ್ನು ನಡೆಸುತ್ತಿರುವ ವ್ಯಾಪಾರಿಗಳು ಯುಪಿಐ ಮೂಲಕ ಹಣ ಪಡೆಯುತ್ತಿದ್ದರೆ, ಅಂತಹವರ ಹಣಕಾಸು ವಹಿವಾಟಿನ ವಿವರವನ್ನು ವಾಣಿಜ್ಯ ತೆರಿಗೆ ಇಲಾಖೆಯು ಕಲೆಹಾಕಿದೆ. ಇಲಾಖೆಯು ಈಗಾಗಲೇ ಹೇಳಿರುವಂತೆ, ಯುಪಿಐ ಮೂಲಕ ವಾರ್ಷಿಕ ₹40 ಲಕ್ಷಕ್ಕಿಂತ ಹೆಚ್ಚು ಇದ್ದವರಿಗೆ ನೋಟಿಸ್ ನೀಡಲಾಗಿದೆ.

‘ನೋಟಿಸ್ ಪಡೆದವರು ಜಿಎಸ್‌ಟಿ ನೋಂದಣಿ ಮಾಡಿಸಲೇಬೇಕು ಮತ್ತು ಜಿಎಸ್‌ಟಿ ಕಟ್ಟದೇ ವಿಧಿ ಇಲ್ಲ. ಆದರೆ, ತಾವು ನಡೆಸಿದ ವಹಿವಾಟಿನಲ್ಲಿ ಯಾವುದಕ್ಕೆ ಮಾತ್ರ ಜಿಎಸ್‌ಟಿ ಅನ್ವಯ ವಾಗುತ್ತದೆ, ಎಂಬುದನ್ನು ಕಂಡು ಕೊಂಡರೆ ತೆರಿಗೆಯ ಪ್ರಮಾಣ ಕಡಿಮೆ ಆಗುತ್ತದೆ’ ಎನ್ನುತ್ತಾರೆ ನಗರದ ರೆಜಿನಾ ಜಿಎಸ್‌ಟಿ ಕನ್ಸಲ್ಟೆಂಟ್ಸ್‌ನ ಎಂ.ಚಂದ್ರಶೇಖರ್.

‘ವಾರ್ಷಿಕ ₹40 ಲಕ್ಷ ವಹಿವಾಟು ದಾಟಿದ ಸರಕು ಪೂರೈಕೆದಾರರು, ವಾರ್ಷಿಕ ₹20 ಲಕ್ಷ ವಹಿವಾಟು ದಾಟಿದ ಸೇವಾ ಪೂರೈಕೆದಾರರು ಜಿಎಸ್‌ಟಿಗೆ ನೋಂದಣಿ ಮಾಡಿಸುವುದು ಕಡ್ಡಾಯ. ಹೀಗಾಗಿ ಅಷ್ಟು ಮೊತ್ತದ ವಹಿವಾಟು ನಡೆಸುತ್ತಿರುವವರು ಶೀಘ್ರವೇ ಜಿಎಸ್‌ಟಿ ನೋಂದಣಿ ಮಾಡಿಸಿ’ ಎಂಬುದು ಅವರ ಸಲಹೆ. ‘ಜಿಎಸ್‌ಟಿ ನೋಟಿಸ್‌ಗೆ ಉತ್ತರ ನೀಡಲು ಕಾಲಾವಕಾಶ ಇರುತ್ತದೆ. ಆ ಗಡುವಿನೊಳಗೆ ತೆರಿಗೆ ಕಟ್ಟಲೇಬೇಕು ಎಂದೇನಿಲ್ಲ. ಬದಲಿಗೆ ನೋಟಿಸ್‌ನಲ್ಲಿ ಉಲ್ಲೇಖಿಸಿರುವ ವಹಿವಾಟಿಗೆ ಸಂಬಂಧಿಸಿದ ಉತ್ತರವನ್ನು ಆನ್‌ಲೈನ್ ಅಥವಾ ಜಿಎಸ್‌ಟಿ ಕಚೇರಿಗೆ ಹಾಜರಾಗಿ ಲಿಖಿತ ರೂಪದಲ್ಲಿ ಸಲ್ಲಿಸಬಹುದು’ ಎಂಬುದು ಅವರ ವಿವರಣೆ.

‘ರಾಜಿ ತೆರಿಗೆ ಆಯ್ಕೆ ಮಾಡಿ’

‘ವಾರ್ಷಿಕ ₹40 ಲಕ್ಷಕ್ಕಿಂತ ಹೆಚ್ಚು ವಹಿವಾಟು ನಡೆಸುತ್ತಿರುವ ವರ್ತಕರು ಜಿಎಸ್‌ಟಿಗೆ ನೋಂದಣಿ ಮಾಡದೇ ಇದ್ದರೆ, ಅವರಿಗೆ ನೋಟಿಸ್ ನೀಡುವ ಅಧಿಕಾರ ಜಿಎಸ್‌ಟಿ ಅಧಿಕಾರಿಗಳಿಗೆ ಇದೆ. ಅಂತಹ ವರ್ತಕರು ನೋಟಿಸ್‌ಗೆ ಉತ್ತರ ನೀಡಿ, ರಾಜಿ ತೆರಿಗೆ ಅಡಿಯಲ್ಲಿ ಜಿಎಸ್‌ಟಿ ಪಾವತಿಸುವ ಮೂಲಕ ಕಾನೂನು ಕ್ರಮಗಳನ್ನು ತಪ್ಪಿಸಬಹುದು’ ಎನ್ನುತ್ತಾರೆ ಯು.ರಾವ್ ಅಂಡ್ ಅಸೋಸಿಯೇಟ್ಸ್‌ನ ಮಧುಕುಮಾರ್ ಡಿ.

‘ವಾರ್ಷಿಕ ₹1.50 ಕೋಟಿಗಿಂತ ಕಡಿಮೆ ವಹಿವಾಟು ನಡೆಸುವ ವರ್ತಕರು ರಾಜಿ ತೆರಿಗೆ ಯೋಜನೆಯ ಲಾಭ ಪಡೆಯಬಹುದು. ಅವರು ನಡೆಸುವ ವಾರ್ಷಿಕ ವಹಿವಾಟಿನ ಶೇ 1ರಷ್ಟು ಮಾತ್ರ ಜಿಎಸ್‌ಟಿ ಪಾವತಿಸಬಹುದು. ರಾಜಿ ತೆರಿಗೆ ಆಯ್ಕೆ ಮಾಡಿಕೊಂಡರೆ, ಅಂತಹವರು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಪಡೆಯಲು ಸಾಧ್ಯವಿಲ್ಲ. ಆದರೆ ಒಟ್ಟಾರೆ ತೆರಿಗೆ ಪ್ರಮಾಣ ಕಡಿಮೆ ಇರುತ್ತದೆ. ರಾಜಿ ತೆರಿಗೆ ಆಯ್ಕೆ ಮಾಡಿಕೊಳ್ಳದೇ ಇದ್ದರೆ, ತಾವು ಮಾರಾಟ ಮಾಡಿದ ಸರಕು–ಸೇವೆಗಳ ಮೇಲೆ ಅನ್ವಯವಾಗುವ ಜಿಎಸ್‌ಟಿಯನ್ನು ಪೂರ್ಣ ಪ್ರಮಾಣದಲ್ಲಿ ಕಟ್ಟಬೇಕಾಗುತ್ತದೆ’ ಎಂಬುದು ಅವರ ಎಚ್ಚರಿಕೆ.

ಮುಖ್ಯಾಂಶಗಳು

- ಗಡುವಿನೊಳಗೆ ಉತ್ತರ ನೀಡಿ, ದಂಡ ತಪ್ಪಿಸಿಕೊಳ್ಳಿ
- ದಾಖಲೆಗಳನ್ನು ಸಲ್ಲಿಸಿ, ತೆರಿಗೆ ವಿನಾಯಿತಿ ಪಡೆಯಿರಿ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ವೈದ್ಯಕೀಯ ಶಿಕ್ಷಣ ಇಲಾಖೆ



ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎಲ್ಲರಿಗೂ ಆರೋಗ್ಯ ಭರವಸೆಯನ್ನು ಸಾಕಾರಗೊಳಿಸುವತ್ತ ದಿಟ್ಟ ಹೆಜ್ಜೆ

ನಮ್ಮ ಸಾಧನೆಗೆ 2 ವರ್ಷಗಳು



ಡಾ. ಶರಣಪ್ರಕಾಶ್ ಆರ್. ಪಾಟೀಲ್
ಅವರ ಸಾಧನೆಗಳ ವೀಡಿಯೊ
ಲಿಂಕ್ ಅನ್ನು ಪ್ರವೇಶಿಸಲು

ಕ್ಯೂಆರ್ ಕೋಡ್ ಅನ್ನು
ಸ್ಕ್ಯಾನ್ ಮಾಡಿ

- ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸುವ ಮೂಲಕ ಕಲ್ಯಾಣ ಕರ್ನಾಟಕವನ್ನು ಆರೋಗ್ಯ ಹಬ್ ಆಗಿ ಪರಿವರ್ತಿಸುವುದು.
- ವೈದ್ಯಕೀಯ ಸಂಸ್ಥೆಗಳ ಕೊರತೆಯಿರುವ ಜಿಲ್ಲೆಗಳಲ್ಲಿ 5 ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಮೂಲಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವೈದ್ಯಕೀಯ ಸಂಸ್ಥೆಗಳಿರುವುದನ್ನು ಖಚಿತಪಡಿಸುವುದು.
- ಬೆಂಗಳೂರಿನಲ್ಲಿ 137 ಕೋಟಿ ರೂ. ವೆಚ್ಚದಲ್ಲಿ 450 ಹಾಸಿಗೆಯುಳ್ಳ ಅತ್ಯಾಧುನಿಕ ಆಸ್ಪತ್ರೆಯಾದ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯನ್ನು ಸ್ಥಾಪಿಸುವುದು.
- ವೃತ್ತಿಪರತೆ ಮತ್ತು ಉದ್ಯೋಗಾರ್ಹತೆಯ ಮೇಲೆ ಗಮನ ಹರಿಸುವ ಹೊಸ ಸರ್ಕಾರಿ ನರ್ಸಿಂಗ್ ಕಾಲೇಜುಗಳು ಮತ್ತು ಸಂಬಂಧಿತ ಆರೋಗ್ಯ ವಿಜ್ಞಾನ ಕಾಲೇಜುಗಳನ್ನು ಸ್ಥಾಪಿಸುವುದು.
- ಬೆಂಗಳೂರು ಸೇರಿದಂತೆ ಹೆಚ್ಚುವರಿಯಾಗಿ ಮೈಸೂರು, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ವಾನವ ಎದೆಹಾಲು ಕೇಂದ್ರಗಳನ್ನು ಸ್ಥಾಪಿಸುವುದು.
- ರೂ. 300 ಕೋಟಿ ವೆಚ್ಚದಲ್ಲಿ ಬೆಂಗಳೂರಿನ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ 10 ಅಂತಸ್ತಿನ, 500 ಹಾಸಿಗೆಗಳ ಸೌಲಭ್ಯವುಳ್ಳ ಹೊಸ ಕಟ್ಟಡಗಳ ಸ್ಥಾಪನೆ.
- ಜಾಗತಿಕ ಉದ್ಯೋಗಾವಕಾಶವನ್ನು ಸಾಧಿಸುವ ನಿಟ್ಟಿನಲ್ಲಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಇಂಗ್ಲಿಷ್, ಜಪಾನೀಸ್, ಜರ್ಮನ್ ಮತ್ತು ಇಟಾಲಿಯನ್ ಭಾಷೆಗಳಲ್ಲಿ ತರಬೇತಿ ನೀಡಲಾಗುವುದು.
- ರೂ. 200 ಕೋಟಿ ವೆಚ್ಚದಲ್ಲಿ ಬೆಂಗಳೂರಿನಲ್ಲಿರುವ ನಿಮ್ಹಾನ್ಸ್ ಮಾದರಿಯ ಸಂಸ್ಥೆಗಳನ್ನು ಮತ್ತು ಇಂಡೋಕ್ರಿನೋಲಜಿ ಸಂಸ್ಥೆಗಳನ್ನು ಮೈಸೂರು ಹಾಗೂ ಕಲಬುರಗಿಯಲ್ಲಿ ಸ್ಥಾಪಿಸುವುದು.

ಕಿದ್ವಾಯಿ ಆಸ್ಪತ್ರೆಯು ರೋಬೋಟಿಕ್ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಮೊದಲ ಸರ್ಕಾರಿ ಸ್ವಾಮ್ಯದ ಕ್ಯಾನ್ಸರ್ ಆಸ್ಪತ್ರೆಯಾಗಿದ್ದು, ಇದುವರೆಗೂ 1,000 ರೋಬೋಟಿಕ್ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವ ಮೂಲಕ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದೆ.

ಕರ್ನಾಟಕದಾದ್ಯಂತ ವೈದ್ಯಕೀಯ ಕಾಲೇಜುಗಳ ಆವರಣಗಳಲ್ಲಿ ಆರೋಗ್ಯ ಸಿಬ್ಬಂದಿಯ ಸುರಕ್ಷತೆಯನ್ನು ಸುಧಾರಿಸಲು ಮತ್ತು ಲಿಂಗಾಧಾರಿತ ದೌರ್ಜನ್ಯಗಳನ್ನು ತಡೆಗಟ್ಟಲು ಸಲಹಾ ದಾಖಲೆಯಾದ ವೈಲೆಟ್ ಬುಕ್ ಅನ್ನು ಬಿಡುಗಡೆ ಮಾಡಲಾಗಿದೆ.

ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯು ರೂ. 500 ಕೋಟಿ ವೆಚ್ಚದಲ್ಲಿ ಪ್ರೋಟಾನ್ ಚಿಕಿತ್ಸಾ ಘಟಕವನ್ನು ಸ್ಥಾಪಿಸಲು ಪ್ರಸ್ತಾಪಿಸಿರುವ ಭಾರತದ ಮೊದಲ ಸರ್ಕಾರಿ ಸ್ವಾಮ್ಯದ ಸಂಸ್ಥೆ ಇದಾಗಿದೆ. ಸಾಂಪ್ರದಾಯಿಕ ರೇಡಿಯೊಥೆರಪಿಗಿಂತ ಭಿನ್ನವಾಗಿದ್ದು, ಪ್ರೋಟಾನ್ ಚಿಕಿತ್ಸೆಯು ನಿಖರವಾದ, ಉದ್ದೇಶಿತ ಪ್ರಮಾಣದಲ್ಲಿ ಚಿಕಿತ್ಸೆ ನೀಡುವ ಮೂಲಕ ಆಗಬಹುದಾದ ಅಡ್ಡಪರಿಣಾಮಗಳು ಮತ್ತು ಪಾರ್ಶ್ವ ಹಾನಿಯನ್ನು ಗಮನಾರ್ಹವಾಗಿ ಕಡಿಮೆ ಮಾಡುತ್ತದೆ.



ಮಾನ್ಯ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ ಮತ್ತು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ **ಡಾ. ಶರಣಪ್ರಕಾಶ್ ಆರ್. ಪಾಟೀಲ್** ಅವರು ಪ್ರಧಾನ ಕಾರ್ಯದರ್ಶಿಗಳಾದ **ಶ್ರೀ ಮೊಹಮ್ಮದ್ ಮೋಶಿನ್** ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕಿ **ಡಾ. ಸುಜಾತಾ ರಾಥೋಡ್ ಬಿ.ಎಲ್.** ಅವರೊಂದಿಗೆ ಸಭೆಯೊಂದರಲ್ಲಿ ಭಾಗವಹಿಸಿರುವುದು.

ನಮ್ಮ ಕರ್ನಾಟಕ ಗ್ಯಾರಂಟಿ ಕರ್ನಾಟಕ | ಶಕ್ತಿ | ಅನ್ನಭಾಗ್ಯ | ಗೃಹಜ್ಯೋತಿ | ಗೃಹಲಕ್ಷ್ಮಿ | ಯುವನಿಧಿ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

BDA, RESIDENTIAL & Commercial Anjanapura, BDA Layout, Narayananagara, BCMC Layout, Judicial Layout, Vakil Garden, Kanakapura Road 30x40, 40x60, 50x80. 9916592400

Banashankari

"AVAILABLE WANTED BDA Sites Banashankari 6TH Stg,Anjanapura Vishweshwaraiah Lyt 50x80 40x60 30x40 20x30,Value Properties Call Raju:9901315949, 9731814437

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

"BANASHANKARI 1ST STAGE 40x60, 2nd Stage 30x50, 40x60, 3rd Stage 40x50, 40x60. Genuine Buyers Call: 9845286505"

AVAILABLE BANSHANKARI 6TH STAGE 6TH BLOCK 20×30 #971 W/F 68 LAKHS CONTACT OWNER 8050908920/ 9986866661

BDA-SITE AVAILABLE @ Banashankari 6th Stage Any Block 30x40, 40x60, 50x80 Contact Rajesh: 9945610779

BDA, RESIDENTIAL, Commercial, Banashankari 2nd, 3rd, 5th & 6th stage Uttrahalli, Rajarajeshwarinagara Katriguppe, Girinagara, 30x40, 40x60, 50x80. 9916592400

Bannerghatta Road

BANNERAGATTA ROAD NISARGA LAYOUT 35X60 EF, 75X80 SE CORNER, 5000/- NANDANAVANA 50X80 3500/- WF: 9449655947

Chandapura

FOR IMMEDIATE SALE, Residential Site Suryanagara Phase-11, Karnataka Housing Board, near Chandapura, measuring 360 SqMeters (50x80) KHB Original Allotment. Price 2.3Cr (Negotiable) Seller intends to translocate to US urgently, Brokers Excuse. Call: 9886175605.

HSR Layout

HSR LAYOUT 20X30,30X40,40X60 Site`& Building for sale, &`20x30 Commercial Building Good Rental Income for sale. "Krishna"- 9886294610

Kengeri

30X50 NF, BDA Site Sale, KENGERI UPANAGARA Fully Developed, Close To Ring Road: 8496030007/ 8310885235

Kanakapura Road

SITE FOR SALE Narayana`nagar 1st Block, 1700 Sqft. South Facing 30 Feet Road, Price: 13,500/- Sqft. Call: 9740148870.

KANAKAPURA ROAD, Adjacent BSK VI Stage, 80x120, N/F BSK VI 30x40 40x60 50x80, Houses. 9448483699.

30X40 N/E CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

COMMERCIAL SITE for sale 50*80 WF BDA 300 ft/ rd very good locality Rs 14000/- Negotiable, Nadaprabhu Kempegowda Layout near Challaghatta Metro Station, Mysore Road. Contact: 9916826976

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar: 9945119449

Majestic And Around

FOR SALE: 67X72'6" (4857.50 SFT) West Facing Site with old Building at 2nd Cross Kempe Gowda Road, Behind Indian Bank, BBMP Ward 109. Brokers Excuse. Contact: 9845177455/ 9844060712

Mysore Road

NADAPRABHU KEMPEGOWDA Layout, Residential 30x40 Commercial 40x60, 50x80, 80Feet Road, 100Feet Road, 300Feet Road, Ready For Registration & Construction. 9916592400

Nagarabhavi

"40X60 NORTH FACEING Excellent Residential Site`for sale`at Vinayaka Layout Nagarbhavi 40'feet wide Road 10 minutes drive`to Metro. 9880031654"

"NAGARABHAVI NEAR Deepa Complex 40x60 North & Vishveshwaraiah 6th Block 40x60 South 100% Vastu Site. 9448432633"

Vishweshwariah Layout

VISHWESWARAIAH BDA 9th`Block.40x60 South Facing, 40 Feet`Road Near`Ambedkar Engineering College. Price 10,500/- Negotiable. Direct Owner. Call 9844947990 8431089761.

COMMERCIAL BDA SITE SALE 40x60 N/F Vishveswaraiah Layout 1st Block, 100ft Road,Contact: 9742681666, 9886634578

Bidadi

SALE OF NORTH FACING SITE (1614 SFT), KHB LAYOUT. CALL 9741922392 OR 9535393333.

Mysore

MYSORE CITY KIADB 35000 Sft & Mysore Road Bidadi Bengaluru 40x60 BMRDA Site 1600/- PerSft -9945719267

House

Jeevanbimanagar

HOUSE FOR Sale LIC Colony(Brokers Excuse) 9666640302

Jayanagar

JAYANAGAR T Block, Excellent Location Residential 40x56 Old House (South) and 40x60 East 3 Block, Murali - 9845232711

J P Nagar

SHAKAMBARINAGAR, J.P.NAGAR 1st Phase 30x40 East 11B E-Katha with Duplex house and rented building SALE 2,25,00,000/- 9845395885

Kengeri

BDA 60X40 site with building 3300sqft. Sir M V layout 2nd Block. Contact 92495 13187

Agricultural Land Converted

Kanakapura Road

SALE KANAKAPURA Town 54 Gunta Just 200 mts from main Road Ideal For Layout Ct: 9844134068 807385958

Agricultural Land

K R Puram

K.R.PURAM 4 ACRES Land J.V Or Sale, Devanahalli 3Acres Converted Land Sale, Genuine Buyers: 9916763727

Commercial Land

Sarjapur Road

PRIME 80CR Assets 5200 Sqft Koramangala AND 2Acres Sarjapur Wipro. Active CourtCase. Confirmed Daughter Share 3.5Cr, Lady Moving Abroad. Registered GPA Sale: 9481801053

Commerical

Koramangala

SALE: KORAMANGALA 5th Block COMMERCIAL 11000 Sft. Rental Income 7Lacs. Sale: 15 Crores, Call: 98450-23695/ 98451-63280/ 98450-23696

Vishweshwariah Layout

BDA COMMERCIAL 40X60 Sale KLE Law College Circle South SMV 5th-Block 80ft Road: 9945694783/ 9980433004

Flat

Uttarahalli

4BHK NEW Flats Sale, Ready to move, Cauvery, Carparking, Lift, Vaasthu, Maruthi Layout. Rs.1.10.Cr. Call: 6360501159, 9945224058.

Farm House/ Land/ Resorts

General

SOUTH GOA plot of 1225 Square meters at 20500 if interested message 9963998895

Hoskote

HOSKOTE LAND sale 4 acres Shiddlagatta Rd Near Suguna feeds, Residential zone, price 4.5 crore per Acre: 9243438373 /9611118888

Mysore Road

SALE MANGO groves 1acre 11 guntas and 16 guntas kharab 90 lakhs negotiable Kavanapura, kailuncha hobli 10 km from Ramanagara 6362964507, 9972417196

Industrial & Factory

Out-Station

INDUSTRIAL SITE, Hosur. FOR SALE. 2.5 ACERS OF LAND WITH SHED NEXT TO SIPCOT-11, HOSUR FOR SALE. CONTACT- 9059026979.

Residential/ Commercial

Anjanapura

"ANJANAPURA 8TH BLOCK 30x40 South Rs.1.25 Crore Genuine Buyers Call. "Sri.Ganesh Estate" 9845286505"

Villas/Bunglows

Jayanagar

BUY / Sale / Rent- Prestige Falcon City, Total Environment Mantri Serenity Sobha Indraprastha Purvankara Prestige West Woods Brigade Tata Promont Embassy and many more and several protects Plotted, Apartment and Villa projects in Koramangala, Jayanagar, Basavangudi, RMV Layout, Vijayanagar, Rajajinagar. 9591932400.

REAL ESTATE BUYING

Industrial & Factory

Mysore

REQUIRED LAND- FOR PURCHASE 20 to-30 Acres Industrail Converted Close to Mysore-City Centre: 9880414447 citypropman@gmail.com

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase and joint venture for MNC Company and NRI investors in and around Doddaballapura Devanahalli Chikkaballpur Sarjapura Road Hoskote-Chintamani-Malur surroundings, minimum road width 40 feet plus. Payment flexible. Elite Group 9916592400/ 9986682400elitegroupsrealtors@gmail.com

Agricultural Land

Tumkur

IMMEDIATE PURCHASE Dabaspete to Sira Highway Facing Above 40 Acres Clear Good Frontage Land. Call:8884501767

General

General

VICTORY PROPERTIES
For Anything and Everything in Real Estate,
A Leading 35 years Experienced Real Estate Company, Invest on Properties and Earn Good Returns.
For All Real Estate Requirements!
CONTACT
7411692219
8618576685
info@victoryproperties.in
www.victoryproperties.in

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI, 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

RENTAL PROPERTIES

Lease

WANTED PARTY Hall for Lease. Location: Kammanahalli, Sanjaynagar, Kothanur, Yelahanka, Jakkur, Malleshwaram. 9972849555.

Accommodation Available

Flats

MALLESWARAM 2BHK Flat,Third Floor, South Facing, Lift, Carparking. Rent 32000/-PM. Vegetarians. Call: 9845243757

FULLY FURNISHED 4 BHK flat at SANSIDH GALAXY, Rachenahalli, behind Manyata tech park with Two car parking gym, Swimming pool, club house, 24 hours Security. Rent 85,000 Negotiable Call 9686230208

KORAMANGALA RENTAL Flat 3,000 sft. Ground Floor 3 Bedrooms Fully Furnished, Rent: 1.70 lakh. 9845855663.

House

FOR LEASE, 2 BHK, 1st/ 2nd floor near Basaveshwaranagar Krishna Kalyana Mantapa Road. 9886001712, 9483399000

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Business

FOR ALL TYPES GENERAL/ HEALTH/ AUTOMOBILE INSURANCE CONTACT VICTORY GROUP, 7411692219/ 8618576685. victoryindia63@gmail.com, www.victoryindiaco.in

Finance

REQUIRED 5 Lakhs Finance please contact: 7795063380.

LOAN AGAINST PROPERTY / BUSINESS / PROJECTS CONTACT: +918754809650

WE ARRANGE LOANS for Mortgage of Site, Buildings, Construction, Completion, Takeover of Loans in Co-op Banks and NBFC. Contact : 9353705002.

MORE Classifieds Ads on Subsequent Pages

ಚಿಟಿಕೆ ಸುದ್ದಿ

ಟಿಟಿ: ತಮೋಜ್ಞಾ, ತನಿಷ್ಕಾಗೆ ಪ್ರಶಸ್ತಿ



ಮಂಗಳೂರಿನಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಭಾನುವಾರ ನಡೆದ ವಿವಿಧ ವಿಭಾಗಗಳ ಸ್ಪರ್ಧೆಗಳಲ್ಲಿ ಪ್ರಶಸ್ತಿ ಜಯಿಸಿದವರು (ಎಡದಿಂದ), ಸಾಕ್ಷ್ಯಾ ಸಂತೋಷ್, ಸಿದ್ಧಾಂತ್, ತನಿಷ್ಕಾ ಮತ್ತು ತಮೋಜ್ಞಾ

ಮಂಗಳೂರು: ಎಂ. ತಮೋಜ್ಞಾ ಮತ್ತು ತನಿಷ್ಕಾ ಕಪಿಲ್ ಕಾಲಭೈರವ ಅವರು ಇಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 15 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಶನಿವಾರ ಪ್ರಶಸ್ತಿ ಗೆದ್ದರು.

15 ವರ್ಷದೊಳಗಿನವರ ಫೈನಲ್‌ನಲ್ಲಿ ತಮೋಜ್ಞಾ 11 - 8, 11 -7, 11-3 ರಿಂದ ಎಂ. ಸಿದ್ಧಾಂತ್ ವಿರುದ್ಧ ಗೆದ್ದರು. ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ತನಿಷ್ಕಾ 11-6, 11-2 , 11-3 ರಿಂದ ಸಾಕ್ಷ್ಯ ಸಂತೋಷ್ ವಿರುದ್ಧ ಜಯಿಸಿದರು.

13 ವರ್ಷದೊಳಗಿನವರ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಸಾಕ್ಷ್ಯ 11 - 8, 11-5 , 11-5ರಿಂದ ಯುಕ್ತಾ ಹರ್ಷ ವಿರುದ್ಧ ಗೆದ್ದರು. ಬಾಲಕರ ಫೈನಲ್‌ನಲ್ಲಿ ಸಿದ್ಧಾಂತ್ 1 - 9 , 11 - 13 , 11 - 4, 8 - 11 , 11 - 9ರಿಂದ ಎಂ. ಸಾತ್ವಿಕ್ ವಿರುದ್ಧ ಜಯಿಸಿದರು.

ಹಾಕಿ: 16ರಂದು ಆಯ್ಕೆ ಟ್ರಯಲ್ಸ್

ಬೆಂಗಳೂರು: ಹಾಕಿ ಕರ್ನಾಟಕದ ಆಶ್ರಯದಲ್ಲಿ ಪುರುಷರ ವಿಭಾಗದ ರಾಜ್ಯ ಸಬ್ ಜೂನಿಯರ್ ತಂಡದ ಆಯ್ಕೆ ಟ್ರಯಲ್ಸ್ ಇದೇ 16ರಂದು ನಡೆಯಲಿದೆ. ಶಾಂತಿನಗರದ ಎಫ್‌ಎಂಕೆಎಂಸಿ ಹಾಕಿ ಕ್ರೀಡಾಂಗಣದಲ್ಲಿ ಆ ದಿನ ಬೆಳಿಗ್ಗೆ 9.30ಕ್ಕೆ ಟ್ರಯಲ್ಸ್ ಆರಂಭವಾಗಲಿದೆ. 2009ರ ಜನವರಿ 1 ಅಥವಾ ಅದರ ನಂತರ ಜನಿಸಿದ ಆಟಗಾರರು ಈ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ.

ಈ ತಂಡವು ಜುಲೈ 28ರಿಂದ ಆಗಸ್ಟ್ 8ರವರೆಗೆ ಚೆನ್ನೈನಲ್ಲಿ ನಡೆಯಲಿರುವ 15ನೇ ಹಾಕಿ ಇಂಡಿಯಾ ಸಬ್ ಜೂನಿಯರ್ ಪುರುಷರ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಆಡಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಗ್ಯಾರಂಟಿ’ಯಿಂದ ಮಹಿಳಾ ಸಬಲೀಕರಣ

ಅಹಲ್ಯಾಬಾಯಿ ಹೋಳ್ಕರ್ ಜನ್ಮದಿನಾಚರಣೆಯಲ್ಲಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳಾ ಸಬಲೀಕರಣಕ್ಕೆ ಶಕ್ತಿ, ಗೃಹಲಕ್ಷ್ಮಿಯಂತಹ ಯೋಜನೆಗಳು ಸಹಕಾರಿಯಾಗಿವೆ. ಸಮಸಮಾಜ ನಿರ್ಮಾಣ ಸಹಿಸದ ಕೆಲವರು, ಗ್ಯಾರಂಟಿ ಯೋಜನೆಗಳಿಂದ ಜನರು ಸೋಮಾರಿಗಳಾಗುತ್ತಿದ್ದಾರೆಂದು ಟೀಕಿಸುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ರಾಜ್ಯ ಅಹಲ್ಯಾಬಾಯಿ ಹೋಳ್ಕರ್ ಮಹಿಳಾ ಸಾಂಸ್ಕೃತಿಕ ಪರಿಷತ್ತು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಹಲ್ಯಾಬಾಯಿ ಹೋಳ್ಕರ್ ಅವರ 300ನೇ ಜನ್ಮ ದಿನಾಚರಣೆ ಹಾಗೂ ಸಂಘದ ರಜತ ಮಹೋತ್ಸವ ಸಮಾರಂಭ ಉದ್ಘಾಟಿಸಿದ ಅವರು ಮಾತನಾಡಿದರು.

‘ಹೆಣ್ಣು ಮಕ್ಕಳು ಶಿಕ್ಷಿತರಾಗಿ, ಆರ್ಥಿಕ ಮತ್ತು ಸಾಮಾಜಿಕವಾಗಿ ಸಬಲರಾಗಬೇಕು. ಈ ಕಾರಣಕ್ಕೆ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಪ್ರತಿ ತಿಂಗಳು ₹2 ಸಾವಿರ ಒದಗಿಸಲಾಗುತ್ತಿದೆ. ಬಸ್‌ಗಳಲ್ಲಿ ಓಡಾಡುವುದರಿಂದ, ಅಕ್ಕಿಯನ್ನು ಉಚಿತವಾಗಿ ನೀಡುವುದರಿಂದ ಜನರು ಸೋಮಾರಿಗಳಾಗುತ್ತಾರಾ? ಅನುಭವದ ಆಧಾರದ ಮೇಲೆ ಉಚಿತವಾಗಿ ಅಕ್ಕಿ ನೀಡುವ ಯೋಜನೆ ಜಾರಿ ಮಾಡಿದ್ದೇನೆ. ಗೃಹಲಕ್ಷ್ಮಿ ಯೋಜನೆಯಡಿ 1.23 ಕೋಟಿ ಕುಟುಂಬಗಳ ಯಜಮಾನಿಗೆ ಪ್ರತಿ ತಿಂಗಳು ತಲಾ ₹2 ಸಾವಿರ ನೀಡುತ್ತಿದ್ದೇವೆ. ಇದು ಮಹಿಳಾ ಸಬಲೀಕರಣಕ್ಕೆ ಸಹಕಾರಿಯಾಗಿದೆ’ ಎಂದರು.

‘ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100 ರಷ್ಟು ಅಂಕಗಳ ಸಾಧನೆಯಲ್ಲಿ ಹೆಣ್ಣು ಮಕ್ಕಳೇ ಮುಂದಿದ್ದಾರೆ. ಸೇನೆ, ಅಂತರಿಕ್ಷ ಕ್ಷೇತ್ರದಲ್ಲೂ ಹೆಣ್ಣುಮಕ್ಕಳು ಕೆಲಸ ಮಾಡುತ್ತಿರುವುದು ಮಹಿಳಾ ಕುಲದ ಪ್ರಗತಿಯ ಪ್ರತೀಕ’ ಎಂದು ಅಭಿಪ್ರಾಯಪಟ್ಟರು.

‘ಅಹಲ್ಯಾಬಾಯಿ ಅವರ ಹೆಸರಿನಲ್ಲಿ ಮಹಿಳಾ ವಸತಿ ನಿಲಯ ನಿರ್ಮಾಣಕ್ಕೆ ಬೆಂಗಳೂರಿನಲ್ಲಿ ಜಾಗ ಒದಗಿಸಬೇಕು’ ಎಂಬ ಸಂಘದ ಅಧ್ಯಕ್ಷೆ ವಚನ ಕೆ.ಆರ್. ಅವರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿ, ‘ಸಂಘಕ್ಕೆ ಬೆಂಗಳೂರಿನಲ್ಲಿ ಜಮೀನು ನೀಡುವ ಜತೆಗೆ ವಸತಿ ನಿಲಯ ನಿರ್ಮಾಣಕ್ಕೂ ಸಹಕಾರ ನೀಡಲಾಗುವುದು’ ಎಂದು ಭರವಸೆ ನೀಡಿದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ‘ಅಹಲ್ಯಾಬಾಯಿ ಹೋಳ್ಕರ್ ಅವರು ಮಹಿಳೆಯರ ಶಕ್ತಿ ಮತ್ತು ಧ್ವನಿಯಾಗಿದ್ದರು. ಅನೇಕ ಸಮಾಜ ಸುಧಾರಣಾ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಿದ್ದರು’ ಎಂದು ಸ್ಮರಿಸಿಕೊಂಡರು.



ಸಮಾರಂಭದಲ್ಲಿ ವಚನ ಕೆ.ಆರ್., ಬೈರತಿ ಸುರೇಶ್, ಎಚ್‌.ಎಂ.ರೇವಣ್ಣ, ಈಶ್ವರಾನಂದಪುರಿ ಸ್ವಾಮೀಜಿ ಮತ್ತು ಸಿದ್ದರಾಮಯ್ಯ ಅವರು ಅಹಲ್ಯಾಬಾಯಿ ಹೋಳ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಉದ್ಯೋಗ: 185 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉದ್ಯೋಗ ಪಡೆದ 185 ಅಭ್ಯರ್ಥಿಗಳಿಗೆ ಕೇಂದ್ರ ಸಣ್ಣ ಮತ್ತು ಮಧ್ಯಮ ಉದ್ಯಮಗಳು ರಾಜ್ಯ ಖಾತೆ ಸಚಿವರಾದ ಶೋಭಾ ಕರಂದ್ಲಾಜೆ ಅವರು ಶನಿವಾರ ನೇಮಕಾತಿ ಪತ್ರಗಳನ್ನು ವಿತರಿಸಿದರು.

ನಂತರ ಮಾತನಾಡಿದ ಅವರು, ‘ರಾಷ್ಟ್ರ ನಿರ್ಮಾಣದಲ್ಲಿ ಸರ್ಕಾರಿ ನೌಕರರ ಪಾತ್ರ ಪ್ರಮುಖವಾಗಿದೆ. ಜ್ಞಾನ, ಕೌಶಲ ಮತ್ತು ಕಠಿಣ ಪರಿಶ್ರಮ ಹಾಗೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವ ಮೂಲಕ ಇಲಾಖೆಗಳ ಬೆಳವಣಿಗೆಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

‘ಪ್ರಧಾನಿ ನರೇಂದ್ರ ಮೋದಿ ಅವರು ಉದ್ಯೋಗ ಸೃಷ್ಟಿಗೆ ಹೆಚ್ಚು ಆದ್ಯತೆ ನೀಡುತ್ತಿದ್ದಾರೆ. ದೇಶದ ಯುವಜನರ ಸಬಲೀಕರಣ ಮತ್ತು ದೇಶ ನಿರ್ಮಾಣದಲ್ಲಿ ಅವರ ಪಾಲ್ಗೊಳ್ಳುವಿಕೆ ಹಾಗೂ ಅರ್ಥಪೂರ್ಣ ಅವಕಾಶ ನೀಡುವಲ್ಲಿ ಉದ್ಯೋಗ ಮೇಳವು ಮಹತ್ವದ ಪಾತ್ರ ವಹಿಸುತ್ತಿದೆ. ದೇಶದಾದ್ಯಂತ ಇದುವರೆಗೆ 10 ಲಕ್ಷಕ್ಕೂ ಹೆಚ್ಚು ನೇಮಕಾತಿ ಪತ್ರಗಳನ್ನು ವಿತರಿಸಲಾಗಿದೆ’ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ರೈಲ್ವೆ ಇಲಾಖೆ (61), ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ (46), ಬಿಎಸ್‌ಎಫ್ ಮತ್ತು ಸಿಐಎಸ್‌ಎಫ್‌ನಲ್ಲಿ (14), ಅಂಚೆ ಇಲಾಖೆಯ (12), ಆದಾಯ ತೆರಿಗೆ ಇಲಾಖೆ (7), ಆಯುಷ್ ಇಲಾಖೆ (2), ನಿಮ್ಹಾನ್ಸ್ (10), ಭಾರತೀಯ ಪುರಾತತ್ವ ಇಲಾಖೆ (11), ಮರ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (9) ಮತ್ತು ಕೇಂದ್ರ ತೆರಿಗೆ (ಸಿಜಿಎಸ್‌ಟಿ) (13) ಅಭ್ಯರ್ಥಿಗಳು ಸೇರಿದಂತೆ ಒಟ್ಟು 185 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರಗಳನ್ನು ವಿತರಿಸಲಾಯಿತು.

ನೈರುತ್ಯ ರೈಲ್ವೆಯ ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕ ಆಶುತೋಷ್ ಮಾಥುರ್, ಹಿರಿಯ ವಿಭಾಗೀಯ ಸಿಬ್ಬಂದಿ ಅಧಿಕಾರಿ ಉಮಾ ಶರ್ಮಾ ಉಪಸ್ಥಿತರಿದ್ದರು.

ಲಿಂಗತ್ವ ಅಲ್ಪಸಂಖ್ಯಾತರ ಉಚಿತ ಆಟೊ ಚಾಲನಾ ತರಬೇತಿಗೆ ಚಾಲನೆ

ಬ್ರಿಟಿಷ್ ಕಾಲದ ಕಾಯ್ದೆ ಬದಲಿಸಲು ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಿಟಿಷರ ಕಾಲದ ಕಾರ್ಮಿಕ ಕಾನೂನುಗಳನ್ನು ಬದಲಾಯಿಸಿ ನಾಲ್ಕು ಸಂಹಿತೆಗಳನ್ನು (ಕೋಡ್) ರೂಪಿಸಲಾಗುತ್ತಿದೆ. ಅಸಂಘಟಿತ ಕಾರ್ಮಿಕರಿಗೂ ಸಾಮಾಜಿಕ ಭದ್ರತೆಯನ್ನು ಒದಗಿಸುವುದಕ್ಕಾಗಿ ಒಂದು ಸಂಹಿತೆ ಇರಲಿದೆ ಎಂದು ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವರಾದ ಶೋಭಾ ಕರಂದ್ಲಾಜೆ ತಿಳಿಸಿದರು.

ಬಿ.ಪ್ಯಾಕ್ ಹಾಗೂ ಸಿಜಿಐ ಶನಿವಾರ ಹಮ್ಮಿಕೊಂಡಿದ್ದ ‘ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಗೆ ಉಚಿತ ಆಟೊ ಚಾಲನಾ ತರಬೇತಿ’ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬ್ರಿಟಿಷರು ಇಲ್ಲಿನ ದುಡಿಮೆಗಾರರನ್ನು ಕಾರ್ಮಿಕರೆಂಬಂತೆ ನೋಡದೆ ಗುಲಾಮರು ಎಂದು ಭಾವಿಸಿದ್ದರು. ಅವರು ರೂಪಿಸಿದ 29 ಕಾರ್ಮಿಕ ಕಾಯ್ದೆಗಳಿವೆ. ಅವೆಲ್ಲವನ್ನು ಕೇಂದ್ರ ಸರ್ಕಾರ ಒಟ್ಟುಗೂಡಿಸಿ ನಾಲ್ಕು ಸಂಹಿತೆ ಮಾಡಲಿದೆ ಎಂದು ವಿವರಿಸಿದರು.

ದೇಶದಲ್ಲಿ 90 ಕೋಟಿ ಜನರು ದುಡಿಯುವವರಾಗಿದ್ದಾರೆ. ಅದರಲ್ಲಿ ಶೇ 10ರಷ್ಟು ಮಾತ್ರ ಸರ್ಕಾರಿ ಅಥವಾ ಖಾಸಗಿ ಸಂಘಟಿತ ನೌಕರರು. ಉಳಿದವರು ಅಸಂಘಟಿತ ಕಾರ್ಮಿಕರಾಗಿದ್ದಾರೆ. ಈಗ ಮಹಾನಗರಗಳಲ್ಲಿ ಗಿಗ್ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ. ಆನ್‌ಲೈನ್‌ನಲ್ಲಿ ಬುಕ್ಕಿಂಗ್ ಮಾಡಿದಾಗ ಮನೆಗೆ ತಲುಪಿಸುವ ಕಾರ್ಮಿಕರು ಅವರು. ಇನ್ನು 10 ವರ್ಷದಲ್ಲಿ ಗಿಗ್ ಕಾರ್ಮಿಕರ ಸಂಖ್ಯೆ 25 ಕೋಟಿ ದಾಟಲಿದೆ. ಗಿಗ್ ಕಾರ್ಮಿಕರು, ಆಟೊ ಚಾಲಕರೂ ಸೇರಿದಂತೆ ಎಲ್ಲ ಅಸಂಘಟಿತ ಕಾರ್ಮಿಕರಿಗೂ ಸಂಘಟಿತ ನೌಕರರಿಗೆ ಸಿಗುವ ಸಾಮಾಜಿಕ ಭದ್ರತೆ ಸಿಗಬೇಕು ಎಂಬುದು ಕೇಂದ್ರ ಸರ್ಕಾರದ ಚಿಂತನೆ ಎಂದು ಹೇಳಿದರು.

ಮಹಿಳೆಯರು ಆಟೊ ಚಾಲಕರಾದರೆ ಮಹಿಳಾ ಪ್ರಯಾಣಿಕರು ಧೈರ್ಯವಾಗಿ ರಾತ್ರಿಯೂ ಸಂಚರಿಸಲು ಸಾಧ್ಯ ಎಂದರು.

ಸಿಜಿಐ ಏಷ್ಯಾ ಪೆಸಿಫಿಕ್ ಉಪಾಧ್ಯಕ್ಷರಾದ ಶ್ರೀವಿದ್ಯಾ ನಟರಾಜ್, ಸಾರಿಕಾ ಪ್ರಧಾನ್, ಸಿಎಸ್‌ಆರ್ ಮುಖ್ಯಸ್ಥರಾದ ಸುಧಾಕರ್ ಪೈ, ಬಿ.ಪ್ಯಾಕ್ ಸದಸ್ಯರಾದ ಮಿಮಿ ಪಾರ್ಥ ಸಾರಥಿ, ಚಿತ್ರ ತಲ್ವಾರ್, ಕಾವೇರಿ ಭಾಗವಹಿಸಿದ್ದರು.

ಮುಖ್ಯಾಂಶಗಳು

- 60 ದಿನಗಳ ತರಬೇತಿ ನೀಡುತ್ತಿರುವ ಬಿ.ಪ್ಯಾಕ್, ಸಿಜಿಐ
- ನೂರಕ್ಕೂ ಹೆಚ್ಚು ಲಿಂಗತ್ವ ಅಲ್ಪಸಂಖ್ಯಾತರಿಗೆ ತರಬೇತಿ
- ಆರ್ಥಿಕ ಸಬಲೀಕರಣದ ಉದ್ದೇಶದಿಂದ ಮಹಿಳೆಯರಿಗೂ ತರಬೇತಿ



ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ ಅವರು ಮಹಿಳೆ ಚಲಾಯಿಸುವ ಆಟೊದಲ್ಲಿ ಸಂಚರಿಸುವ ಮೂಲಕ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಉಚಿತ ಆಟೊ ಚಾಲನಾ ತರಬೇತಿಗೆ ಚಾಲನೆ ನೀಡಿದರು ಪ್ರಜಾವಾಣಿ ಚಿತ್ರ

‘ಭಾವನೆಗಳ ಅಭಿವ್ಯಕ್ತಿಗೆ ಸಣ್ಣಕತೆ ಸೂಕ್ತ ಮಾಧ್ಯಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಣ್ಣಕತೆಗಳು ಮನುಷ್ಯನ ಭಾವನೆಗಳಿಗೆ ಸೂಕ್ತ ಅಭಿವ್ಯಕ್ತಿಯ ಮಾಧ್ಯಮವಾಗಬಲ್ಲವು ಎಂದು ಸಾಹಿತಿ ಬಾನು ಮುಷ್ತಾಕ್ ಪ್ರತಿಪಾದಿಸಿದರು.

ನಗರದ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಶನಿವಾರ ಆಯೋಜಿಸಿದ್ದ ವಾರ್ಷಿಕ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

‘ನನಗೆ ಉರ್ದು, ಹಿಂದಿ, ಇಂಗ್ಲಿಷ್, ಅರೇಬಿಕ್ ಮುಂತಾದ ಬಹುಭಾಷೆಯ ಜ್ಞಾನವಿದ್ದರೂ ಕನ್ನಡವೇ ನನ್ನ ಮೆಚ್ಚಿನ ಭಾಷೆ’ ಎಂದು ಹೇಳಿದರು.

‘1948ರಲ್ಲಿ ಕೆಲವು ವಿದ್ಯಾರ್ಥಿನಿಯರೊಂದಿಗೆ ಆರಂಭವಾದ ಈ ಸಂಸ್ಥೆ ಇಂದು ಸಾವಿರಾರು ವಿದ್ಯಾರ್ಥಿಗಳಿಗೆ ಆಶ್ರಯ ನೀಡುವ ಮರವಾಗಿದೆ. ಇದು ಹೆಮ್ಮೆಯ ವಿಷಯ’ ಎಂದರು.

ನಂತರ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೊಂದಿಗೆ ನಡೆದ ಸಂವಾದದಲ್ಲಿ, ಎಂಟು ವರ್ಷದವರೆಗೆ ಕನ್ನಡದ ಗೊತ್ತಿಲ್ಲದಿದ್ದರೂ, ಕೆಲವೇ ತಿಂಗಳಲ್ಲಿ ಕನ್ನಡವನ್ನು ಸಮರ್ಥವಾಗಿ ಕಲಿತು ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪಡೆಯುವವರೆಗಿನ ಅನುಭವ ಮತ್ತು ಎದುರಿಸಿದ ಸವಾಲುಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಕಾಲೇಜಿನ ನಿರ್ದೇಶಕರಾದ ಸಿಸ್ಟರ್ ಅಲ್ಬಿನ, ಪ್ರಾಚಾರ್ಯರಾದ ಲೇಖಾ ಜಾರ್ಜ್, ಸಿಸ್ಟರ್ ಆನೆಟ್, ಸಿಸ್ಟರ್ ಅಯೋನ, ಸುಮಾ ಸಿಂಗ್, ನಿವೃತ್ತ ಪ್ರಾಧ್ಯಾಪಕರು, ಪ್ರಾಧ್ಯಾಪಕರು ಹಾಗೂ ಅಪಾರ ಸಂಖ್ಯೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಕಾರ್ಯಕ್ರಮದಲ್ಲಿ ಸಾಹಿತಿ ಬಾನು ಮುಷ್ತಾಕ್ ಅವರನ್ನು ಸನ್ಮಾನಿಸಲಾಯಿತು.

ಕಲಬೆರಕೆ ಆಹಾರೌಷಧಿಗಳಿಂದ ಅಪಾಯ, ಹೃದಯ ಸ್ತಂಭನ, ಮೂತ್ರಪಿಂಡ ವೈಫಲ್ಯಕ್ಕೂ ದಾರಿ

ವ್ಯಾಮೋಹದ ಜಿಮ್, ಸ್ಟೆರಾಯ್ಡ್





ವ್ಯಾಯಾಮ, ಕ್ರೀಡೆಗಳ ಮೂಲ ಉದ್ದೇಶ ಆರೋಗ್ಯವರ್ಧನೆ, ಮನೋಲ್ಲಾಸಗಳನ್ನು ನೀಡುವುದೇ ಆಗಿದೆ. ಆದರೆ, ಅಲ್ಪಕಾಲದ ಯಶಸ್ಸು, ಹಣ ಗಳಿಕೆ, ಖ್ಯಾತಿ ಮತ್ತಿತರ ಆಮಿಷಗಳಿಗೆ ಯುವಕರು ಬಲಿಯಾಗುತ್ತಿದ್ದಾರೆ. ಹುರಿಗಟ್ಟಿದ ದೇಹ ಕಟ್ಟಲು ಹೆಚ್ಚು ಉತ್ಸುಕರಾಗಿರುವ ಇಂದಿನ ಯುವ ಸಮೂಹ ಅದಕ್ಕಾಗಿ ಅಗತ್ಯವಿರುವ ಸಮಯಕ್ಕಾಗಿ ಕಾಯುವಷ್ಟೂ ವ್ಯವಧಾನವಿಲ್ಲ. ಹೀಗಾಗಿ ತ್ವರಿತವಾಗಿ ಮಾಂಸಖಂಡಗಳನ್ನು ಉಬ್ಬಿಸಿಕೊಳ್ಳಲು ಗ್ರೋತ್ ಹಾರ್ಮೋನ್‌ಗಳು, ಸ್ಟೆರಾಯ್ಡ್‌ಗಳ ಮೊರೆ ಹೋಗುತ್ತಿದ್ದಾರೆ. ಇನ್ನೂ ಕೆಲವರು ಚುಚ್ಚುಮದ್ದು ಅಥವಾ ಅನ್ಯ ಮಾರ್ಗಗಳನ್ನು ಆಯ್ದುಕೊಂಡು ಪ್ರಾಣ ಕಳೆದುಕೊಂಡ ಉದಾಹರಣೆಗಳೂ ಇವೆ.

• ದೀಪಕ್ ಎನ್.

ಬೆಂಗಳೂರು: ಬಾಹುಬಲಿಯಂತೆ ಕಾಣುವ 40 ವರ್ಷ ವಯಸ್ಸಿನ ಆ ವ್ಯಕ್ತಿ ವೃತ್ತಿಯಲ್ಲಿ ವೈದ್ಯನಾಗಿದ್ದ. ಆದರೆ, ಒಂದು ದಿನ ಹಠಾತ್ತಾಗಿ ಸಾವಿಗೀಡಾದ! ಆವರನ್ನು ನೋಡಿದವರು 'ಅಬ್ಬಾ..' ಎನ್ನುವ ಮಟ್ಟಿಗೆ ಮಾಂಸಖಂಡಗಳನ್ನು ಬೆಳೆಸಿಕೊಂಡಿದ್ದ. ಆದರೆ, ಆ ಹಂತದಲ್ಲಿ ಮಾಡಿದ್ದ ಪ್ರಮಾದ ಭವಿಷ್ಯದ ಜೀವನವನ್ನು ಅಂತ್ಯ ಮಾಡಿತ್ತು. ಪೌಷ್ಟಿಕ ಆಹಾರೌಷಧಿ (ಫುಡ್ ಸಪ್ಲಿಮೆಂಟ್) ಹೆಸರಿನಲ್ಲಿ ಸ್ಟೆರಾಯ್ಡ್‌ಗಳನ್ನು ಸೇವಿಸಿದ್ದ ಎಂಬ ವಿಷಯ ಗೊತ್ತಾಗಲೇ ಇಲ್ಲ.

ಇನ್ನೊಬ್ಬ ಯುವಕನ ಕತೆಯೂ ಇದೇ ತರ. ಬೆಂಗಳೂರಿನ ನಿವಾಸಿಯಾಗಿದ್ದ ಆತ ಖಾಸಗಿ ಕಂಪೆನಿಯಲ್ಲಿ ಒಳ್ಳೆಯ ಹುದ್ದೆಯಲ್ಲಿದ್ದ. ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ವೇಳೆ ಎರಡೂ ಹೊತ್ತು ವ್ಯಾಯಾಮ ಮಾಡುತ್ತಿದ್ದ. ಒಂದು ವರ್ಷ ದಾಟುವಷ್ಟರಲ್ಲಿ ಮಾಂಸಖಂಡಗಳು ಹುರಿಗಟ್ಟತೊಡಗಿದವು. ಕಡಿಮೆ ಅವಧಿಯಲ್ಲಿ ಆತನ ಈ ಬೆಳವಣಿಗೆ ನೋಡಿ ಸ್ನೇಹಿತರು ಅಚ್ಚರಿಯಿಂದ ನೋಡುತ್ತಿದ್ದರು. ಆದರೆ ಅದೊಂದು ದಿನ ಸಂಜೆ ಮನೆಗೆ ಬಂದವನೇ ಎದೆನೋವು ಎಂದು ಕುಸಿದ. ಆಸ್ಪತ್ರೆ ಮುಟ್ಟುವಷ್ಟರಲ್ಲಿ ಹೃದಯ ನಿಂತು ಪ್ರಾಣಪಕ್ಷಿ ಹಾರಿಹೋಗಿತ್ತು. ಆತ ಪ್ರತಿದಿನ ಹಾಲಿಗೆ ಬೆರೆಸಿ ಕುಡಿಯುತ್ತಿದ್ದ ಶಕ್ತಿವರ್ಧಕ ಪುಡಿ ಜೀವಕ್ಕೆ ಕುತ್ತು ತಂದಿತ್ತು.

ಇಂತಹ ಪ್ರಕರಣಗಳು ರಾಜ್ಯದ ಪಟ್ಟಣ, ನಗರ, ಮಹಾನಗರಗಳಲ್ಲಿ ಬಹಳಷ್ಟು ನಡೆಯುತ್ತಿವೆ. ಯುವ ಸಮೂಹ, ಕ್ರೀಡೆ, ಸಿನಿಮಾ ಜಗತ್ತನ್ನು ಕಂಡುಕಾಣದಂತೆ ಆವರಿಸಿಕೊಂಡಿರುವ 'ಸ್ಟೆರಾಯ್ಡ್ ದಂಧೆ' ಈಗ ಕರಾಳ ಮುಖ ತೋರಿಸತೊಡಗಿದೆ. ದುಡ್ಡಿನ ಆಸೆಗೆ ಬಹಳಷ್ಟು ಜಿಮ್ನಾಷಿಯಂಗಳು, ಟ್ರೇನರ್‌ಗಳು ಈ ಮಾರಕ 'ಪೌಡರ್', 'ಸ್ಟೆರಾಯ್ಡ್'ಗಳ ಏಜೆಂಟ್‌ರಾಗಿದ್ದಾರೆ. ಕೆರೆಟಿಯನ್, ಅನಾಬೊಲಿಕ್ ಸ್ಟೆರಾಯ್ಡ್‌ಗಳನ್ನು ದೇಹಕ್ಕೆ ಸೇರಿಸುವ ದಂಧೆ ಇದಾಗಿದೆ ಎನ್ನುತ್ತಾರೆ ಹೆಸರು ಹೇಳಲು ಇಚ್ಛಿಸದ ಕ್ರೀಡಾ ವೈದ್ಯರು.

'ಹೆಚ್ಚಿನ ಪ್ರೋಟಿನ್ ಪೌಡರ್‌ಗಳು ಹಾಲಿನಲ್ಲಿ ಬೆರಸಿಕೊಂಡು ಕುಡಿಯುವಂತಹವೇ ಆಗಿವೆ. ಬಹುತೇಕ ಪ್ರೋಟಿನ್‌ಗಳು ಆಹಾರ ಮತ್ತು ಔಷಧ ಸಂಸ್ಥೆಯಿಂದ (ಎಫ್‌ಡಿಎ) ಅನುಮೋದನೆ ಪಡೆದಿವೆ. ಇವುಗಳನ್ನು ವಿಶ್ವದಾದ್ಯಂತ ಬಳಕೆ ಮಾಡಲಾಗುತ್ತಿದೆ. ಹಾಗಾಗಿ ಪ್ರೋಟಿನ್ ಎಂಬುದು ಹಾನಿಕಾರಕ ಪದಾರ್ಥವಲ್ಲ. ಆದರೆ, ಗ್ರೋತ್ ಹಾರ್ಮೋನ್ (ಜಿಎಚ್) ಮತ್ತು ಸ್ಟೆರಾಯ್ಡ್‌ಗಳ ಬಳಕೆ ಹೆಚ್ಚು ಅಪಾಯಕಾರಿ. ಟೆಸ್ಟೋಸ್ಟಿರಾನ್ ಪುರುಷರಲ್ಲಿನ ಪ್ರಮುಖ ಹಾರ್ಮೋನ್ ಆಗಿದೆ. ಮಹಿಳೆಯರಲ್ಲಿ ಇದು ಅಲ್ಪ ಪ್ರಮಾಣದಲ್ಲಿ ಇರುತ್ತದೆ. ಈ ಹಾರ್ಮೋನ್ ಮಟ್ಟ ಹೆಚ್ಚಿಸಿಕೊಳ್ಳಲು ಮತ್ತು ಜೀರ್ಣಾಂಗ ವ್ಯವಸ್ಥೆಗೆ ಸಂಬಂಧಿಸಿದ (ಚಯಾಪಚಯ) ಸಮಸ್ಯೆಯಿಂದ ಹೊರಬರಲು ಹಾಗೂ ಬೊಜ್ಜು ಕರಗಿಸಲು ಸ್ಟೆರಾಯ್ಡ್‌ಗಳ ಬಳಸಲಾಗುತ್ತಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಜಿಮ್‌ಗಳಿಗೆ ತೆರಳುವ ಯುವಕರು ಕೆಲವೇ ದಿನಗಳಲ್ಲಿ ಮಾಂಸಖಂಡಗಳನ್ನು ಹುರಿಗೊಳಿಸುವ ಉದ್ದೇಶದಿಂದ ಸ್ಟೆರಾಯ್ಡ್‌ಗಳ ಮೊರೆ ಹೋಗುತ್ತಿದ್ದಾರೆ' ಎಂದು ಗೋಲ್ಡ್ ಜಿಮ್‌ನ ಸಿಒಒ ವಿನಯ್ ಹೇಳುತ್ತಾರೆ.

'ಬ್ಲಾಕ್ ಮಾಂಬಾ'ದಂತಹ ಸ್ಟೆರಾಯ್ಡ್‌ಗಳನ್ನು ಭಾರತದಲ್ಲಿ ನಿಷೇಧಿಸಲಾಗಿದೆ. ಇವುಗಳನ್ನು ಬಳಸುವುದರಿಂದ ದೇಹದ ಹಾರ್ಮೋನುಗಳ ನಿಯಂತ್ರಣದಲ್ಲಿ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ. ಓಟಕ್ಕೂ ಮುನ್ನ ಕುದುರೆಗೆ ನೀಡುವ ಚುಚ್ಚುಮದ್ದುಗಳನ್ನು ಒಳಗೊಂಡ ಪದಾರ್ಥಗಳನ್ನು ಈ ಸ್ಟೆರಾಯ್ಡ್‌ಗಳಲ್ಲಿ ಬಳಸಲಾಗಿರುತ್ತದೆ. ಇವು ಮನುಷ್ಯನ ದೇಹಕ್ಕೆ ಹೆಚ್ಚು ಅಪಾಯಕಾರಿ. ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಜಿಮ್‌ಗಳಲ್ಲಿ ಟ್ರೇನರ್‌ಗಳು ಕಡ್ಡಾಯವಾಗಿ ತರಬೇತಿ ಪಡೆದಿರುತ್ತಾರೆ. ಜತೆಗೆ ಸೂಕ್ತ ಪ್ರಮಾಣಪತ್ರಗಳನ್ನು ಹೊಂದಿರುತ್ತಾರೆ. ಜತೆಗೆ, ಮೂರು ಹಂತ ಡಯಟೀಷಿಯನ್ ಕೋರ್ಸ್‌ಗಳನ್ನು ಪೂರ್ಣಗೊಳಿಸಿರುತ್ತಾರೆ. ಸದ್ಯದ ಮಟ್ಟಿಗೆ ಬೆಂಗಳೂರು ಸೇರಿದಂತೆ ದೇಶದ ಬಹುತೇಕ ನಗರಗಳಲ್ಲಿ ಶೇ 90ರಷ್ಟು ಜಿಮ್‌ಗಳಲ್ಲಿ ಈ ನಿಯಮಗಳು ಪಾಲನೆ ಆಗುತ್ತಿಲ್ಲ. ಶೇ 8ರಿಂದ 10ರಷ್ಟು ಜಿಮ್‌ಗಳಲ್ಲಿ ಮಾತ್ರ ಕಡ್ಡಾಯವಾಗಿ ನಿಯಮಗಳನ್ನು ಅನುಸರಿಸಲಾಗುತ್ತಿದೆ' ಎಂದು ಹೇಳುತ್ತಾರೆ ವಿನಯ್.

ಈಗಂತೂ ಬೆಂಗಳೂರು, ಮೈಸೂರು, ಬೆಳಗಾವಿ, ಹುಬ್ಬಳ್ಳಿ, ಮಂಗಳೂರು, ಕಲಬುರಗಿ ಸೇರಿದಂತೆ ಎಲ್ಲಾ ನಗರಗಳಲ್ಲಿ ಪ್ಯಾಕೇಜ್ (ವ್ಯಾಯಾಮ + ವೈಯಕ್ತಿಕ ಟ್ರೇನರ್ + ಫುಡ್ ಸಪ್ಲಿಮೆಂಟ್) ಕೂಡ ನೀಡಲಾಗುತ್ತಿದೆ. ತಿಂಗಳಿಗೆ ₹30ರಿಂದ ₹50 ಸಾವಿರದವರೆಗೂ ಶುಲ್ಕ ಪಡೆಯಲಾಗುತ್ತಿದೆ. ಕೆಲವೇ ತಿಂಗಳಲ್ಲಿ 'ಸಿಕ್ಸ್‌ಪ್ಯಾಕ್' ಗ್ಯಾರಂಟಿ ಎಂಬ ವಾಗ್ದಾನವೂ ದೊರೆಯುತ್ತದೆ.

ಯುಟ್ಯೂಬ್ ಅಥವಾ ಅಂತರ್ಜಾಲತಾಣಗಳಲ್ಲಿ ಉಚಿತವಾಗಿ ಲಭ್ಯವಿರುವ ಕೆಲವರ ಮಾರ್ಗದರ್ಶನಗಳನ್ನು ಆಧರಿಸಿ ದೇಹ ಹುರಿಗಟ್ಟುವ (ಬಾಡಿ ಬಿಲ್ಡ್ ಮಾಡುವುದು) ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿವೆ. ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊಗಳನ್ನು ವೀಕ್ಷಿಸಿ ರಾತ್ರಿ ಬೆಳಗಾಗುವುದರೊಳಗೆ ಮಾಂಸಖಂಡಗಳನ್ನು ಹುರಿಗೊಳಿಸುವ ಹಠಕ್ಕೆ ಬಿದ್ದ ಅನೇಕರು ಸ್ಟೆರಾಯ್ಡ್‌ಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರಿಂದಾಗಿ ಮೂತ್ರಪಿಂಡ, ಯಕೃತ್ ಹಾನಿಯಾಗುವುದರ ಜತೆಗೆ ದೇಹದ ಮೇಲೆ ಲೆಕ್ಕವಿಲ್ಲಷ್ಟು ಅಡ್ಡ ಪರಿಣಾಮಗಳು ಬೀರುತ್ತವೆ ಎನ್ನುತ್ತಾರೆ ವೈದ್ಯರು.

'ಚುಚ್ಚುಮದ್ದು, ಸ್ಟಿರಾಯ್ಡ್ ತೆಗೆದುಕೊಂಡಾಗ ವ್ಯಾಯಾಮ ಮಾಡುವ ಸಾಮರ್ಥ್ಯ ಹೆಚ್ಚಾಗುತ್ತದೆ. ಟೆಸ್ಟೋಸ್ಟಿರಾನ್ ಹಾರ್ಮೋನ್ ಅನ್ನು ಉದ್ದೀಪನಗೊಳಿಸುತ್ತದೆ. 100 ಬಸ್ಕಿ ಹೊಡೆಯಬಲ್ಲ ವ್ಯಕ್ತಿ ಸ್ಟೆರಾಯ್ಡ್ ತೆಗೆದುಕೊಂಡಾಗ ಸಾವಿರಕ್ಕೂ ಹೆಚ್ಚು ಬಸ್ಕಿ ತೆಗೆಯಬಲ್ಲ. ಇದರಿಂದ ಬೇಗನೇ ದೇಹ ಹುರಿಗಟ್ಟುತ್ತದೆ. ಆದರೆ, ಈ ಮದ್ದುಗಳನ್ನು ತೆಗೆದುಕೊಳ್ಳುವವರು ಆರಂಭದ ಕೆಲವು ವರ್ಷ ಆರಾಮವಾಗಿ ಇರುತ್ತಾರೆ. ಆದರೆ, ದೀರ್ಘಾವಧಿಯಲ್ಲಿ ಪ್ರತಿಕೂಲ ಪರಿಣಾಮ ಬೀರುವ ಈ ಔಷಧಿಗಳು ಉಳಿದ ಆಯಸ್ಸನ್ನು ನುಂಗಿಬಿಡುವುದು ಗ್ಯಾರಂಟಿ' ಎನ್ನುತ್ತಾರೆ ವೈದ್ಯರಾದ ಕಿಶೋರ್.

'ಜಿಮ್‌ಗಳಲ್ಲಿ ಯಾರಾದರೂ ಪುಡಿ, ಔಷಧಿಗಳನ್ನು ಕೊಡಲು ಬಂದರೆ ಜಾಗೃತರಾಗಿರಬೇಕು. ನಾವು ತಿಳಿವಳಿಕೆ ಹೇಳುವ ಪ್ರಯತ್ನ ಮಾಡುತ್ತೇನೆ. ಆದರೆ, ಅದರಲ್ಲಿ ಬಹುತೇಕರು ಪಾಲಿಸುವುದಿಲ್ಲ. ಎಲ್ಲಾ ಕೆಟ್ಟ ಮೇಲೆ ಮತ್ತೆ ಬರುತ್ತಾರೆ. ಪ್ರೋಟೀನ್ ಪೌಡರ್, ಸ್ಟೆರಾಯ್ಡ್ ದಂಧೆಯಲ್ಲಿ ತೊಡಗುವ ಕೋಚ್‌ಗಳು, ಜಿಮ್ ಮಾಲೀಕರಷ್ಟೇ ತಪ್ಪಿತಸ್ಥರಲ್ಲ. ಬಳಸುವವರೂ ಅಪರಾಧಿಗಳೇ. ಯಾವ ಔಷಧಿ ತೆಗೆದುಕೊಳ್ಳಬೇಕು, ತೆಗೆದುಕೊಳ್ಳಬಾರದು ಎಂಬುದು ಇಂಟರ್‌ನೆಟ್‌ನಲ್ಲಿ ಸಿಗುತ್ತದೆ. ಆದರೆ ವೈದ್ಯರು, ತಜ್ಞರು ಇದ್ದಾರೆ. ಅವರಿಂದಲೇ ಮಾಹಿತಿ ಪಡೆಯಬೇಕು' ಎಂದು ಹೆಸರು ಹೇಳಲು ಇಚ್ಛಿಸದ ವೈದ್ಯರೊಬ್ಬರು ತಿಳಿಸಿದ್ದಾರೆ.

'ನಮ್ಮ ಮನೆಗಳಲ್ಲಿ ಲಭ್ಯವಿರುವ ಊಟವೇ ಶ್ರೇಷ್ಠ. ಅದನ್ನು ತಿಂದು ದೊಡ್ಡ ದೇಹದಾರ್ಢ್ಯಪಟು ಆಗಬಹುದು ಎನ್ನುವುದು ನನ್ನ ಸ್ವಾನುಭವ. ಸಹಜ ವ್ಯಾಯಾಮ, ಅಂಗಸೌಷ್ಠವ ಪದ್ಧತಿಗೆ ಒತ್ತು ನೀಡುತ್ತಿದ್ದೇನೆ. ಅಮೆರಿಕ, ಯುರೋಪ್‌ಗಳಲ್ಲೂ ಈಗ ಈ ಮದ್ದು, ಪೌಡರ್‌ಗಳನ್ನು ಬಳಸುವುದು ಕಮ್ಮಿಯಾಗಿದೆ. ಕೇವಲ ಶೋಕಿಗಾಗಿ ವ್ಯಾಯಾಮ ಮಾಡದೇ ಆರೋಗ್ಯಕ್ಕಾಗಿ ವ್ಯಾಯಾಮ ಮಾಡಬೇಕು. ನಮ್ಮ ಜಿಮ್‌ನಲ್ಲೂ ಹೊಸದಾಗಿ ಸೇರ್ಪಡೆಯಾಗುವ ಯುವಕರು ಪ್ರೋಟೀನ್ ಶೇಕ್ಸ್ ಸಪ್ಲಿಮೆಂಟ್ಸ್‌ಗಳನ್ನು ತೆಗೆದುಕೊಳ್ಳುವ ಬಗ್ಗೆ ಕೇಳುತ್ತಾರೆ. ಆದರೆ, ಕಡ್ಡಾಯವಾಗಿ ಬೇಡ ಎಂದೇ ಹೇಳುತ್ತೇನೆ' ಎಂದು ಕೋಲಾರದ ದೇಹದಾರ್ಢ್ಯಪಟು, ಜಿಮ್ ಟ್ರೇನರ್ ಪುರುಷೋತ್ತಮ ಹೇಳುತ್ತಾರೆ.

'ಡ್ರೈ ಫ್ರೂಟ್ಸ್‌ಗಳಲ್ಲಿ ಪ್ರೋಟೀನ್, ಕ್ಯಾಲ್ಸಿಯಂ ಮತ್ತು ಕಬ್ಬಿಣ ಸೇರಿದಂತೆ ದೇಹಕ್ಕೆ ಅಗತ್ಯವಾದ ಎಲ್ಲಾ ಪೋಷಕಾಂಶಗಳಲ್ಲಿ ಸಮೃದ್ಧವಾಗಿವೆ. ಆಯುರ್ವೇದದಲ್ಲಿ ಕೂಡ ಒಣ ಹಣ್ಣುಗಳನ್ನು ಶಕ್ತಿಯುತ ಮತ್ತು ಆರೋಗ್ಯಕ್ಕೆ ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ' ಎಂಬುದು ಪುರುಷೋತ್ತಮ ಅವರ ಮಾತು.

'ಪ್ರೋಟಿನ್ ಒಳ್ಳೆಯದು ಆದರೆ ಅದು ಶುದ್ಧವಾಗಿರಬೇಕು. ಬಹುತೇಕ ಪ್ರೋಟಿನ್ ಸಪ್ಲಿಮೆಂಟ್‌ಗಳಲ್ಲಿ ಸ್ಟೆರಾಯ್ಡ್ ಮತ್ತು ಮಾಸ್ಕಿಂಗ್ ಏಜೆಂಟ್‌ಗಳನ್ನು ಬಳಸುತ್ತಾರೆ. ಇದು ದೇಹಕ್ಕೆ ಹಾನಿಕರ. ಕೆಲವು ತಿಂಗಳುಗಳ ಹಿಂದೆ ಅಂತರರಾಷ್ಟ್ರೀಯ ಒಲಿಂಪಿಕ್ ಕೌನ್ಸಿಲ್ (ಐಒಸಿ) ವಿಶ್ವದಾದ್ಯಂತ 625 ಬೇರೆಬೇರೆ ಪ್ರೋಟಿನ್ ಸಪ್ಲಿಮೆಂಟ್‌ಗಳ ಸ್ಯಾಂಪಲ್ ಪರೀಕ್ಷಿಸಿತು. ಅದರಲ್ಲಿ ಶೇ 86ರಷ್ಟು ಸಪ್ಲಿಮೆಂಟ್‌ಗಳಲ್ಲಿ ನಿಷೇಧಿತ ಸ್ಟೆರಾಯ್ಡ್ ಅಂಶಗಳು ಪತ್ತೆಯಾದವು. ಅದರಲ್ಲೂ ಅನಾಬೊಲಿಕ್ ಸ್ಟಿರಾಯ್ಸ್‌ಗಳು ತುಂಬಾ ಹಾನಿಕರ. ಇದನ್ನು ಸೇವಿಸಿದ ಕ್ರೀಡಾಪಟುಗಳು ಡೋಪಿಂಗ್ ಪರೀಕ್ಷೆಯಲ್ಲಿ ಸಿಕ್ಕಿಬಿದ್ದರೆ ಶಿಕ್ಷೆ ಖಂಡಿತ. ಆದರೆ, ಇವತ್ತು ದೊಡ್ಡ ಸವಾಲೆಂದರೆ ನಮ್ಮಲ್ಲಿ ಸಿಗುತ್ತಿರುವ ಪ್ರೋಟೀನ್‌ನಲ್ಲಿ ಸ್ಟೆರಾಯ್ಡ್ ಬೆರಕೆಯಾಗಿರುವುದರ ಕುರಿತು ಪತ್ತೆ ಹಚ್ಚಲು ಆಗುವುದಿಲ್ಲ. ಈ ಹಿಂದೆ ಜಲಂಧರ್, ಲುಧಿಯಾನ ನಗರಗಳಲ್ಲಿ ಪ್ರೊಟೀನ್‌ಗಳಲ್ಲಿ ಕಲಬೆರಕೆ ಮಾಡುವ ಜಾಲವನ್ನು ಪತ್ತೆಹಚ್ಚಿದ್ದು ದೊಡ್ಡ ಸುದ್ದಿಯಾಗಿತ್ತು' ಎಂದು ಕ್ರೀಡಾ ವೈದ್ಯ, ಫಿಫಾದ ಡೋಪಿಂಗ್ ಕಂಟ್ರೋಲ್ ಅಧಿಕಾರಿಯೂ ಆಗಿರುವ ಡಾ. ಕಿರಣ ಕುಲಕರ್ಣಿ ವಿವರಿಸುತ್ತಾರೆ.

'ಕಸರತ್ತು, ವ್ಯಾಯಾಮಗಳನ್ನು ಮಾಡುವವರು ಪ್ರೋಟೀನ್ ತೆಗೆದುಕೊಳ್ಳಬಹುದು. ಆದರೆ, ಅದಕ್ಕೊಂದು ಅಳತೆಗೋಲು ಇದೆ. ಸಾಮಾನ್ಯ ಜನರು ಅಂದರ ಫಿಟ್‌ನೆಸ್‌ಗಾಗಿ ತಾಲೀಮು ಮಾಡುವವರು ತಮ್ಮ ದೇಹ ತೂಕಕ್ಕೆ ತಕ್ಕಂತೆ ಪ್ರೋಟೀನ್ ಸ್ವೀಕರಿಸಬೇಕು. ಅಂದರೆ ಪ್ರತಿ ಕೆ.ಜಿಗೆ ಒಂದು ಗ್ರಾಂ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು. ಉದಾಹರಣೆಗೆ ಒಬ್ಬ ವ್ಯಕ್ತಿ 60 ಕೆ.ಜಿ ಇದ್ದರೆ, ದಿನಕ್ಕೆ 60 ಗ್ರಾಂ ಪ್ರೋಟೀನ್ ಸೇವಿಸಬಹುದು. ಆದರೆ, ಇದನ್ನು ದಿನದ ಮೂರು ಭಾಗಗಳಲ್ಲಿ ವಿಭಜಿಸಿ ತೆಗೆದುಕೊಳ್ಳಬೇಕು. ಬೆಳಿಗ್ಗೆ ಮಧ್ಯಾಹ್ನ ಮತ್ತು ಸಂಜೆ ತಲಾ 20 ಗ್ರಾಂ ತೆಗೆದುಕೊಂಡರೆ ಸರಿಯಾಗುತ್ತದೆ. ವೃತ್ತಿಪರ ಕ್ರೀಡಾಪಟುಗಳು ಪ್ರತಿ ಕೆಜಿ 1.5 ಗ್ರಾಂ ಕೂಡ ತೆಗೆದುಕೊಳ್ಳಬಹುದು. ವೇ ಐಸೋಲೇಟ್ ಮತ್ತು ವೇ ಪ್ರೋಟಿನ್‌ಗಳೆಂಬ ಎರಡು ಪದ್ಧತಿಗಳಿವೆ' ಎಂದು ಅವರು ಹೇಳುತ್ತಾರೆ.

ಪ್ರೋಟಿನ್, ಸ್ಟೆರಾಯ್ಡ್ ಬಳಕೆ ಲಾಭಕ್ಕಿಂತ ನಷ್ಟ ಜಾಸ್ತಿ. ಅವುಗಳನ್ನು ಬಳಸುವ ಮುನ್ನ ನೂರು ಬಾರಿ ಯೋಚಿಸಬೇಕು. ಈ ಬಗ್ಗೆ ಸಮಾಜದಲ್ಲಿ ಜಾಗೃತಿ ಹೆಚ್ಚಬೇಕು ಎನ್ನುತ್ತಾರೆ ಮಂಗಳೂರಿನ ಜಿಮ್ ತರಬೇತುದಾರ ಶ್ರೀಧರ ಪೂಜಾರಿ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ.
ಪೂರಕ ಮಾಹಿತಿ: ಗಿರೀಶ ದೊಡ್ಡಮನಿ, ವರುಣ ಹೆಗಡೆ, ಅಭಿಲಾಷ್ ಪಿ.ಎಸ್.

ಸ್ಟೆರಾಯ್ಡ್ ಬಳಸುವುದರಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು



- **ಕೂದಲು:** ಪುರುಷರ ಕೂದಲುಗಳು ಅಕಾಲಿಕವಾಗಿ ನೆರೆಯುತ್ತವೆ. ಹೆಣ್ಣುಮಕ್ಕಳ ಕೂದಲುಗಳು ಉದುರಿ ತಲೆ ಬೋಳಾಗುತ್ತದೆ.
- **ಕಣ್ಣು:** ಹಳದಿ ಛಾಯೆ ದಟ್ಟವಾಗಿರುತ್ತದೆ.
- **ಮುಖ:** ಗಡ್ಡ, ಮೀಸೆಗಳು ಸರಿಯಾಗಿ ಬೆಳೆಯುವುದಿಲ್ಲ ಮತ್ತು ವಿಕಾರವಾಗಿರುತ್ತವೆ.
- **ಎದೆ:** ಪುರುಷರ ಎದೆಯಲ್ಲಿ ಹಾಲು ಒಸರಲು ಆರಂಭಿಸುತ್ತದೆ. ಅದೇ ಮಹಿಳೆಯರಲ್ಲಿ ಸ್ತನಗಳ ಬೆಳವಣಿಗೆ ಕುಂಠಿತಗೊಂಡು ಹಾಲಿನ ಅಂಶ ಬತ್ತಿಹೋಗುತ್ತದೆ.
- **ಕರುಳು:** ಕ್ಯಾನ್ಸರ್, ಕಾಮಾಲೆ, ಗಡ್ಡೆಗಳು ಮತ್ತು ಉರಿಯೂತದ ತೊಂದರೆ.
- **ಪುರುಷತ್ವ ನಾಶ:** ವೃಷಣ ಸಣ್ಣದಾಗುವುದು ಮತ್ತು ಉರಿಯೂತದ ತೊಂದರೆ.
- **ರೋಗಪ್ರತಿರೋಧಕ ಶಕ್ತಿ:** ದಿನದಿಂದ ದಿನಕ್ಕೆ ಕುಂಠಿತ, ಸಣ್ಣಪುಟ್ಟ ಸೋಂಕುಗಳಿಗೂ ತೊಂದರೆ.
- **ಸ್ನಾಯು ರಚನೆ:** ಮೂಳೆಮುರಿತಗಳು ಹೆಚ್ಚಾಗುತ್ತವೆ. ಎಲುವು–ಕೀಲುಗಳ ಸಾಂದ್ರತೆ ದುರ್ಬಲವಾಗುತ್ತದೆ.
- **ಮೆದುಳು–ನರವ್ಯೂಹ:** ರಕ್ತ ಪರಿಚಲನೆ ಏರುಪೇರು, ಅಪಸ್ಮಾರ, ಲಕ್ವಾ ಮತ್ತು ನೆನಪಿನ ಶಕ್ತಿ ನಾಶ.
- **ಧ್ವನಿ:** ಗಡಸಾಗುತ್ತದೆ. ಮಹಿಳೆಯರ ಧ್ವನಿಯು ಗೊಗ್ಗರಾಗುತ್ತದೆ.
- **ಚರ್ಮ:** ಒರಟಾಗಿರುತ್ತದೆ. ತೇವ ಮತ್ತು ಎಣ್ಣೆಯ ಅಂಶ ಕುಸಿದು ಕಳಾಹೀನವಾಗುತ್ತದೆ.
- **ಹೃದಯ:** ಸ್ತಂಭನದ ಸಾಧ್ಯತೆಗಳು, ಏರು ರಕ್ತದೊತ್ತಡ, ಹೃದ್ರೋಗ ಕಾಯಿಲೆಗಳು, ಕವಾಟಗಳು ಬ್ಲಾಕ್ ಆಗುವುದು.
- **ಮೂತ್ರಪಿಂಡಗಳು:** ಕಾರ್ಯವೈಫಲ್ಯ ಮತ್ತು ಗಡ್ಡೆಗಳು.
- **ಸಂತಾನೋತ್ಪತ್ತಿ ಶಕ್ತಿ:** ಪುರುಷರಲ್ಲಿ ವೀರ್ಯದ ಪ್ರಮಾಣ ಕುಗ್ಗುತ್ತದೆ. ಮಹಿಳೆಯರ ಅಂಡಾಣುಗಳು ನಾಶವಾಗುತ್ತವೆ. ಬಂಜೆತನ, ಗರ್ಭಾಶಯದ ಸೋಂಕು.
- **ಎಲುಬು–ಕೀಲುಗಳು:** ಪೆಡಸಾಗುತ್ತವೆ. ಸ್ನಾಯುಶಕ್ತಿ ಕುಂದುತ್ತದೆ. ಸಣ್ಣಪುಟ್ಟ ಗಾಯಗಳೂ ಬೇಗ ಗುಣಮುಖವಾಗುವುದಿಲ್ಲ.

'ಅಡ್ಡದಾರಿ ಅಪಾಯಕಾರಿ'




ನಾನು ಪ್ರಾಕೃತಿಕ ಆಹಾರ ಪದ್ಧತಿ ಅನುಸರಿಸುವ ಜೊತೆಗೆ ನಿಯಮಿತ ವ್ಯಾಯಾಮ, ದೈಹಿಕ ಕಸರತ್ತು ನಡೆಸಿ ದೇಹವನ್ನು ದಂಡಿಸಿಕೊಂಡು ದೇಹದಾರ್ಢ್ಯ ಸ್ಪರ್ಧೆಗಳಲ್ಲಿ ಮಿಸ್ಟರ್ ವರ್ಲ್ಡ್ ಸೇರಿದಂತೆ ಹಲವು ಪ್ರಶಸ್ತಿ ಗೆದ್ದಿದ್ದೇನೆ. ಇಂದೂ ಆರೋಗ್ಯವಂತನಾಗಿದ್ದೇನೆ.

ಎರಡು ದಶಕಗಳ ಹಿಂದೆ ಈ ಪ್ರೋಟಿನ್, ಸ್ಟಿರಾಯ್ಡ್ ಹಾವಳಿ ಇರಲಿಲ್ಲ. ಇವುಗಳ ಬಳಕೆ ತಾತ್ಕಾಲಿಕ ಖುಷಿ ತರಬಹುದು. ಆದರೆ, ಭವಿಷ್ಯದಲ್ಲಿ ಅದರಿಂದ ಅಪಾಯ ತಪ್ಪಿದಲ್ಲ. ಇಂದಿನ ಯುವಕರಿಗೆ ಎಲ್ಲವೂ ವೇಗವಾಗಿ ಆಗಬೇಕು. ಸಿಕ್ಸ್‌ಪ್ಯಾಕ್ ಪ್ರದರ್ಶಿಸಿ ಜನಪ್ರಿಯವಾಗುವ ಹುಚ್ಚಾಟಕ್ಕೆ ಅಡ್ಡದಾರಿ ಹುಡುಕುತ್ತಾರೆ. ಕೊನೆಗೆ ಅದೇ ಅವರಿಗೆ ಅಡ್ಡ ಪರಿಣಾಮವನ್ನು ಉಂಟುಮಾಡುತ್ತಿದೆ.

ನಾನು ದೇಹದಾರ್ಢ್ಯಪಟುವಾಗಿದ್ದಾಗ ಡಯಟ್‌ನಲ್ಲಿ ಚಪಾತಿ, ಎಳನೀರು ಅದರ ಗಂಜಿ ಜೊತೆ ಅವಲಕ್ಕಿ, ಹಾಲು, ನಾಟಿ ಕೋಳಿ ಮೊಟ್ಟೆ, ತರಕಾರಿ, ಸೊಪ್ಪು, ಗೆಡ್ಡೆ ಗೆಣಸು, ಮೊಳಕೆ ಕಾಳು ಸೇವಿಸುತ್ತಿದ್ದೆ. ಇದರಿಂದ ದೇಹ ಸೌಂದರ್ಯ ನಿಧಾನವಾಗಿ ವೃದ್ಧಿಸಿದರೂ ಅದು ದೀರ್ಘಕಾಲ ಉಳಿದಿದೆ. ಆದರೆ, ಇಂದಿನ ಫಾಸ್ಟ್‌ಫುಡ್ ಜಗತ್ತಿನಲ್ಲಿ ಎಲ್ಲವೂ ವೇಗವಾಗಿ ನಡೆಯುತ್ತಿದೆ. ಅದರಿಂದ ಕಾಯಿಲೆಯೂ ಹೊರತಾಗಿಲ್ಲ.

ರೇಮಂಡ್ ಡಿಸೋಜ, ಅಂತರರಾಷ್ಟ್ರೀಯ ದೇಹದಾರ್ಢ್ಯಪಟು

ಯುದ್ಧಕಾಲೇ ಶಸ್ತ್ರಾಭ್ಯಾಸ ಬೇಡ!



ಕಳೆದ 34 ವರ್ಷಗಳಿಂದ ಜಿಮ್ ನಡೆಸಿಕೊಂಡು ಬರುತ್ತಿದ್ದೇನೆ. ಆರಂಭದಿಂದಲೂ ನಾನು ಈ ಪ್ರೋಟಿನ್ ಪೌಡರ್, ಸ್ಟೆರಾಯ್ಡ್‌ಗಳನ್ನು ವಿರೋಧಿಸುತ್ತಲೇ ಬಂದಿದ್ದೇನೆ. ಯುಟ್ಯೂಬ್, ಇನ್‌ಸ್ಟಾಗ್ರಾಂ ಬಂದ ಕಳೆದೊಂದು ದಶಕದಲ್ಲಿ ಈ ಪದಾರ್ಥಗಳ ಬಳಕೆ ಹೆಚ್ಚಾಗಿದೆ. ಯಾರೂ ಕೋಚ್ ಮಾತನ್ನು ಕೇಳುತ್ತಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಜಾಹೀರಾತುಗಳನ್ನೇ ನಂಬುತ್ತಾರೆ.

ಮನೆಯ ಊಟ ಮಾಡಿಕೊಂಡು ನೈಸರ್ಗಿಕವಾಗಿ ದೇಹ ಹುರಿಗೊಳಿಸಬೇಕು. ನಾವು ಬೆಳೆದ ವಾತಾವರಣದ ಊಟ ಮಾಡಬೇಕು. ಕಲಬೆರಕೆ ಪ್ರೋಟಿನ್ ತೆಗೆದುಕೊಳ್ಳುವುದು ಅವೈಜ್ಞಾನಿಕ. ಇದರಿಂದ ಮೂರೇ ತಿಂಗಳಲ್ಲಿ ರಿಸಲ್ಟ್ ಪಡೆಯಬಹುದು. ಆದರೆ ಮೂರೇ ವರ್ಷದಲ್ಲಿ ಇದರ ದುಷ್ಪರಿಣಾಮಗಳು ಕಾಣಿಸಿಕೊಳ್ಳುತ್ತವೆ. ಎಲ್‌ಕೆಜಿಗೆ ಓದುತ್ತಿರುವ ಮಗುವಿಗೇಕೆ ಐಎಎಸ್ ಪರೀಕ್ಷೆಯ ಟ್ಯೂಷನ್! ಯಾವುದೋ ಉದ್ಯೋಗದಲ್ಲಿದ್ದುಕೊಂಡು ಕೇವಲ ವ್ಯಾಯಾಮಕ್ಕಾಗಿ ಹೋಗುವ ಹಲವರೂ ಈ ಪ್ರೋಟಿನ್ ದಾಸರಾಗುತ್ತಿದ್ದಾರೆ. ಇದರಿಂದ ದೇಹದಲ್ಲಿ ಕೆಟ್ಟ ವಾಸನೆ, ಕೂದಲು ಉದುರುವಿಕೆ, ಬಂಜೆತನ. ಎಲ್ಲವುದಕ್ಕಿಂತ ಹೆಚ್ಚಾಗಿ ಒಂದು ರೀತಿಯಲ್ಲಿ ರೇಗಾಡುತ್ತಿರುತ್ತಾರೆ. ಅವರ ಮುಖ ನೋಡಿದ ತಕ್ಷಣ ನಮಗೆ ಗೊತ್ತಾಗುತ್ತದೆ. ಸಿನಿಮಾ ಕ್ಷೇತ್ರದಲ್ಲಿ ಕಥೆಗಾಗಿ ಮೂರು ತಿಂಗಳಲ್ಲಿ ಬಾಡಿ ಬಿಲ್ಡ್ ಮಾಡಬೇಕು, ಮೂರು ತಿಂಗಳಲ್ಲಿ ತೂಕ ಇಳಿಸಿಕೊಳ್ಳಬೇಕು ಎಂದು ಕೇವಲ ಹೀರೊ ಆಗಿ ಮಾಡುತ್ತಿರುವವರಲ್ಲ, ಖಳನಾಯಕ, ನಾಯಕಿಯರೂ ಈ ದಾರಿ ಹಿಡಿಯುತ್ತಿದ್ದಾರೆ.

ಎ.ವಿ.ರವಿ (ಜಿಮ್ ರವಿ), ಅಂತರರಾಷ್ಟ್ರೀಯ ಬಾಡಿಬಿಲ್ಡರ್

ತರಬೇತುದಾರರ ಸಲಹೆ ಪಡೆಯಿರಿ



ನನ್ನ ಈ ದೇಹಕ್ಕಾಗಿ 20 ವರ್ಷ ಸವಿಸಿದ್ದೇನೆ. ಯಾರದರೂ ಏಕಾಏಕಿ ಹೀಗೆ ದೇಹರಚನೆಯನ್ನು ಸಾಧಿಸಿದ್ದಾರೆ ಎಂದರೆ ಅಡ್ಡದಾರಿ ಹಿಡಿದಿದ್ದಾರೆ ಎಂದರ್ಥ. ಕಸರತ್ತುಗಳನ್ನು ಮಾಡುವ ಸಂದರ್ಭದಲ್ಲಿ ತರಬೇತುದಾರರ ಮಾತು ಕೇಳುವುದು ಮುಖ್ಯ. ದೇಹಕ್ಕೆ ಈ ಸಂದರ್ಭದಲ್ಲೇ ಪ್ರೊಟೀನ್ ಕೂಡಾ ಅಗತ್ಯ. ಆದರೆ ಯಾವುದನ್ನು ಎಷ್ಟು ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು ಎಂದು ತರಬೇತುದಾರರನ್ನು ಸಂಪರ್ಕಿಸಿಯೇ ಸೇವಿಸಬೇಕು. ತರಬೇತುದಾರರ ಆಯ್ಕೆಯಲ್ಲೂ ಜಾಗೃತೆಯಿಂದಿರಿ.

ಡ್ರ್ಯಾಗನ್ ಮಂಜು, ('ಭೀಮ' ಸಿನಿಮಾ ಖ್ಯಾತಿಯ ನಟ)

'ಸ್ಟೆರಾಯ್ಡ್ ಬಳಕೆ ಅಪಾಯಕಾರಿ'



ಅಲ್ಪಾವಧಿಯಲ್ಲಿಯೇ ಸ್ನಾಯುಗಳ ಬಲವರ್ಧನೆಗೆ ಪ್ರೊಟೀನ್ ಪೌಡರ್, ಸ್ಟೆರಾಯ್ಡ್‌ಗಳನ್ನು ಬಳಸುವವರ ಸಂಖ್ಯೆ ಹೆಚ್ಚುತ್ತಿದೆ. ಇವುಗಳ ಬಳಕೆಯು ದೇಹದ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನು ಬೀರಲಿವೆ. ವಿಶೇಷವಾಗಿ 'ಅನಾಬೊಲಿಕ್ ಸ್ಟೆರಾಯ್ಡ್' ಅಪಾಯಕಾರಿಯಾಗಿದೆ. ಅತಿಯಾದ ಪ್ರೊಟೀನ್ ಪೌಡರ್‌ಗಳ ಬಳಕೆಯಿಂದ ಮೂತ್ರಪಿಂಡದ ಒತ್ತಡ, ಅಲರ್ಜಿಯಂತಹ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಸ್ಟೆರಾಯ್ಡ್ ಬಳಕೆಯಿಂದ ಯಕೃತ್ತಿಗೆ ಹಾನಿಯಾಗುವ ಜತೆಗೆ ಹೃದಯ ರಕ್ತನಾಳದ ಕಾಯಿಲೆ ಮತ್ತು ಹಾರ್ಮೋನುಗಳ ಅಸಮತೋಲನದಂತಹ ಸಮಸ್ಯೆಗಳಿಗೆ ಒಳಗಾಗಬೇಕಾಗುತ್ತದೆ.

ದೀರ್ಘಕಾಲ ಸ್ಟೆರಾಯ್ಡ್ ಬಳಕೆ ಮಾಡಿದವರು ಮಾನಸಿಕ ಅಸ್ವಸ್ಥರಾಗುವ ಸಾಧ್ಯತೆಯೂ ಇದೆ. ಮೊಡವೆಗಳು ಮತ್ತು ಬೆಳವಣಿಗೆ ಕುಂಠಿತಕ್ಕೂ ಕಾರಣವಾಗಬಹುದು. ಸ್ಟೆರಾಯ್ಡ್ ಬಳಕೆ ನಿಲ್ಲಿಸುವ ಸಂದರ್ಭದಲ್ಲಿಯೂ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಸ್ನಾಯುಗಳು ಸಂಪೂರ್ಣವಾಗಿ ಬಲಹೀನವಾಗುತ್ತದೆ. ಆದ್ದರಿಂದ ಈ ಹಿಂದೆ ಬಳಕೆಯಲ್ಲಿದ್ದ ಸಹಜ ವಿಧಾನಗಳಿಂದಲೇ ಸ್ನಾಯುಗಳನ್ನು ಬಲಿಷ್ಠಗೊಳಿಸಿಕೊಳ್ಳಬೇಕು. ಸಮತೋಲಿತ ಆಹಾರ ಮತ್ತು ನಿಯಮಿತ ವ್ಯಾಯಾಮವನ್ನು ರೂಢಿಸಿಕೊಳ್ಳಬೇಕು

ಡಾ. ಅನಂತ ಪದ್ಮನಾಭ, ಆಂತರಿಕ ಔಷಧ ವಿಭಾಗದ ಹಿರಿಯ ಸಲಹೆಗಾರ, ಫೋರ್ಟಿಸ್ ಆಸ್ಪತ್ರೆ

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 13-7-2000

• **ಮೈಸೂರು: ಮತ್ತೆ 9 ಜೀತದಾಳುಗಳಿಗೆ ಮುಕ್ತಿ**

ಬೆಂಗಳೂರು, ಜುಲೈ 12– ಮೈಸೂರು ಸಮೀಪದ ನೂಲು ಗಿರಣಿಯೊಂದರಲ್ಲಿ ಉತ್ತರ ಪ್ರದೇಶದ ಒಂಬತ್ತು ಮಂದಿ ಹದಿಹರೆಯದವರನ್ನು ಜೀತದಾಳುಗಳಾಗಿ ಇಟ್ಟುಕೊಂಡಿದ್ದ ಘಟನೆ ಬೆಳಕಿಗೆ ಬಂದಿದೆ.

ನೂಲಿನ ಗಿರಣಿ ಮಾಲೀಕರ ಹಿಡಿತದಿಂದ ತಪ್ಪಿಸಿಕೊಂಡು ತಮ್ಮ ಊರಿಗೆ ಹೋಗುವ ಸಲುವಾಗಿ ಮೈಸೂರಿನಿಂದ ಬೆಂಗಳೂರಿನ ಬಸ್ ಹತ್ತುತ್ತಿರುವಾಗ ದಕ್ಷಿಣ ಭಾರತ ಮಾನವ ಹಕ್ಕು ಶಿಕ್ಷಣ ಹಾಗೂ ಸರ್ವೇಕ್ಷಣಾ (ಸಿಚೆರೆಮ್) ಕಾರ್ಯಕರ್ತ ಸೋನಿ ಎಂಬುವವರು ಪತ್ತೆ ಮಾಡಿದ್ದಾರೆ.

75 ವರ್ಷಗಳ ಹಿಂದೆ

ಗುರುವಾರ, 13-7-1950

• **ಡಿಕ್ಸನ್-ನೆಹರೂ ಮಾತುಕತೆ**

ನವದೆಹಲಿ, ಜುಲೈ 12– ಕಾಶ್ಮೀರದ ಬಗ್ಗೆ ವಿಶ್ವಸಂಸ್ಥೆಯ ಮಧ್ಯಸ್ಥಗಾರರಾದ ಸರ್ ಓವನ್ ಡಿಕ್ಸನ್ ಅವರು ಭಾರತದ ಪ್ರಧಾನಿ ಪಂಡಿತ ನೆಹರೂರವರೊಂದಿಗೆ ಮಾತುಕತೆ ನಡೆಸಿದ್ದಾರೆಂದು ಗೊತ್ತಾಗಿದೆ. ಭಾರತ–ಪಾಕಿಸ್ತಾನಗಳ ಪ್ರಧಾನಿಗಳೊಂದಿಗೆ ಡಿಕ್ಸನ್ನರು ಮಾತುಕತೆ ನಡೆಸುವುದಕ್ಕೆ ಪೂರ್ವಭಾವಿಯಾಗಿ ಸಿದ್ಧತೆಗಳು ನಡೆದವು. ಭಾರತದ ಪ್ರಧಾನಿ ಜೊತೆ ಡಿಕ್ಸನ್ 45 ನಿಮಿಷ ಮಾತುಕತೆ ನಡೆಸಿದರು. ಶ್ರೀನಗರದಿಂದ ಬಂದೊಡನೆಯೆ ಡಿಕ್ಸನ್ ಅವರು ಭಾರತದ ಬಾಹ್ಯ ವ್ಯವಹಾರ ಶಾಕೆಯ ಮಹಾಕಾರ್ಯದರ್ಶಿ ಅವರೊಡನೆ ಮಾತುಕತೆ ನಡೆಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

13 ಜುಲೈ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣತೃತೀಯ ಗಂ. 25-03 **ನಕ್ಷತ್ರ:** ಶ್ರವಣ ಗಂ. 06-53 **ಯೋಗ:** ಪ್ರೀತಿ ಗಂ. 18-01 ಕರಣ: ವಣಿಜ ಗಂ. 13-28, ಮಿಥುನ ಮಾಸದ 29 ನೇ ದಿನ. **ಮಳೆ ನಕ್ಷತ್ರ:** ಪುನರ್ವಸು 3 ನೇ ಪಾದ. **ರಾಹುಕಾಲ:** ಸಾಯಂಕಾಲ 04-30–06-00 **ಸೂರ್ಯೋದಯ:** 06-15 **ಸೂರ್ಯಾಸ್ತ:** 06-58 **ಮುಸ್ಲಿಂ ದಿನಾಂಕ:** 17 ಮೊಹರಮ್ **ಅದೃಷ್ಟ ಸಂಖ್ಯೆ:** 3, 11

ಮೇಷ: ಅನಾವಶ್ಯಕ ಚಿಂತೆಯಿಂದ ಆರೋಗ್ಯದಲ್ಲಿ ಏರುಪೇರು ಕಂಡುಬರಲಿದೆ. ನೂತನ ಯೋಚನೆಗಳು ಖರ್ಚಿಗೆ ದಾರಿಯಾದರೂ ಮುಂದಿನ ದಿನಗಳಲ್ಲಿ ಉಪಕಾರಿಯಾಗಿರುತ್ತದೆ. ಅದೃಷ್ಟದಾಯಕ ದಿನವಾಗಿರುತ್ತದೆ.

ವೃಷಭ: ಈ ದಿನ ನಿಮಗೆ ನಿರಾಶೆಯನ್ನು ತರದು. ಕರ್ತವ್ಯ ದೃಷ್ಟಿಯಿಂದ ವೃತ್ತಿಕ್ಷೇತ್ರದಲ್ಲಿ ಒಂದೇ ಮನಸ್ಸಿನಲ್ಲಿ ದುಡಿದರೆ ಸಮಾಧಾನ ಹೆಚ್ಚುತ್ತದೆ. ಅವಿವಾಹಿತರಿಗೆ ವಿವಾಹದ ವಿಚಾರದಲ್ಲಿ ಶುಭವಾಗುವ ಲಕ್ಷಣವಿದೆ.

ಮಿಥುನ: ಹಿತಶತ್ರುಗಳ ದ್ವೇಷ ಅಸೂಯೆಯಿಂದ ಉಂಟಾಗುತ್ತಿದ್ದ ನೋವು ದೂರವಾಗುತ್ತದೆ. ಕಿಂಚಿತ್ ಕಾರ್ಯಸಿದ್ದಿಯಿಂದಲೂ ನೆಮ್ಮದಿ ಕಂಡುಬರಲಿದೆ. ಅನೇಕ ಬಗೆಯ ಶುಭವಾರ್ತೆಗಳು ನೆಮ್ಮದಿಗೆ ಕಾರಣವಾಗುವುದು.

ಕರ್ಕಾಟಕ: ಪ್ರಭಾವಿ ವ್ಯಕ್ತಿಗಳೊಂದಿಗೆ ಸಂಪರ್ಕ ಉಪಕಾರಕ್ಕಿಂತ ತೊಂದರೆಗೆ ಹೆಚ್ಚು ದಾರಿಯಾಗುವುದು, ಜೋಪಾನವಾಗಿರಿ. ನಿಸ್ವಾರ್ಥ ಸೇವೆಯಿಂದ ಸಮಾಜದಲ್ಲಿ ಗೌರವಾನ್ವಿತ ವ್ಯಕ್ತಿಯಾಗಲಿದ್ದೀರಿ.

ಸಿಂಹ: ನೂತನ ಸ್ನೇಹಿತನಿಂದ ಅಥವಾ ಅಪರಿಚಿತರ ಸಹಕಾರದಿಂದ ನಿಮ್ಮ ಕಾರ್ಯ ವ್ಯವಸ್ಥಿತವಾಗಿ ನಡೆಯಲಿದೆ. ಗೃಹದಲ್ಲಿ ಸಂಭ್ರಮದ ಆಚರಣೆಯಿಂದಾಗಿ ಅಥವಾ ವ್ಯರ್ಥ ತಿರುಗಾಟದಿಂದಾಗಿ ಖರ್ಚು ಹೆಚ್ಚಾಗಲಿದೆ.

ಕನ್ಯಾ: ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳಲೇಬೇಕಿದ್ದರೆ ಅವಿರತ ಶ್ರಮ ಅಗತ್ಯ. ನಿಮ್ಮ ಹಿತಾಸಕ್ತಿಗಳಿಗೆ ಹೆಚ್ಚಿನ ಗಮನವನ್ನು ಕೊಡಿ. ಬಿಳಿಯಾಗಿರುವುದೆಲ್ಲ ಹಾಲು ಎಂದು ನಂಬುವ ನಿಮ್ಮ ಮನೋಧರ್ಮದಿಂದ ಮೋಸ ಹೋಗುವಿರಿ.

ತುಲಾ: ಶುಭ ಕಾರ್ಯಗಳಿಗೆ ಅಡ್ಡಿ-ಆತಂಕ ಯಾವುದು ಇರುವುದಿಲ್ಲ. ಜಟಿಲ ಸಮಸ್ಯೆಗಳು ಬಗೆ ಹರಿದು, ಮನೆಯಲ್ಲಿ ನೆಮ್ಮದಿ ಇರಲಿದೆ. ನಿಮ್ಮ ಆಸೆಗಳಿಗೆ ಕುಟುಂಬ ವರ್ಗದವರು ಅಭಿವೃದ್ಧಿಯ ದಾರಿಯನ್ನು ಕಲ್ಪಿಸುವರು.

ವೃಶ್ಚಿಕ: ವ್ಯಾಪಾರದಲ್ಲಿ ಬಂಡವಾಳ ಹೆಚ್ಚಿಸಿಕೊಳ್ಳುವ ಬಗ್ಗೆ ಯೋಚಿಸಬಹುದು. ಹೆಚ್ಚು ಜವಾಬ್ದಾರಿ ಅಥವಾ ಒತ್ತಡ ತರುವಂತಹ ಕೆಲಸಗಳಿಂದ ದೂರವಿರಿ. ಈ ದಿನ ವಾಹನ ಚಾಲನೆಯಲ್ಲಿ ಜಾಗರೂಕತೆ ಇರಲಿ.

ಧನು: ನಿಮ್ಮ ಸಮಸ್ಯೆಗಳು ಮುಂದಿನ ದಿನಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ದೂರವಾಗಲಿದೆ. ಬೇಕರಿ ಪದಾರ್ಥಗಳ ಮಾರಾಟದಿಂದ ಲಾಭ. ಸಂಗತಿಗಳನ್ನು ಹಗುರವಾಗಿ ಪರಿಗಣಿಸುವ ಸ್ವಭಾವ ಬದಲಿಸಿಕೊಳ್ಳಬೇಕಾಗುವುದು.

ಮಕರ: ಕೆಲಸಗಳು ಮಂದಗತಿಯಲ್ಲಿ ಸಾಗುವುದು. ನಿಸ್ವಾರ್ಥ, ತ್ಯಾಗದ ಮನೋಭಾವ ಬೆಳೆಸಿಕೊಳ್ಳುವಿರಿ. ಅನವಶ್ಯಕ ಚಿಂತೆ ಬೇಡ. ಮನೆಯಲ್ಲಿ ಪತ್ನಿ, ಮಕ್ಕಳ ಆರೋಗ್ಯದ ಬಗ್ಗೆ ಗಮನ ಹರಿಸಬೇಕಾಗುತ್ತದೆ.

ಕುಂಭ: ಅವಮಾನ, ಮಾನಸಿಕ ಅಶಾಂತಿ, ದಾಂಪತ್ಯದಲ್ಲಿ ಕಲಹ, ಕುಟುಂಬ ವರ್ಗದವರಲ್ಲಿ ಭಿನ್ನಾಭಿಪ್ರಾಯದಂತಹ ಸನ್ನಿವೇಶಗಳು ಕಂಡುಬಂದು ಮನಸ್ಸಿಗೆ ನೋವಾಗಲಿದೆ. ಉದಾಸೀನತೆಯಿಂದ ಹಿನ್ನಡೆಯಾಗಲಿದೆ.


ಮೀನ: ಗಣಪತಿ ಅನುಗ್ರಹದಿಂದ ಗೊಂದಲ ನಿವಾರಣೆಗೊಂಡು ಮನಸ್ಸು ತಿಳಿಯಾಗುವುದು. ಹತ್ತಾರು ಜನರಿಗೆ ಮಾರ್ಗದರ್ಶಕರಾಗಿ ನೇಮಕಗೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಒಳ್ಳೆಯ ಫಲಿತಾಂಶ ಪ್ರಾಪ್ತಿಯಾಗುವುದು.

ಪದಬಂಧ 6102

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸೂರ್ಯನ ಕಾವಿನಲ್ಲಿ ಗೋಚರಿಸಿದ ಮರೀಚಿಕೆ (5)
3.ಹೊರದೇಶಗಳಿಗೆ ಕಳುಹಿಸುವುದು (3)
5.ತರಿ ಜಮೀನು (2)
6.ದಿನವೆಲ್ಲಾ ತಿರುಗಿದಾಗ ಕಾಣಿಸಿದ ಹೊಳೆ (2)
8.ನಡುಮನೆಯನ್ನು ಹೀಗೂ ಹೇಳುತ್ತಾರೆ (3)
9.ಇಂದ್ರಧನು ಇಲ್ಲಿ ಕಾಣುತ್ತಿದೆ (5)
10.ಬೆನ್ನು ಹತ್ತಿದರೆ ಬಿಡದವನು (3)
12.ಪುಢಾರಿ ಜೊತೆಗಿರುವ ಶತ್ರು (2)
14.ಅಂಕಣದಲ್ಲಿರುವ ಸಂಖ್ಯೆ ಕಾಣುತ್ತಿದೆಯೇ (2)
15.ತುಂಡು ಬಟ್ಟೆಗಳನ್ನು ಕೂಡಿಸಿ ಹೊಲಿದ ಹಚ್ಚಡ (3)
16.ವಿಷವನ್ನು ಸೇವಿಸುವುದು (5)

ಮೇಲಿಂದ ಕೆಳಕ್ಕೆ
1.ಒರೆಯಿಂದ ಹೊರ ತೆಗೆದ ಕತ್ತಿ (4)
2.ಕೈಯಲ್ಲಿರುವ ಹಣ ಉಲ್ಟಾಪಲ್ಟಾ ಆಗಿಬಿಟ್ಟಿದೆ (3)
4.ತಲೆಮಾರು ಈ ತರ ಬಂದಿದೆ (4)
7.ಗಿರಿಯ ಕೊನೆಗೆ ದಿವಾನ ತೋರಿದ ದೊಡ್ಡಸ್ಥಿಕೆ! (5)
8.ಕಶೇರುಕಗಳ ದವಡೆಯಿಂದ ಹೊರಟಿರುವ ದಂತಭಾಗ (2)
9.ಉತ್ತರದವರ ಚಿಕ್ಕಪ್ಪ (2)
10.ಮಂಗಳ ಗ್ರಹ ಇಲ್ಲಿದೆ (4)
11.ಕೂಡುವ ಲೆಕ್ಕವಿದು (4)
13.ಹರುಷ ತೋರುತ್ತಿರುವ ಗಂಡು ವ್ಯಕ್ತಿ (3)



6101ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅನುಚರ 3.ವಕ್ರತುಂಡ 5.ಸಮಾರ 6.ಜಲಜ 8.ಜವಾರಿ 9.ಗುಮಾನಿ 10.ಮರ್ಮಜ್ಞ 11.ಕಚಡ 12.ತನ್ಮಯ 14.ದಾಯಾದಿ 16.ಶನಿಗ್ರಹ 17 ನಖಹತಿ

ಮೇಲಿಂದ ಕೆಳಕ್ಕೆ: 1.ಅನುಜ 2.ರಸ 3.ವರ 4.ಡಬರಿ 7.ಜನನಿಬಿಡ 8.ಜನುಮದಾತ 11.ಕಳಶ 13.ಯಯಾತಿ 14.ದಾಹ 15.ದಿನ

ಸುಡೊಕು 6486

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			6	7	4		
3		4					7	2
	7			4	8		6	3
	4			3			8	5
8		9		7				
	5		8		4		9	7
2				9		7	3	
		3					1	
6			4			5		9

6485 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ತ್ರಿಭಾಷಾ ಸೂತ್ರಕ್ಕೆ ಒತ್ತಾಯ

ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘದಿಂದ ಆಗ್ರಹ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯ ಪಠ್ಯಕ್ರಮದಲ್ಲಿ ತ್ರಿಭಾಷಾ ಸೂತ್ರಕ್ಕೇ ಆದ್ಯತೆ ನೀಡಬೇಕು. ದ್ವಿಭಾಷಾ ಸೂತ್ರ ಜಾರಿ ಮಾಡಬಾರದು ಎಂದು ಕರ್ನಾಟಕ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ ಒತ್ತಾಯಿಸಿದೆ.

ಈ ಕುರಿತು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಸಂಚಾಲಕ ಡಿ. ಶಶಿಕುಮಾರ್, ರಾಜ್ಯ ಪಠ್ಯಕ್ರಮ ಅನುಸರಿಸುವ ಶಾಲೆಗಳು ಕನ್ನಡವನ್ನು ಪ್ರಥಮ ಭಾಷೆಯಾಗಿ, ಇಂಗ್ಲಿಷ್ ಮತ್ತು ಹಿಂದಿಯನ್ನು ದ್ವಿತೀಯ ಹಾಗೂ ತೃತೀಯ ಭಾಷೆಯಾಗಿ ಅನುಸರಿಸುತ್ತಿವೆ. ಬೇರೆ ರಾಜ್ಯಗಳಿಂದ ಬಂದ, ಬೇರೆ ಮಾತೃಭಾಷಿಕ ಕುಟುಂಬಗಳ ಮಕ್ಕಳು ಅವರ ಮಾತೃಭಾಷೆಯನ್ನು ಕಲಿಯುತ್ತಿದ್ದಾರೆ.

ತ್ರಿಭಾಷಾ ಸೂತ್ರವಿದ್ದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಕನ್ನಡ ಕಡ್ಡಾಯ ಇರುವಾಗ ತ್ರಿಭಾಷಾ ಸೂತ್ರದಿಂದ ಮಕ್ಕಳಿಗೆ ಯಾವುದೇ ಸಮಸ್ಯೆ ಇರುವುದಿಲ್ಲ. ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಸಾಕಷ್ಟು ಭಾಷೆ ಕಲಿಸಬಹುದು ಎಂದರು.

ಸಿಬಿಎಸ್‌ಇ, ಐಸಿಎಸ್‌ಇ ಶಾಲೆಗಳು, ನವೋದಯ, ಕೇಂದ್ರೀಯ ವಿದ್ಯಾಲಯ, ಸೇನಾ ಶಾಲೆಗಳ ಮಕ್ಕಳು ಮೂರೂ ಭಾಷೆಗಳಲ್ಲೂ ಪ್ರಭುತ್ವ ಸಾಧಿಸುತ್ತಾರೆ. ರಾಷ್ಟ್ರ ಮಟ್ಟ, ಪ್ರಾದೇಶಿಕ ಮಟ್ಟದಲ್ಲಿ ಅವರಿಗೆ ಹೆಜ್ಜೆ ಗುರುತು ಮೂಡಿಸಲು ವಿಪುಲ ಅವಕಾಶಗಳು ಸಿಗುತ್ತವೆ. ರಾಜ್ಯದಲ್ಲಿ ದ್ವಿಭಾಷಾ ನೀತಿ ಜಾರಿಗೆ ತಂದರೆ ರಾಜ್ಯ ಪಠ್ಯಕ್ರಮದ ಶಾಲೆಗಳ ಮಕ್ಕಳಲ್ಲಿ ಅಸಮಾನತೆ ಸೃಷ್ಟಿಯಾಗುತ್ತದೆ. ಶೈಕ್ಷಣಿಕ ಶಕ್ತಿ ಕುಂದುತ್ತದೆ ಎಂದು ಹೇಳಿದರು.

ಹಿಂದಿಯನ್ನು ಕಡ್ಡಾಯಗೊಳಿಸುವ ಅಗತ್ಯವಿಲ್ಲ. ಮೂರನೇ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಿದರೆ ಸಾಕು. ದೇಶದಲ್ಲಿ ಶೈಕ್ಷಣಿಕ ಸಮಾನತೆ ಇದ್ದರೆ ಮಕ್ಕಳಲ್ಲಿ ರಾಷ್ಟ್ರ ಹಾಗೂ ಜಾಗತಿಕ ಸ್ಪರ್ಧಾ ಸಾಮರ್ಥ್ಯ ಹೆಚ್ಚಿಸಲು ಸಾಧ್ಯವಾಗುತ್ತದೆ. ಹಾಗೆ ಮಾಡದಿದ್ದರೆ ಮಕ್ಕಳು, ಪೋಷಕರ ಮೂಲಭೂತ ಹಕ್ಕನ್ನು ಕಸಿದುಕೊಂಡಂತೆ ಆಗುತ್ತದೆ' ಎಂದು ಹೇಳಿದರು

ಶಾಲಾ ಕೊಠಡಿಯೊಳಗೆ ಅರ್ಧ ವೃತ್ತಾಕಾರದ ವ್ಯವಸ್ಥೆಗೆ ಮನವಿ

ಬೆಂಗಳೂರು: ರಾಜ್ಯದ ಪ್ರತಿ ಶಾಲೆಯಲ್ಲೂ ವಿದ್ಯಾರ್ಥಿಗಳು ಅರ್ಧ ವೃತ್ತಾಕಾರದಲ್ಲಿ ಕುಳಿತು ಶಿಕ್ಷಣ ಪಡೆಯುವ ವ್ಯವಸ್ಥೆ ಜಾರಿ ಮಾಡಬೇಕು ಎಂದು ಮಕ್ಕಳ ಹಕ್ಕುಗಳ ಕಾರ್ಯಕರ್ತ ನಾಗಸಿಂಹ ಜಿ. ರಾವ್ ಮನವಿ ಮಾಡಿದ್ದಾರೆ.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಈ ಬಗ್ಗೆ ಪತ್ರ ಬರೆದಿರುವ ಅವರು, 'ಕೇರಳದಲ್ಲಿ ಈ ಪದ್ಧತಿ ಅಳವಡಿಸಿಕೊಳ್ಳಲಾಗಿದೆ. ಈ ಪದ್ಧತಿಯಿಂದ ವಿದ್ಯಾರ್ಥಿಗಳ ಮುಖಭಾವ, ಆಸಕ್ತಿ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ಗಮನಿಸಲು ಸಾಧ್ಯವಾಗುತ್ತದೆ' ಎಂದಿದ್ದಾರೆ.

'ಚರ್ಚೆ, ಗುಂಪು ಕೆಲಸ, ಪ್ರಾತ್ಯಕ್ಷಿಕೆ, ದೃಶ್ಯ-ಶ್ರವಣ ಸಾಧನಗಳ ಬಳಕೆ ಮುಂತಾದ ವಿವಿಧ ಕಲಿಕಾ ಶೈಲಿಗಳಿಗೆ ಈ ಪದ್ಧತಿ ಸೂಕ್ತವಾಗಿದೆ. ಶಿಕ್ಷಕರಿಗೆ ತಮ್ಮ ಬೋಧನಾ ವಿಧಾನವನ್ನು ವೈವಿಧ್ಯಗೊಳಿಸಲು ಅವಕಾಶ ನೀಡುತ್ತದೆ' ಎಂದರು.

ಸಚಿವರ ಭರವಸೆ: 10 ಪಾಲಿಕೆಗಳ ನೌಕರರ ಮುಷ್ಕರ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿಯವರ ಸಮ್ಮುಖದಲ್ಲಿ ಆರ್ಥಿಕ ಇಲಾಖೆ ಅಧಿಕಾರಿಗಳೊಂದಿಗೆ ಜುಲೈ 15ರಂದು ಚರ್ಚಿಸಿ ಬೇಡಿಕೆಗಳ ಈಡೇರಿಸುವ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರು ಭರವಸೆ ನೀಡಿದ ಬೆನ್ನಲ್ಲೇ 10 ಮಹಾನಗರ ಪಾಲಿಕೆಗಳ ನೌಕರರು ಮುಷ್ಕರವನ್ನು ತಾತ್ಕಾಲಿಕವಾಗಿ ಮುಂದೂಡಿದ್ದಾರೆ.

'ಬೇಡಿಕೆ ಸಂಬಂಧ ಮಂಗಳವಾರ ತೀರ್ಮಾನ ಕೈಗೊಳ್ಳಲಾಗುತ್ತದೆ. ಹೀಗಾಗಿ, ತಮ್ಮ ಮುಷ್ಕರವನ್ನು ಕೂಡಲೇ ಅಂತ್ಯಗೊಳಿಸಿ, ಕರ್ತವ್ಯಕ್ಕೆ ಹಾಜರಾಗಬೇಕು' ಎಂದು ಸಚಿವರು ಸಂಘಗಳ ಅಧ್ಯಕ್ಷರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

'ಸಚಿವರ ಮನವಿಯ ಟಿಪ್ಪಣಿ ಬಗ್ಗೆ ಸಂಘದ ಪದಾಧಿಕಾರಿಗಳೊಂದಿಗೆ ಗೂಗಲ್ ಮೀಟ್‌ನಲ್ಲಿ ಚರ್ಚಿಸಲಾಯಿತು. ಸಚಿವರು ಮಂಗಳವಾರ ಸೂಕ್ತ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿರುವುದರಿಂದ ಮುಷ್ಕರವನ್ನು ತಾತ್ಕಾಲಿಕವಾಗಿ ವಾಪಸ್ ಪಡೆಯಲು ನಿರ್ಧರಿಸಲಾಯಿತು' ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಜುಲೈ 15ರಂದು ನಡೆಯುವ ಸಭೆಯಲ್ಲಿ ಬೇಡಿಕೆ ಈಡೇರಿಸದಿದ್ದರೆ, ಸಂಘದ ನಿಲುವನ್ನು ಪ್ರಕಟಿಸಲಾಗುವುದು' ಎಂದರು.

ಯೂಟ್ಯೂಬರ್ ಸಮೀರ್ ವಿರುದ್ಧ ಪ್ರಕರಣ

ಮಂಗಳೂರು: 'ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಎಐ ಮೂಲಕ ಸೃಷ್ಟಿಸಲಾದ ಕಾಲ್ಪನಿಕ, ಸುಳ್ಳು ಮಾಹಿತಿಯನ್ನೊಳಗೊಂಡ ವಿಡಿಯೊವನ್ನು ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರ ಮಾಡಿ, ಸಾರ್ವಜನಿಕರು ಉದ್ರೇಕಗೊಳ್ಳುವಂತೆ ಮಾಡಿದ ಕಾರಣಕ್ಕಾಗಿ ಯೂಟ್ಯೂಬರ್ ಸಮೀರ್ ಎಂ.ಡಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಈ ಪ್ರಕರಣದಲ್ಲಿ ಸಾಕ್ಷಿ ದೂರುದಾರರು ತನ್ನ ದೂರಿನಲ್ಲಿ ಹಾಗೂ ನ್ಯಾಯಾಲಯದ ಮುಂದೆ ಬಹಿರಂಗಪಡಿಸಿರುವ ಮಾಹಿತಿಗಳನ್ನು ಹೊರತುಪಡಿಸಿ, ಇತರೆ ಮಾಹಿತಿಯನ್ನೊಳಗೊಂಡ, ಕಾಲ್ಪನಿಕವಾಗಿ ಸೃಷ್ಟಿಸಲಾದ ಸುಳ್ಳು ಮಾಹಿತಿಯ ವಿಡಿಯೊವನ್ನೂ ಈತ ಪ್ರಸಾರ ಮಾಡಿದ್ದು, ಈ ಕಾರಣಕ್ಕಾಗಿ ಧರ್ಮಸ್ಥಳ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

‘ಸೂಪರ್ ಬಗ್’ ಬಗ್ಗಿಸಲು ಅಸ್ತ್ರ

ಮನುಷ್ಯ, ಪ್ರಾಣಿ, ಸಸ್ಯ ಸ್ವಾಸ್ಥ್ಯಕ್ಕೆ ‘ಒನ್ ಹೆಲ್ತ್ ಎಎಂಆರ್ ಚಾಲೆಂಜ್’

• ಎಸ್‌. ರವಿಪ್ರಕಾಶ್

ಬೆಂಗಳೂರು: ಗಂಭೀರ ಸ್ವರೂಪದ ಕಾಯಿಲೆಗಳನ್ನು ಹರಡುವ ಬ್ಯಾಕ್ಟೀರಿಯಾ, ವೈರಸ್, ಫಂಗೈ ಮತ್ತು ಪರಾವಲಂಬಿಗಳು ಔಷಧ ಹಾಗೂ ರೋಗ ನಿರೋಧಕಗಳಿಗೆ, ಪ್ರತಿಜೀವಕ ನಿರೋಧಕ ಶಕ್ತಿ ಬೆಳೆಸಿಕೊಂಡಿರುವುದರಿಂದ ಅವು ಕೆಲಸ ಮಾಡದೇ ಸಾಯುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ.

ಇದು ಮಾನವರ ಸಮಸ್ಯೆ ಮಾತ್ರವಲ್ಲ, ಪ್ರಾಣಿಗಳು ಮತ್ತು ಕೃಷಿ ಕ್ಷೇತ್ರವೂ ಈ ಸಮಸ್ಯೆಯನ್ನು ಎದುರಿಸುತ್ತಿವೆ. ಮಾನವರಲ್ಲಿ ಕ್ಷಯ ಸೇರಿದಂತೆ ಹಲವು ಗಂಭೀರ ಸ್ವರೂಪದ ಕಾಯಿಲೆಗಳ ಔಷಧಗಳಿಗೆ ಈ ಸೂಕ್ಷ್ಮಜೀವಿಗಳು ಪ್ರತಿಜೀವಕ ನಿರೋಧಕ ಶಕ್ತಿ ಬೆಳೆಸಿಕೊಂಡಿವೆ. ಇದರಿಂದ ಚಿಕಿತ್ಸೆ ನೀಡುವುದು ಸಂಕೀರ್ಣವಾಗಿದೆ. ಸೋಂಕು ರೋಗ ತಡೆಯಲು ಸಾಧ್ಯವಾಗದೇ, ಸಾವಿನ ಸಂಖ್ಯೆಯೂ ಹೆಚ್ಚಾಗುತ್ತಿದೆ. ಕೃಷಿಯಲ್ಲೂ ರೋಗಗಳನ್ನು ತಡೆಯಲಾಗುತ್ತಿಲ್ಲ, ಫಸಲು ನಾಶವಾಗುತ್ತಿದೆ. ಪ್ರತಿಜೀವಕ ನಿರೋಧಕಗಳಿಗೆ ‘ಸೂಪರ್ ಬಗ್’ ಎಂದೂ ಕರೆಯಲಾಗುತ್ತದೆ.

ಮುಖ್ಯಾಂಶಗಳು

- ನವಪೀಳಿಗೆಯ ವಿಜ್ಞಾನಿಗಳಿಗೆ ಸವಾಲು ನೀಡಿದ ಸಂಸ್ಥೆ
- ವಿಜ್ಞಾನಿಗಳಿಗೆ ₹40 ಲಕ್ಷದಿಂದ ₹2 ಕೋಟಿ ಆರ್ಥಿಕ ಸಹಾಯ
- ದೇಶ–ವಿದೇಶಗಳ ವಿಜ್ಞಾನಿಗಳು ಪಾಲ್ಗೊಳ್ಳಲು ಅವಕಾಶ

ಜಾಗತಿಕವಾಗಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಬೆಂಗಳೂರಿನ ‘ಸೆಂಟರ್ ಫಾರ್ ಸೆಲ್ಯುಲರ್ ಆ್ಯಂಡ್ ಮಾಲೆಕ್ಯುಲಾರ್ ಪ್ಲಾಟ್‌ಫಾರ್ಮ್’(ಸಿ–ಕ್ಯಾಂಪ್) ಹೊಸ ಸಾಹಸಕ್ಕೆ ಕೈ ಹಾಕಿದೆ. ಇದಕ್ಕಾಗಿ ‘ಒನ್ ಹೆಲ್ತ್ ಎಎಂಆರ್ ಚಾಲೆಂಜ್’ ಕಾರ್ಯಕ್ರಮ ಆರಂಭಿಸಿದೆ. ಈ ಮೂಲಕ ನವಪೀಳಿಗೆಯ ವಿಜ್ಞಾನಿಗಳಿಗೆ ಒಂದು ಸವಾಲು ನೀಡಿದ್ದು, ಪ್ರತಿಜೀವಕ ನಿರೋಧಕ ಶಕ್ತಿ ಬೆಳೆಸಿಕೊಂಡ ಸೂಕ್ಷ್ಮಜೀವಿಗಳಿಗೆ ಮದ್ದರೆಯಲು ಹೊಸ ತಂತ್ರಜ್ಞಾನ ಮತ್ತು ಪರಿಹಾರವನ್ನು ಅಭಿವೃದ್ಧಿಪಡಿಸಬೇಕು. ಸೂಕ್ಷ್ಮಜೀವಿಗಳು ಪ್ರತಿಜೀವಕ ಶಕ್ತಿ ಪಡೆದ ರೀತಿ, ಅವುಗಳ ಗುರುತಿಸುವಿಕೆ ಮತ್ತು ಅವುಗಳನ್ನು ನಿಸ್ತೇಜಗೊಳಿಸಿ ನಾಶಗೊಳಿಸುವ ಸಿದ್ಧ ತಂತ್ರಜ್ಞಾನ ಮಾದರಿಯನ್ನು ವಿಜ್ಞಾನಿಗಳು ಮುಂದಿಡಬೇಕು.



ಸೂಪರ್ ಬಗ್

ವಿನೂತನ ಮತ್ತು ಅನನ್ಯ ಆವಿಷ್ಕಾರ ಮಾಡಿ ಸೈ ಎನಿಸಿಕೊಳ್ಳುವ ವಿಜ್ಞಾನಿಗಳಿಗೆ ₹40 ಲಕ್ಷದಿಂದ ₹2 ಕೋಟಿಯವರೆಗೆ ಆರ್ಥಿಕ ಸಹಾಯ ನೀಡಲು ಸಂಸ್ಥೆ ಮುಂದಾಗಿದೆ.

ಕೇಂದ್ರ ಸರ್ಕಾರದ ‘ರಾಷ್ಟ್ರೀಯ ಕ್ರಿಯಾ ಯೋಜನೆ-2.0’ ಭಾಗವಾಗಿ ಮುಂದಿನ ಎರಡು ವರ್ಷಗಳೊಳಗೆ ಪ್ರತಿಜೀವಕ ನಿರೋಧಕ ಶಕ್ತಿಗೆ ಪ್ರತಿಯಾಗಿ ಪರಿಹಾರವನ್ನು ಮುಂದಿಡಬೇಕಾಗಿದೆ.

ಇದಕ್ಕಾಗಿ ‘ಇಂಡಿಯಾ ಎಎಂಆರ್ ಇನೋವೇಷನ್ ಹಬ್’ವೊಂದನ್ನು ಆರಂಭಿಸಲಾಗಿದೆ. ಆಸಕ್ತ ವಿಜ್ಞಾನಿಗಳು ಇದರಲ್ಲಿ ನೋಂದಾಯಿಸಿಕೊಳ್ಳಬೇಕು. ದೇಶ-ವಿದೇಶಗಳ ವಿಜ್ಞಾನಿಗಳೂ ಇದರಲ್ಲಿ ಭಾಗವಹಿಸಬಹುದು. ಒಟ್ಟು 12 ಆವಿಷ್ಕಾರಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ ಎಂದು ಸಿ–ಕ್ಯಾಂಪ್ ನಿರ್ದೇಶಕ ಡಾ. ತಸ್ಲಿಮ್‌ಆರೀಫ್ ಸಯ್ಯದ್ ವಿವರಿಸಿದ್ದಾರೆ.

ಭಾರತ ಸರ್ಕಾರದ ವೈಜ್ಞಾನಿಕ ಸಲಹೆಗಾರ ಹಾಗೂ ವಿಜ್ಞಾನಿ ಪ್ರೊ.ಎ.ಕೆ. ಸೂದ್ ಅವರು ಈ ವಿಚಾರವಾಗಿ ಈಚೆಗೆ ‘ಸಿ–ಕ್ಯಾಂಪ್’ಗೆ ಭೇಟಿ ನೀಡಿದ್ದರು. ವಿಜ್ಞಾನ, ತಂತ್ರಜ್ಞಾನ, ಉದ್ಯಮ ಮತ್ತು ಸರ್ಕಾರಗಳ 75 ಪ್ರತಿನಿಧಿಗಳ ಜತೆ ನಡೆಸಿದ ಸಭೆಯಲ್ಲಿ ಅವರು, ಸಮುದಾಯ ಆರೋಗ್ಯ, ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ಪ್ರಾಣಿ ಮತ್ತು ಕೃಷಿ ಆರೋಗ್ಯವನ್ನು ಕಾಪಾಡುವುದಕ್ಕೆ ‘ಒನ್ ಹೆಲ್ತ್ ಎಎಂಆರ್ ಚಾಲೆಂಜ್’ ಅನ್ನು ಸಂಘಟಿತ ಪ್ರಯತ್ನದಿಂದ ಸಾಕಾರಗೊಳಿಸುವ ಅಗತ್ಯವನ್ನು ಪ್ರತಿಪಾದಿಸಿದರು.

‘ಒನ್ ಹೆಲ್ತ್ ಎಎಂಆರ್ ಚಾಲೆಂಜ್’ಗೆ ‘ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಆ್ಯಂಟಿಮೈಕ್ರೊಬಿಯಲ್ ರೆಸಿಸ್ಟೆನ್ಸ್ ಸಲ್ಯುಷನ್ಸ್’ (ಐಸಿಎಆರ್‌ಎಸ್) ಮುಂದಿನ ಐದು ವರ್ಷಗಳ ಕಾಲ ಹಣಕಾಸಿನ ನೆರವು ಮತ್ತು ತಾಂತ್ರಿಕ ಪರಿಣತಿಯನ್ನು ಹಂಚಿಕೊಳ್ಳಲು ಮುಂದಾಗಿದೆ. ಈ ಕೆಲಸಕ್ಕೆ ಇತರ ಮೂಲಗಳಿಂದಲೂ ಸಂಪನ್ಮೂಲ ಸಂಗ್ರಹಿಸಲಾಗುವುದು ಎಂದು ಸೂದ್ ತಿಳಿಸಿದ್ದಾರೆ

ಯಾವ ಕಾಯಿಲೆಯಲ್ಲಿ ಈ ಸಮಸ್ಯೆ?

ನಿಯೊಪ್ಲಾಸಂ, ಉಸಿರಾಟದ ಸೋಂಕು, ಕ್ಷಯ, ಕರುಳಿನ ಸೋಂಕು, ಮಧುಮೇಹ, ಮೂತ್ರಪಿಂಡದ ಕಾಯಿಲೆ, ತಾಯಿ ಮತ್ತು ಶಿಶುವಿನ ಕಾಯಿಲೆಗಳಲ್ಲಿ ಈ ಸಮಸ್ಯೆಯಿಂದ ಸಾವಿನ ಪ್ರಮಾಣ ಹೆಚ್ಚು. ಇವುಗಳ ಔಷಧ, ರೋಗನಿರೋಧಕಗಳಿಗೆ ಪ್ರತಿಜೀವಕಗಳು ನಿರೋಧಕ ಶಕ್ತಿ ಬೆಳೆಸಿಕೊಂಡಿವೆ.

ಚಿಟಿಕೆ ಸುದ್ದಿ

‘ಸುಡುಗಾಡಲ್ಲಿ ಕಾಯಿ ಒಡೆದರೂ ಜಿಎಸ್‌ಟಿ’

ಚಿತ್ರದುರ್ಗ: ‘ಸುಡುಗಾಡಿಗೆ ಹೋಗಿ ತೆಂಗಿನ ಕಾಯಿ ಒಡೆದರೂ ಜಿಎಸ್‌ಟಿ ಕಟ್ಟಬೇಕಾಗಿದೆ. ದೇಶದ ಶೇ 70ರಷ್ಟು ಜನರು ಜಿಎಸ್‌ಟಿ ಪಾವತಿಸುತ್ತಿದ್ದು, ಇದರಿಂದ ಶ್ರೀಮಂತರಿಗೆ ಮಾತ್ರ ಅನುಕೂಲವಾಗುತ್ತಿದೆ’ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

‘ಹಾಲು, ಮೊಸರು ಅರಿಶಿಣ–ಕುಂಕುಮಕ್ಕೂ ಜಿಎಸ್‌ಟಿ ತೆರಬೇಕಾಗಿದೆ. ಅಗತ್ಯ ವಸ್ತುಗಳಿಗೂ ತೆರಿಗೆ ಕಟ್ಟಬೇಕಾಗಿದೆ. ಜನರಿಗೆ ಸುಳ್ಳು ಹೇಳಿಕೊಂಡು, ಪಿಕ್ಚರ್ ನಡೆಸಿಕೊಂಡು ಹೋಗುತ್ತಿದ್ದಾರೆ. ಸಾರ್ವಜನಿಕರು ಇದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಶ್ರೀಮಂತರ ಅಂದಾಜು ₹ 16.50 ಲಕ್ಷ ಕೋಟಿ ಸಾಲ ಮನ್ನಾ ಆಗಿದೆ. ಬಡವರಿಗೆ ಕುಟುಂಬಗಳಿಗೆ ಕೇಂದ್ರ ಸರ್ಕಾರ ಯಾವುದೇ ಅನುಕೂಲ ಮಾಡುತ್ತಿಲ್ಲ. ನಗದು ರಹಿತ ವಹಿವಾಟು ಎಂಬುದೇ ಮೋಸದ ವ್ಯವಹಾರ. ಎಲ್ಲೆಡೆ ನಕಲಿ ನೋಟುಗಳ ವಹಿವಾಟು ಪತ್ತೆಯಾಗಿದೆ’ ಎಂದರು.

‘ಖರ್ಗೆ ವಿರುದ್ಧ ಬಿಜೆಪಿ ಷಡ್ಯಂತ್ರ’

ರಾಯಚೂರು: ‘ಒಂದು ನಿರ್ದಿಷ್ಟ ಜಾತಿಯವರನ್ನು ಗುರಿಯಾಗಿಸಿಕೊಂಡು ಆ ಸಮುದಾಯವನ್ನು ರಾಜಕೀಯವಾಗಿ ಸಂಪೂರ್ಣ ನಿರ್ನಾಮ ಮಾಡುವ ಉದ್ದೇಶದಿಂದ ಬಿಜೆಪಿಯು ಛಲವಾದಿ ನಾರಾಯಣಸ್ವಾಮಿ ಅವರನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುತ್ತಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಎ.ವಸಂತಕುಮಾರ ಆರೋಪಿಸಿದರು.



ವಸಂತ ಕುಮಾರ

‘ಛಲವಾದಿ ನಾರಾಯಣಸ್ವಾಮಿ ಕಾಂಗ್ರೆಸ್ ಮೂಲಕವೇ ರಾಜಕೀಯಕ್ಕೆ ಬಂದಿದ್ದಾರೆ. ಬಿಜೆಪಿ ಮುಖಂಡರ ಮನೆಯ ಬಾಗಿಲು ಕಾಯ್ದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿದ್ದಾರೆ. ಆದರೆ, ಆ ಸ್ಥಾನದ ಘನತೆ ಉಳಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ’ ಎಂದು ಶನಿವಾರ ಮಾಧ್ಯಮಗೋಷ್ಠಿಯಲ್ಲಿ ಟೀಕಿಸಿದರು.

‘ನಾರಾಯಣಸ್ವಾಮಿ ವೈಯಕ್ತಿಕವಾಗಿ ಖರ್ಗೆ ಕುಟುಂಬದ ವಿರುದ್ಧ ಹೇಳಿಕೆ ನೀಡುತ್ತಿರುವುದನ್ನು ಬಿಟ್ಟರೆ ಬೇರೆ ಏನನ್ನೂ ಮಾಡುತ್ತಿಲ್ಲ. ಒಡೆದು ಆಳುವ ನೀತಿಯಿಂದಾಗಿಯೇ ಬಿಜೆಪಿ ಬೆತ್ತಲಾಗಿದೆ. ನಾರಾಯಣಸ್ವಾಮಿ ಮೊದಲು ತಮ್ಮನ್ನು ತಾವು ಮುಚ್ಚಿಕೊಳ್ಳಬೇಕು’ ಎಂದು ವಾಗ್ದಾಳಿ ನಡೆಸಿದರು.

ಕಾಲ್ತುಳಿತಕ್ಕೆ ಪೊಲೀಸ್ ವೈಫಲ್ಯವೇ ಕಾರಣ: ಆಯೋಗ

ಬೆಂಗಳೂರು: ಆರ್‌ಸಿಬಿ ಗೆಲುವಿನ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ನಡೆದ ಕಾಲ್ತುಳಿತ ಘಟನೆಯ ತನಿಖೆಗೆ ರಚಿಸಿದ್ದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ಅವರ ಏಕಸದಸ್ಯ ವಿಚಾರಣಾ ಆಯೋಗ, ಪೊಲೀಸರ ವೈಫಲ್ಯವೇ ಘಟನೆಗೆ ಪ್ರಮುಖ ಕಾರಣವೆಂದು ವರದಿಯಲ್ಲಿ ಉಲ್ಲೇಖಿಸಿದ್ದು, ಕರ್ತವ್ಯ ಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಇಲಾಖಾ ತನಿಖೆಗೆ ಶಿಫಾರಸು ಮಾಡಿದೆ.

ಎರಡು ಸಂಪುಟಗಳನ್ನು ಒಳಗೊಂಡ ವರದಿಯನ್ನು ಆಯೋಗವು ಮುಖ್ಯಮಂತ್ರಿಗೆ ಶುಕ್ರವಾರ ಸಲ್ಲಿಸಿತ್ತು. ಆಯೋಗ ನೀಡಿದ ವರದಿಯನ್ನು ಜುಲೈ 17ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗುವುದು. ಚರ್ಚಿಸಿದ ನಂತರ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ವರದಿಯಲ್ಲಿನ ಕೆಲ ಪುಟಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ.

ಘಟನೆಗೆ ಪೊಲೀಸರ ಜತೆಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ), ಆರ್‌ಸಿಬಿ ಹಾಗೂ ಡಿಎನ್‌ಎ ಎಂಟರ್‌ಟೈನ್ಮೆಂಟ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗಳ ವೈಫಲ್ಯವೂ ಕಾರಣ. ಕಾರ್ಯಕ್ರಮ ನಡೆಸುವುದು ಅಸಾಧ್ಯವೆಂದು ಗೊತ್ತಿದ್ದರೂ ಎಲ್ಲರೂ ಶಾಮೀಲಾಗಿ ಆಯೋಜನೆಗೆ ಒತ್ತಡ ಮಾಡಿದ್ದಾರೆ. ಹೊಣೆಗಾರಿಕೆ ನಿಭಾಯಿಸದೇ ನಿರ್ಲಕ್ಷ್ಯ ತೋರಿದ್ದಾರೆ. ಈ ಎಲ್ಲರ ವಿರುದ್ಧವೂ ಕ್ರಮಕೈಗೊಳ್ಳಬಹುದು ಎಂದು ಆಯೋಗ ಶಿಫಾರಸು ಮಾಡಿದೆ.

ಕಾಲ್ತುಳಿತ ಪ್ರಕರಣದ ಕಾರಣಗಳನ್ನು ಪತ್ತೆ ಮಾಡಲು ಮ್ಯಾಜಿಸ್ಟ್ರೀಯಲ್ ತನಿಖೆ, ಸಿಐಡಿ ತನಿಖೆ ಜತೆಗೆ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕೆಲ್ ಕುನ್ಹ ನೇತೃತ್ವದ ಏಕಸದಸ್ಯ ಆಯೋಗವನ್ನೂ ರಾಜ್ಯ ಸರ್ಕಾರ ರಚಿಸಿತ್ತು. ಮ್ಯಾಜಿಸ್ಟ್ರೀಯಲ್ ವರದಿ ಈಗಾಗಲೇ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಆಯೋಗವೂ ಒಂದು ತಿಂಗಳಲ್ಲಿ ವರದಿ ಸಲ್ಲಿಸಿದೆ.

ವರದಿ ಅಂಶಗಳು

- ಕ್ರೀಡಾಂಗಣದ ಒಳಗೆ ನಿಯೋಜಿಸಿದ್ದ ಪೊಲೀಸರ ಸಂಖ್ಯೆ 79
- ಕ್ರೀಡಾಂಗಣದ ಹೊರಗೆ ಪೊಲೀಸ್, ಆಂಬುಲೆನ್ಸ್‌ಗಳೂ ಇರಲಿಲ್ಲ
- ಮಧ್ಯಾಹ್ನ 3.25ಕ್ಕೆ ಕಾಲ್ತುಳಿತ, ಪೊಲೀಸ್ ಕಮಿಷನರ್‌ಗೇ ಮಾಹಿತಿ ಸಿಕ್ಕಿದ್ದು ಸಂಜೆ 5.30ಕ್ಕೆ
- ಜಂಟಿ ಪೊಲೀಸ್ ಕಮಿಷನರ್ ಕ್ರೀಡಾಂಗಣಕ್ಕೆ ಬಂದಿದ್ದು ಸಂಜೆ 4ಕ್ಕೆ
- ನಾಲ್ಕು ಸಂಸ್ಥೆಗಳ ಕರ್ತವ್ಯ ಲೋಪ

ಗುಹೆಯಲ್ಲಿ ಸಿಲುಕಿದ್ದ ರಷ್ಯನ್ ಮಹಿಳೆ ರಕ್ಷಣೆ

ವೀಸಾ ಅವಧಿ ಮುಗಿದರೂ ವಾಸ: ಗೋಕರ್ಣದಲ್ಲಿ ಮಕ್ಕಳೊಂದಿಗೆ ವಾಸ

ಪ್ರಜಾವಾಣಿ ವಾರ್ತೆ

ಗೋಕರ್ಣ (ಉತ್ತರ ಕನ್ನಡ ಜಿಲ್ಲೆ): ಇಲ್ಲಿಯ ಸಮುದ್ರ ತೀರದ ರಾಮತೀರ್ಥದ ಹತ್ತಿರದಲ್ಲಿರುವ ಗುಡ್ಡದ ಗುಹೆಯಲ್ಲಿ ವಾಸವಿದ್ದ ರಷ್ಯನ್ ಮಹಿಳೆ ನಿನಾ ಕುಟಿನಾ (40) ಮತ್ತು ಆಕೆಯ ಇಬ್ಬರು ಪುತ್ರಿಯರನ್ನು ಗೋಕರ್ಣ ಠಾಣೆ ಪೊಲೀಸರು ಶುಕ್ರವಾರ ಸಂಜೆ ಪತ್ತೆ ಹಚ್ಚಿ ಸುರಕ್ಷಿತವಾಗಿ ಕರೆತಂದಿದ್ದಾರೆ.

‘ಗುಡ್ಡದ ಕಾಡಿನಲ್ಲಿರುವ ಗುಹೆಯಲ್ಲಿ ವಿದೇಶಿ ಮಹಿಳೆಯೊಬ್ಬರು ವಾರಗಳಿಂದ ತನ್ನ ಇಬ್ಬರು ಮಕ್ಕಳೊಂದಿಗೆ ವಾಸವಿರುವ ಬಗ್ಗೆ ಸ್ಥಳೀಯರೊಬ್ಬರ ದೂರು ಆಧರಿಸಿ ಪರಿಶೀಲನೆ ನಡೆಸಲಾಗಿತ್ತು. ರಷ್ಯನ್ ಮಹಿಳೆಯು 6 ಮತ್ತು 4 ವರ್ಷದ ಇಬ್ಬರು ಮಕ್ಕಳೊಂದಿಗೆ ಇದ್ದಿದ್ದು ಗಮನಕ್ಕೆ ಬಂದಿತು. ಇದು ಅಪಾಯಕಾರಿ ತಾಣವಾಗಿರುವ ಹಿನ್ನೆಲೆಯಲ್ಲಿ ಅಲ್ಲಿಂದ ಮಹಿಳೆ ಮತ್ತು ಮಕ್ಕಳನ್ನು ಕರೆತಂದು, ಕಾರವಾರದ ಸ್ವೀಕಾರ ಕೇಂದ್ರಕ್ಕೆ ಸೇರಿಸಲಾಗಿದೆ’ ಎಂದು ಗೋಕರ್ಣ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಶ್ರೀಧರ ಎಸ್.ಆರ್ ತಿಳಿಸಿದ್ದಾರೆ.



ಗೋಕರ್ಣದ ರಾಮತೀರ್ಥ ಗುಡ್ಡದ ಗುಹೆಯಲ್ಲಿ ವೀಸಾ ಅವಧಿ ಮುಗಿದು ವಾಸಿಸುತ್ತಿದ್ದ ರಷ್ಯನ್ ಮಹಿಳೆ ಮತ್ತು ಅವರ ಇಬ್ಬರು ಪುತ್ರಿಯರನ್ನು ಪತ್ತೆಹಚ್ಚಿದ ಗೋಕರ್ಣ ಪೊಲೀಸರು

‘ಮಹಿಳೆಯ ವೀಸಾ ಅವಧಿ 2017ರಲ್ಲಿಯೇ ಮುಗಿದಿದೆ. ಈಕೆಯನ್ನು ಕೂಲಂಕಷವಾಗಿ ವಿಚಾರಣೆ ನಡೆಸಲಾಗಿದೆ. ಕಳೆದ ಮೂರು ವಾರಗಳಿಂದ ಮಹಿಳೆ ಗೋಕರ್ಣದಲ್ಲಿ ಗುಹೆಯಲ್ಲಿ ವಾಸ ಇದ್ದುದಾಗಿ ತಿಳಿಸಿದ್ದಾರೆ. ಜುಲೈ 14 ರಂದು ಮಹಿಳೆ ಮತ್ತು ಮಕ್ಕಳನ್ನು ಬೆಂಗಳೂರಿನಲ್ಲಿರುವ ವಿದೇಶೀಯರ ವಿಭಾಗೀಯ ನೋಂದಣಾಧಿಕಾರಿ ಕಚೇರಿಗೆ (ಎಫ್‌ಆರ್‌ಆರ್‌ಒ) ಕರೆದೊಯ್ದು, ಮುಂದಿನ ಪ್ರಕ್ರಿಯೆ ನಡೆಸಲಾಗುತ್ತದೆ’ ಎಂದು ಮಾಹಿತಿ ನೀಡಿದ್ದಾರೆ.

‘ಆಧ್ಯಾತ್ಮದ ಕಡೆಗೆ ಒಲವು ಇದ್ದ ಕಾರಣ ವೀಸಾ ಅವಧಿ ಮುಗಿದರೂ ಭಾರತ ಬಿಟ್ಟು ತೆರಳಿಲ್ಲ ಎಂದು ಮಹಿಳೆ ವಿಚಾರಣೆ ವೇಳೆ ತಿಳಿಸಿದ್ದಾರೆ. 2018ರಲ್ಲಿ ನೇಪಾಳಕ್ಕೆ ಹೋಗಿದ್ದ ಅವರು 2022ರಲ್ಲಿ ಅಲ್ಲಿಂದ ಮರಳಿ ದೇಶದ ವಿವಿಧೆಡೆ ವಾಸವಿದ್ದು, ಈಚೆಗೆ ಗೋಕರ್ಣಕ್ಕೆ ಬಂದಿದ್ದಾಗಿ ಹೇಳಿಕೊಂಡಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ.

ಕಳೆದುಹೋಗಿದ್ದ ಪಾಸ್‌ಪೋರ್ಟ್

‘ವಿದೇಶಿ ಮಹಿಳೆ ತಾನು ಹಿಂದೂ ಧರ್ಮದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದು, ತನಗೆ ಅರಣ್ಯದೊಳಗೆ ಉಳಿದು ದೇವರ ಪೂಜೆ ಧ್ಯಾನ ಮಾಡಲು ಆಸಕ್ತಿಯಿರುವುದರಿಂದ ಗೋವಾದಿಂದ ಮಕ್ಕಳೊಂದಿಗೆ ಇಲ್ಲಿಗೆ ಬಂದು ಗುಡ್ಡದ ಮೇಲಿರುವ ಗುಹೆಯಲ್ಲಿ ಉಳಿದುಕೊಂಡಿರುವುದಾಗಿ ತಿಳಿಸಿದ್ದಾರೆ. ಅವರ ಇಚ್ಛೆಯಂತೆ ಗೋಕರ್ಣದ ಬಂಕಿಕೊಡ್ಲದಲ್ಲಿರುವ ಶಂಕರ ಫೌಂಡೇಶನ್ ಆಶ್ರಮಕ್ಕೆ ಬಿಡುವಂತೆ ಮನವಿ ಮಾಡಿದ್ದರು. ಗುಹೆಯಲ್ಲೇ ಪಾಸ್‌ಪೋರ್ಟ್ ಕಳೆದುಕೊಂಡಿದ್ದಾಗಿ ಮಹಿಳೆ ಹೇಳಿಕೊಂಡಿದ್ದರು. ಗುಹೆಯಲ್ಲಿ ಹುಡುಕಾಡಿದ ಬಳಿಕ ಪಾಸ್‌ಪೋರ್ಟ್ ಸಿಕ್ಕಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಭಾಗವತ್ ಆಶಯ ಈಡೇರಿಸಿ, ಗಡ್ಕರಿ ಪ್ರಧಾನಿ ಮಾಡಿ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘75 ವರ್ಷ ತುಂಬಿದೆ ಎಂದು ಬಿ.ಎಸ್.ಯಡಿಯೂರಪ್ಪ ಅವರನ್ನು ಕಣ್ಣೀರು ಹಾಕಿಸಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದ್ದ ಬಿಜೆಪಿಯ ಪಾಪಿಗಳು ಈಗ ಪ್ರಧಾನಮಂತ್ರಿ ವಿಚಾರದಲ್ಲೂ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ಆಶಯದಂತೆ ನಡೆದುಕೊಳ್ಳಲಿ’ ಎಂದು ಸಾಗರದ ಕಾಂಗ್ರೆಸ್ ಶಾಸಕ ಗೋಪಾಲಕೃಷ್ಣ ಬೇಳೂರು ಒತ್ತಾಯಿಸಿದರು.

‘75 ವರ್ಷ ತುಂಬಿದವರು ಅಧಿಕಾರದಿಂದ ಕೆಳಗೆ ಇಳಿಯಬೇಕು ಎಂಬ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರ ನಿಲುವನ್ನು ಸ್ವಾಗತಿಸುತ್ತೇನೆ. ಮೋದಿ ಅಧಿಕಾರದಿಂದ ಕೆಳಗೆ ಇಳಿದರೆ ಅವರ ಸ್ಥಾನಕ್ಕೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಸೂಕ್ತ ಆಯ್ಕೆ. ಅವರಿಗೆ ಜನಸಾಮಾನ್ಯರ ಬಗ್ಗೆ ಹೆಚ್ಚು ಕಾಳಜಿ ಇದೆ. ಆ ನಿಟ್ಟಿನಲ್ಲಿ ಬಿಜೆಪಿ ಹೈಕಮಾಂಡ್ ಚಿಂತಿಸಲಿ’ ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಸುದ್ದಿ 2 ನಿಮಿಷ

ಕೈವಲ್ಯ ಕುಮಾರ್ ಗುರವಗೆ ‘ಕೊಹಿನೂರ್ ಗಂಧರ್ವ’ ಪ್ರಶಸ್ತಿ

ಚಿತ್ರದುರ್ಗ: ಪುಣೆಯ ಬಾಲಗಂಧರ್ವ ಸಂಗೀತ ರಸಿಕ ಮಂಡಳಿ ಕೊಡಮಾಡುವ ಪ್ರತಿಷ್ಠಿತ ‘ಕೊಹಿನೂರ್ ಗಂಧರ್ವ’ ಪ್ರಶಸ್ತಿಗೆ ಧಾರವಾಡದ ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಗಾಯಕ ಪಂಡಿತ್ ಕೈವಲ್ಯ ಕುಮಾರ್ ಗುರವ ಆಯ್ಕೆಯಾಗಿದ್ದಾರೆ.

ಸಂಗೀತ ಮತ್ತು ನಾಟಕ ಕಲೆಯಲ್ಲಿ ಅಪೂರ್ವ ಸಾಧನೆ ಮಾಡಿದ ಕಲಾವಿದರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಪುಣೆಯ ಮರಾಠಿ ಗಾಯಕ, ರಂಗ ನಟ, ಬಾಲ ಗಂಧರ್ವರ ಸ್ಮರಣೆಯಲ್ಲಿ 50 ವರ್ಷಗಳಿಂದ ಪ್ರಶಸ್ತಿ ನೀಡಲಾಗುತ್ತಿದೆ. ಇದೇ ಮೊದಲ ಬಾರಿಗೆ ಮಹಾರಾಷ್ಟ್ರದ ಹೊರಗಿನ ಕಲಾವಿದರಿಗೆ ಪ್ರಶಸ್ತಿ ಘೋಷಿಸಲಾಗಿದೆ. ಪ್ರಶಸ್ತಿಯು ₹ 1,11,111 ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

ಮಂಡಳಿಯು ವಿದುಷಿ ಮಂಜೂಷಾ ಕುಲಕರ್ಣಿ ಪಾಟೀಲ ಅವರಿಗೆ ‘ಬಾಲಗಂಧರ್ವ ಗುಣಗೌರವ’ ಪುರಸ್ಕಾರವನ್ನೂ ಪ್ರಕಟಿಸಿದೆ. ಜುಲೈ 15ರಂದು ಪುಣೆಯ ಬಾಲಗಂಧರ್ವ ರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಕಿರಾಣಾ ಘರಾಣೆಯಲ್ಲಿ ಉನ್ನತ ಸಾಧನೆ ಮಾಡಿರುವ ಕೈವಲ್ಯ ಕುಮಾರ್ ಗುರವ ಅವರು ಪ್ರಬುದ್ಧ ಗಾಯನ ಶೈಲಿಗೆ ಹೆಸರುವಾಸಿಯಾಗಿದ್ದಾರೆ. ಗುರುವಾಗಿ ನೂರಾರು ಶಿಷ್ಯರನ್ನು ಹೊಂದಿದ್ದಾರೆ.

‘ಮರಾಠಿ ಕಲಾವಿದರ ವಲಯದಲ್ಲಿ ಪ್ರತಿಷ್ಠಿತ ಎನಿಸಿರುವ ಪ್ರಶಸ್ತಿಗೆ ಕರ್ನಾಟಕದ, ಅದರಲ್ಲೂ ಧಾರವಾಡದ ನನ್ನನ್ನು ಆಯ್ಕೆ ಮಾಡಿರುವುದು ಸಂತಸ ತಂದಿದೆ. ಕಲೆಗೆ ಭಾಷೆಗಳ ಬೇಲಿ ಇಲ್ಲ. ನಿರಂತರವಾದ ಸಂಗೀತ ಸಾಧನೆಗೆ ಮನ್ನಣೆ ಸಿಕ್ಕೇ ಸಿಗುತ್ತದೆ ಎನ್ನುವುದಕ್ಕೆ ಇದು ಉತ್ತಮ ಉದಾಹರಣೆ’ ಎಂದು ಪಂ.ಕೈವಲ್ಯ ಕುಮಾರ್ ಗುರವ ‘ಪ್ರಜಾವಾಣಿ’ಗೆ ತಿಳಿಸಿದರು.



ಮೈಸೂರಲ್ಲಿ 19ರಂದು ರಾಜ್ಯ ಸರ್ಕಾರದ ‘ಸಾಧನಾ ಸಮಾವೇಶ’

ಮೈಸೂರು: ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶವನ್ನು ಜುಲೈ 19ರಂದು ಇಲ್ಲಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದೆ.

ಈ ಸಂಬಂಧ ಸಿದ್ಧತೆ ಕೈಗೊಳ್ಳುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಶನಿವಾರ ನಗರದ ಸರ್ಕಾರಿ ಅತಿಥಿಗೃಹದಲ್ಲಿ ಪೂರ್ವಭಾವಿ ಸಭೆ ನಡೆಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಸಮಾವೇಶ ನಡೆಯಲಿದೆ. ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಹಾಗೂ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆಯೂ ನೆರವೇರಲಿದೆ. ವ್ಯವಸ್ಥಿತವಾಗಿ ಸಮಾವೇಶ ನಡೆಯುವಂತೆ ನೋಡಿಕೊಳ್ಳಬೇಕು. ಮೈಸೂರು ಹಾಗೂ ಚಾಮರಾಜನಗರ ಭಾಗದ ಶಾಸಕರು, ಮಾಜಿ ಶಾಸಕರು, ಜನಪ್ರತಿನಿಧಿಗಳು, ಅಧಿಕಾರಿಗಳು, ಮುಖಂಡರು ಸಹಕಾರ ನೀಡಬೇಕು. ಯಶಸ್ಸಿಗೆ ಎಲ್ಲರೂ ಶ್ರಮಿಸಬೇಕು’ ಎಂದು ಸೂಚಿಸಿದರು.

‘ಸಾವಿರಾರು ಸಂಖ್ಯೆಯಲ್ಲಿ ಬರುವ ಸಾರ್ವಜನಿಕರಿಗೆ ಯಾವುದೇ ಕಿರಿಕಿರಿ ಉಂಟಾಗದಂತೆ ನೋಡಿಕೊಳ್ಳಬೇಕು. ಇದು ಸರ್ಕಾರದ ಬೃಹತ್ ಸಮಾರಂಭವಾಗಿದ್ದು, ಪಾಲ್ಗೊಳ್ಳುವ ಎಲ್ಲರಿಗೂ ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ, ಊಟ ಮತ್ತು ಸಾರಿಗೆ ವ್ಯವಸ್ಥೆಯನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ಕೊರತೆ–ಗೊಂದಲ ಉಂಟಾಗದಂತೆ ಕ್ರಮ ಕೈಗೊಳ್ಳಬೇಕು’ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

‘ರಾಜ್ಯ ನಾಯಕರೊಂದಿಗೆ ರಾಷ್ಟ್ರೀಯ ನಾಯಕರೂ ಭಾಗವಹಿಸಲಿದ್ದಾರೆ’ ಎಂದು ತಿಳಿಸಿದರು.

‘ಸುಳ್ಳುಗಳ ಮರೆಯಲ್ಲಿ ಅವಿತುಕೊಳ್ಳುವುದನ್ನು ನಿಲ್ಲಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ನಿತ್ಯವೂ ಕನ್ನಡಿಗರಿಗೆ ಅವಮಾನ ಮಾಡುತ್ತಿರುವ ಬಗ್ಗೆ ಹಲವು ನಿದರ್ಶನಗಳಿವೆ. ಬಿಜೆಪಿ ನಾಯಕರು ಸುಳ್ಳುಗಳ ಮರೆಯಲ್ಲಿ ಅವಿತುಕೊಳ್ಳುವುದನ್ನು ನಿಲ್ಲಿಸಿ ಕರ್ನಾಟಕದ ಜನತೆಯ ಪ್ರಶ್ನೆಗಳಿಗೆ ಉತ್ತರಿಸಬೇಕು’ ಎಂದು ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆಗ್ರಹಿಸಿದ್ದಾರೆ.

ಭೇಟಿಗೆ ಅವಕಾಶ ನೀಡದೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವಮಾನ ಮಾಡಿದ್ದಾರೆ ಎಂದು ಬಿಜೆಪಿ ಮುಖಂಡ ಅಮಿತ್ ಮಾಳವೀಯ ಟೀಕಿಸಿದ್ದರು. ಇದಕ್ಕೆ ಸಾಮಾಜಿಕ ಜಾಲ ತಾಣ ‘ಎಕ್ಸ್’ನಲ್ಲಿ ಪ್ರತಿಕ್ರಿಯೆ ನೀಡಿರುವ ಸುರ್ಜೇವಾಲಾ, ‘ಮಾಳವೀಯ ಅವರ ವಿಕೃತ, ನೀಚ ಸ್ವಭಾವಕ್ಕೆ ಮಿತಿಯೇ ಇಲ್ಲದಂತಾಗಿದೆ. ಕರ್ನಾಟಕದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನು ನಿರ್ಧರಿಸಲಾಗದೆ ಬಿಜೆಪಿ ಸಹೋದರರ ನಡುವಿನ ಹತ್ಯಾ ಯುದ್ಧದಿಂದ ನುಣುಚಿಕೊಳ್ಳಲು ಮಾಳವೀಯ ಅವರು ರಾಹುಲ್ ಗಾಂಧಿ ಅವರ ಬಗ್ಗೆ ಟೀಕಿಸಿವಿಕೃತಿಮೆರೆದಿದ್ದಾರ’ ಎಂದಿದ್ದಾರೆ.

‘ಮೊದಲು ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಮಾಡುತ್ತಿರುವ ಅನ್ಯಾಯ ಹಾಗೂ ಕನ್ನಡಿಗರ ಮೇಲೆ ತೋರುತ್ತಿರುವ ದ್ವೇಷದ ಬಗ್ಗೆ ಉತ್ತರಿಸಲಿ. ವಾಸ್ತವವಾಗಿ, ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನವದೆಹಲಿಗೆ ಬಂದು 7 ಕೋಟಿ ಕನ್ನಡಿಗರ ಮೇಲಿನ ಬಿಜೆಪಿ ಸರ್ಕಾರ ಮಾಡುತ್ತಿರುವ ದ್ವೇಷ ನಿಲ್ಲಿಸುವಂತೆ ಒತ್ತಾಯಿಸಿದ್ದಾರೆ. ರಾಜಧರ್ಮದ ಬಗ್ಗೆ ನೆನಪಿಸಲು ಹಲವಾರು ಕೇಂದ್ರ ಸಚಿವರನ್ನು ಭೇಟಿಯಾಗಿದ್ದಾರೆ’ ಎಂದು ಅವರು ಹೇಳಿದ್ದಾರೆ.

ಜಿಎಸ್‌ಟಿಯಲ್ಲಿ ಕರ್ನಾಟಕದ ನ್ಯಾಯಯುತ ಪಾಲು ನೀಡದೆ ₹1 ಸಂಗ್ರಹಿಸಿ ಕೇವಲ 13 ಪೈಸೆ ನೀಡುತ್ತಿರುವುದು ಯಾಕೆ? 2023-24ರ ಕೇಂದ್ರ ಬಜೆಟ್‌ನಲ್ಲಿ ₹5,300 ಕೋಟಿ ವಿಶೇಷ ಅನುದಾನ ಭರವಸೆ ನೀಡಿ ಒಂದು ರೂಪಾಯಿ ಕೂಡ ಯಾಕೆ ಬಿಡುಗಡೆ ಮಾಡಲಿಲ್ಲ? ಉತ್ತರ ಕರ್ನಾಟಕದ ಲಕ್ಷಾಂತರ ಜನರಿಗೆ ಅನುಕೂಲವಾಗುವ ಕೃಷ್ಣಾ ಜಲವಿವಾದ ನ್ಯಾಯಮಂಡಳಿಯ ತೀರ್ಮಾನದ ಬಗ್ಗೆ ಯಾಕೆ ಅಧಿಸೂಚನೆ ಹೊರಡಿಸಿಲ್ಲ? ಎತ್ತಿನಹೊಳೆ ಮತ್ತು ಕಳಸಾ-ಬಂಡೂರಿ ಯೋಜನೆಗಳಿಗೆ ಯಾಕೆ ಅನುಮೋದನೆ ನೀಡುತ್ತಿಲ್ಲ. ಈ ಎಲ್ಲ ಪ್ರಶ್ನೆಗಳಿಗೆ ಬಿಜೆಪಿಯವರು ಉತ್ತರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

‘ಕೈ’ ಭಿನ್ನರಾಗ: ತಪ್ಪಿದ ತಾಳ

ಹೈಕಮಾಂಡ್ ನಿರ್ಧಾರ: ಸಚಿವ

ಒಂದನೇ ಪುಟದಿಂದ....

‘ರಾಹುಲ್ ಗಾಂಧಿ ಅವರು ಬಿಹಾರ ಪ್ರವಾಸದಲ್ಲಿದ್ದರು. ಹೀಗಾಗಿ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಅವರಿಗೆ ರಾಹುಲ್ ಅವರನ್ನು ದೆಹಲಿಯಲ್ಲಿ ಭೇಟಿಯಾಗಲು ಸಾಧ್ಯವಾ|ಗಿಲ್ಲ. ಈ ಕಾರಣದಿಂದ ರಾಜ್ಯ ನಾಯಕರು ವೀಕ್ ಆಗಿದ್ದಾರೆ ಎನ್ನಲು ಸಾಧ್ಯವಿಲ್ಲ’ ಎಂದು ಸಚಿವ ಪ್ರಿಯಾಂಕ್ ಅಭಿಪ್ರಾಯಪಟ್ಟರು.

> **ಕಾಂಗ್ರೆಸ್‌ನ 55 ಶಾಸಕರನ್ನು ಬಿಜೆಪಿ ಟಾರ್ಗೆಟ್ ಮಾಡಿದೆ. ಬಿಜೆಪಿಗೆ ಬರದಿದ್ದರೆ, ಇಡಿ, ಸಿಬಿಐ ದಾಳಿ ಮಾಡಿ ಅಕ್ರಮವಾಗಿ ಹೊರ ಹಾಕ್ತೀವಿ ಎಂದು ಬೆದರಿಸುತ್ತಿದ್ದಾರೆ**
> **ವಿಜಯಾನಂದ ಕಾಶಪ್ಪನವರ,** ಶಾಸಕ

> **ಅಕ್ಟೋಬರ್‌ನಲ್ಲಿ ಸಚಿವ ಸಂಪುಟ ಪುನಾರಚನೆ ಆಗುತ್ತದೆ. ನಾನೂ ಸೇರಿದಂತೆ ಹಲವರು ಸಚಿವ ಸ್ಥಾನದ ಆಕಾಂಕ್ಷಿಗಳಿದ್ದೇವೆ ಎಂಬುದು ಹೈಕಮಾಂಡ್‌ಗೂ ಗೊತ್ತಿದೆ**
> **ಡಾ.ಅಜಯ್ ಸಿಂಗ್,** ಶಾಸಕ

‘ಸಂಕ್ರಾಂತಿ ನಡೆದೇ ನಡೆಯುತ್ತದೆ’

ಒಂದನೇ ಪುಟದಿಂದ...

‘ಶಿವಕುಮಾರ್ ಪಕ್ಷ ಕಟ್ಟಿದ್ದಾರೆ, ಅಧಿಕಾರಕ್ಕೆ ತರಲು ಶ್ರಮಿಸಿದ್ದಾರೆ’ ಎಂಬ ವಿಚಾರ ಚರ್ಚೆಯಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಎಲ್ಲರೂ ಸೇರಿದರೆ ಅಲ್ವಾ ಕಟ್ಟುವುದಕ್ಕೆ ಆಗುವುದು? ಹನಿ ಹನಿ ಕೂಡಿದರೆ ಹಳ್ಳ ಎಂಬಂತೆ ಎಲ್ಲರೂ ಸೇರಿ ಪಕ್ಷ ಕಟ್ಟಿದ್ದೇವೆ. ಅದರಲ್ಲಿ ಶಿವಕುಮಾರ್ ಪ್ರಮುಖ ಪಾತ್ರ ವಹಿಸಿದ್ದಾರೆ. ಅದನ್ನು ನಾವು ಇಲ್ಲ ಎನ್ನಲಾಗುತ್ತದೆಯೇ’ ಎಂದು ಕೇಳಿದರು.

‘ಮಲ್ಲಿಕಾರ್ಜುನ ಖರ್ಗೆ, ಜಿ.ಪರಮೇಶ್ವರ, ದಿನೇಶ್ ಗುಂಡೂರಾವ್, ಆರ್.ವಿ.ದೇಶಪಾಂಡೆ ಪಾತ್ರ ಇಲ್ಲವೇ? ಯಾರ್‍ಯಾರಿಗೆ ಪಕ್ಷ ಏನೇನು ಜವಾಬ್ದಾರಿ ಕೊಟ್ಟಿದೆಯೋ ಅದನ್ನು ನಿರ್ವಹಿಸಿದ್ದಾರೆ. ಪ್ರಸ್ತಾಪಗಳು ಬಹಳಷ್ಟು ಬರುತ್ತವೆ. ಹೈಕಮಾಂಡ್ ಈಗಾಗಲೇ ನಿರ್ಧಾರ ಕೈಗೊಂಡಾಗಿದೆ. 5 ವರ್ಷ ನಾನೇ ಇರುತ್ತೇನೆ ಎಂದು ಸಿದ್ದರಾಮಯ್ಯ ಹೇಳಿರುವಾಗ ಯಾವುದೇ ಪ್ರಶ್ನೆ ಇಲ್ಲ’ ಎಂದು ಹೇಳಿದರು.

ಶಾಸಕರ ಬೆಂಬಲ ಪಕ್ಷಕ್ಕಿದೆ : ತನ್ವೀರ್

ಒಂದನೇ ಪುಟದಿಂದ...

ಅವರಿಗೆ ದೇವರು ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಕೇಳಿಕೊಳ್ಳುತ್ತೇನೆ. ಜನರ ಆಸೆಗಳಿಗೆ ಸ್ಪಂದಿಸುವ ಸರ್ಕಾರ ಕೊಡಿ ಎಂದು ಬಯಸುತ್ತೇನೆ’ ಎಂದು ಪ್ರತಿಕ್ರಿಯಿಸಿದರು.

‘ಮುಖ್ಯಮಂತ್ರಿ ಬದಲಾವಣೆ ವಿಚಾರ ಮಾಧ್ಯಮದ ಮುಂದೆ ಮಾತನಾಡುವುದಿಲ್ಲ. ಐದು ವರ್ಷ ಸುಭದ್ರ ಸರ್ಕಾರ ಕೊಡಬೇಕಾದುದು ನಮ್ಮ ಜವಾಬ್ದಾರಿ. ಪಕ್ಷದಿಂದ ಸರ್ಕಾರ ಬಂದಿದೆಯೇ ಹೊರತು, ಸರ್ಕಾರದಿಂದ ಪಕ್ಷ ಬಂದಿಲ್ಲ. ಯಾರೋ ಮಾತನಾಡಿದಕ್ಕೆ ಪ್ರತಿಕ್ರಿಯಿಸುತ್ತಾ ಹೋದರೆ, ಅದಕ್ಕೆ ಕೊನೆಯೇ ಇರುವುದಿಲ್ಲ’ ಎಂದರು.

ಸಿ.ಎಂ ಅವಧಿ ಐದು ವರ್ಷ: ಕಾನೂನು ಮಾಡಲಿ- ಈಶ್ವರಾನಂದಪುರಿ ಸ್ವಾಮೀಜಿ

‘ಸಿದ್ದರಾಮಯ್ಯ ಅವರ ಯೋಜನೆಗಳನ್ನು ಸಹಿಸಲಾಗದವರು ಟೀಕಿಸುತ್ತಿದ್ದಾರೆ. ಬಹುಮತ ಇರುವ ಸರ್ಕಾರದ ಮುಖ್ಯಮಂತ್ರಿ ಐದು ವರ್ಷಗಳು ಅಧಿಕಾರದಲ್ಲಿ ಇರುವಂತೆ ಕಾನೂನು ಮಾಡಬೇಕು’ ಎಂದು ಹೊಸದುರ್ಗದ ಕನಕ ಗುರುಪೀಠದ ಈಶ್ವರಾನಂದಪುರಿ ಸ್ವಾಮೀಜಿ ಹೇಳಿದರು.

ಅಹಲ್ಯಾಬಾಯಿ ಹೋಳ್ಕರ್ ಅವರ 300 ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರು ಬಿಟ್ಟಿ ಭಾಗ್ಯ ನೀಡಿ, ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತಿದ್ದಾರೆ ಎಂದು ಈ ನಾಡಿನ ಪ್ರಸಿದ್ಧ ಮಠಾಧೀಶರೊಬ್ಬರು ಹೇಳಿದ್ದಾರೆ. ಸ್ವಾಮೀಜಿ ಅವರು ಈ ಮಾತನ್ನು ಆಡಬಾರದಾಗಿತ್ತು. ಉಚಿತ ಬಸ್ ಪ್ರಯಾಣದಂತಹ ಯೋಜನೆಯು ಮಹಿಳಾ ಸಬಲೀಕರಣಕ್ಕೆ ಸಹಕಾರಿಯಾಗಿದೆ’ ಎಂದರು.

‘ಕೃಷಿ ಹೊಂಡ ಯೋಜನೆಯ ಫಲಾನುಭವಿಗಳಲ್ಲಿ ನಾನು ಕೂಡ ಒಬ್ಬನಾಗಿದ್ದೇನೆ. 30 ಎಕರೆ ಜಮೀನಿನಲ್ಲಿ ಈ ಯೋಜನೆಯಡಿ ಕೃಷಿ ಹೊಂಡ ಮಾಡಿಸಿದ್ದೇನೆ’ ಎಂದೂ ಅವರು ಹೇಳಿದರು.

ಬಲಾಬಲ ಪ್ರದರ್ಶನದ ಸಮಯವಲ್ಲ: ಡಿ.ಕೆ. ಸುರೇಶ್

ಬೆಂಗಳೂರು: ‘ಶಿವಕುಮಾರ್ ಸದ್ಯ ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಶಾಸಕರ ಬೆಂಬಲ ಕೇಳುವ, ಬಲಾಬಲ ಪ್ರದರ್ಶನದ ಸಮಯವಲ್ಲ. ಶಿವಕುಮಾರ್‌ಗೆ ಆತುರ, ಆತಂಕ ಇಲ್ಲ’ ಎಂದು ‘ಬಮೂಲ್’ ಅಧ್ಯಕ್ಷ ಡಿ.ಕೆ. ಸುರೇಶ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಪ್ರತಿಯೊಬ್ಬ ರಾಜಕಾರಣಿಗೂ ಮುಖ್ಯಮಂತ್ರಿ ಆಗಬೇಕು ಎನ್ನುವ ಆಸೆ ಇರುತ್ತದೆ. ಅವರ ಸಮುದಾಯ, ಅಭಿಮಾನಿಗಳು, ಅನುಯಾಯಿಗಳು ತಮ್ಮ ನಾಯಕ ಮುಖ್ಯಮಂತ್ರಿಯಾಗಲಿ ಎನ್ನುವ ಆಶಯ ವ್ಯಕ್ತಪಡಿಸುವುದು ಸಹಜ. ಎಲ್ಲ ಅವಧಿಯಲ್ಲೂ ಇಂತಹ ಆಶಯ ಅಭಿವ್ಯಕ್ತವಾಗುತ್ತಲೇ ಇರುತ್ತದೆ. ತಪ್ಪು ಎನ್ನಲಾಗದು’ ಎಂದರು.

ಶಿವಕುಮಾರ್ ಅವರು ಪಕ್ಷ ಕೊಟ್ಟಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್‌ನ ನಾಯಕರಿಗೆ ಗೌರವ ನೀಡುತ್ತಾರೆ. ಸಿದ್ದರಾಮಯ್ಯ ಅವರ ನಾಯಕತ್ವದಲ್ಲಿ ಸರ್ಕಾರ ಮುನ್ನಡೆದಿದೆ. ಅವರಿಗೆ ರಾಜಕೀಯ ಇಚ್ಛಾಶಕ್ತಿ ಇದೆ. ಹಾಗಾಗಿ, ಮಾಧ್ಯಮಗಳ ಜತೆ ಕೆಲ ವಿಚಾರ ಹಂಚಿಕೊಂಡಿರಬಹುದು ಎಂದು ಹೇಳಿದರು.

ಸಚಿವ ಎಂ.ಬಿ.ಪಾಟೀಲ ಮನೆಯಲ್ಲಿ ನಡೆದ ಸಭೆ–ಲಿಂಗಾಯತ ಮಠಾಧಿಪತಿಗಳ ಒಕ್ಕೂಟದಿಂದ ನಿರ್ಧಾರ

ಸೆ.1ರಿಂದ ಬಸವ ಸಂಸ್ಕೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ರಾಜ್ಯ ಸರ್ಕಾರವು ಘೋಷಿಸಿ ಒಂದು ವರ್ಷವಾಗುತ್ತಿದ್ದು, ಅದನ್ನು ಸಂಭ್ರಮಿಸಲು ಪ್ರತಿ ಜಿಲ್ಲೆಯಲ್ಲಿ ಬಸವ ಸಂಸ್ಕೃತಿ ಅಭಿಯಾನ ನಡೆಸುತ್ತೇವೆ ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟವು ನಿರ್ಧರಿಸಿದೆ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಹೇಳಿದರು.

ಎಂ.ಬಿ.ಪಾಟೀಲ ಅವರ ಮನೆಯಲ್ಲಿ ಒಕ್ಕೂಟದ ಸ್ವಾಮೀಜಿಗಳು ಶನಿವಾರ ಸಭೆ ನಡೆಸಿದರು. ಸಭೆಯ ನಂತರ ಮಾತನಾಡಿದ ಪಾಟೀಲ ಅವರು, ‘ಒಂದು ತಿಂಗಳು ಈ ಅಭಿಯಾನ ನಡೆಸಬೇಕು ಮಠಾಧಿಪತಿಗಳು ನಿರ್ಧರಿಸಿದರು. ಬಸವಣ್ಣನವರ ಜನ್ಮಸ್ಥಳವಾದ ಬಸವನ ಬಾಗೇವಾಡಿಯಲ್ಲಿ ಸೆಪ್ಟೆಂಬರ್ 1ರಂದು ಅಭಿಯಾನಕ್ಕೆ ಚಾಲನೆ ನೀಡಲಾಗುತ್ತದೆ’ ಎಂದರು.

ಮುಖ್ಯಾಂಶಗಳು

- ಬಸವನ ಬಾಗೇವಾಡಿಯಲ್ಲಿ ಅಭಿಯಾನಕ್ಕೆ ಚಾಲನೆ
- ವಿದ್ಯಾರ್ಥಿಗಳು, ಸಾರ್ವಜನಿಕರ ಜತೆ ಸಂವಾದ
- ರಾಜ್ಯವ್ಯಾಪಿ ಸಂಚರಿಸಲಿದೆ ಬಸವರಥ

‘ಅಭಿಯಾನದ ಭಾಗವಾಗಿ ಬಸವರಥವು ಎಲ್ಲ ಜಿಲ್ಲೆಗಳಲ್ಲೂ ಸಂಚರಿಸಿ ಅಕ್ಟೋಬರ್ 1ರಂದು ಬೆಂಗಳೂರು ತಲುಪಲಿದೆ. ಅಂದು ಲಕ್ಷಾಂತರ ಲಿಂಗಾಯತ ಅನುಯಾಯಿಗಳನ್ನು ಸೇರಿಸಿ, ಬೆಂಗಳೂರಿನಲ್ಲಿ ಬೃಹತ್ ಸಮಾರೋಪ ಸಮಾರಂಭ ನಡೆಸಲಾಗುವುದು. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕನೆಂದು ಘೋಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಂದು ಸನ್ಮಾನಿಸಲಾಗುವುದು’ ಎಂದರು.



ಎಂ.ಬಿ.ಪಾಟೀಲ ಮನೆಯಲ್ಲಿ ನಡೆದ ಸಭೆಯಲ್ಲಿ ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಸ್ವಾಮೀಜಿಗಳು ಭಾಗಿಯಾಗಿದ್ದರು

‘ಅಭಿಯಾನದಲ್ಲಿ ಪ್ರತಿದಿನವೂ ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರ ಜತೆ ಸಂವಾದ, ಪಾದಯಾತ್ರೆ, ವಚನ ಸಂಗೀತ, ಸ್ವಾಮೀಜಿಗಳು ಮತ್ತು ಆಹ್ವಾನಿತ ಉಪನ್ಯಾಸಕರ ಭಾಷಣ ಹಾಗೂ ಪಂಡಿತಾರಾಧ್ಯ ಶಿವಾಚಾರ್ಯರು ಬರೆದಿರುವ ‘ಜಂಗಮದೆಡೆಗೆ’ ನಾಟಕ ಪ್ರದರ್ಶನ ನಡೆಯಲಿದೆ’ ಎಂದರು.

‘ಜಾಗತಿಕ ಲಿಂಗಾಯತ ಮಹಾಸಭಾ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ರಾಷ್ಟ್ರೀಯ ಬಸವದಳ, ಬಸವ ಸಮಿತಿ, ಬಸವ ಕೇಂದ್ರ, ಕದಳಿ ಮಹಿಳಾ ವೇದಿಕೆ ಮುಂತಾದ ಬಸವಪರ ಸಂಘಟನೆಗಳು ಅಭಿಯಾನಕ್ಕೆ ಕೈಜೋಡಿಸಿವೆ’ ಎಂದು ಒಕ್ಕೂಟದ ಅಧ್ಯಕ್ಷರೂ ಆಗಿರುವ ಭಾಲ್ಕಿ ಮಠದ ಬಸವಲಿಂಗ ಪಟ್ಟದ್ದೇವರು ತಿಳಿಸಿದರು.

ಅಥಣಿಯ ಚೆನ್ನಬಸವ ಸ್ವಾಮೀಜಿ, ನೆಲಮಂಗಲದ ಪವಾಡ ಶ್ರೀಮಠದ ಸಿದ್ಧಲಿಂಗ ಸ್ವಾಮೀಜಿ, ಗೊರವಣ್ಣ ದೇವರ ಮಠದ ನಂಜುಂಡ ಸ್ವಾಮೀಜಿ, ನಿಜಗುಣ ಮಠದ ಇಮ್ಮಡಿ ನಿಜಗುಣ ಸ್ವಾಮೀಜಿ, ಬಸವ ಧರ್ಮಪೀಠದ ಬಸವಯೋಗಿ ಸ್ವಾಮೀಜಿ, ಚನ್ನಪಟ್ಟಣದ ಬೇಗೂರು ಮಠದ ಮೃತ್ಯುಂಜಯ ಸ್ವಾಮೀಜಿ ಸಭೆಯಲ್ಲಿ ಭಾಗಿಯಾಗಿದ್ದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	122.19	18,733	20,236
ಹಾರಂಗಿ	2,859	2,853.66	4,028	4,416
ಕಬಿನಿ	2,284.00	2,282.09	12,978	12,000
ಹೇಮಾವತಿ	2,922	2,920.64	8,370	4,300
ಲಿಂಗನಮಕ್ಕಿ	1,819	1,798.65	35,657	6,650
ಸೂಪಾ (ಮೀ)	564	544.18	13,900.4	5,667.10
ಮಾಣಿ	595	586.72	4,384	-
ತುಂಗಭದ್ರಾ	1,633	1,625.13	46,579	36,026
ಮಲಪ್ರಭಾ	2,079.5	2,070.15	6,312	194
ಘಟಪ್ರಭಾ	2175	2,166.33	9,547	3,919
ಭದ್ರಾ *	186	175	11,643	2,975
ಆಲಮಟ್ಟಿ (ಮೀ)	519.6	517.41	97,988	93,370
ನಾರಾಯಣಪುರ (ಮೀ)	492.25	490.79	60,000	46,256

* ನೆಲಮಟ್ಟದಿಂದ

ಚಿಟಿಕೆ ಸುದ್ದಿ

ಚಿರತೆಗೆ ವಿಷಪ್ರಾಶನ ಶಂಕೆ: ಆರೋಪಿ ವಶಕ್ಕೆ

ಚಾಮರಾಜನಗರ: ಬಿಆರ್‌ಟಿ ಅರಣ್ಯ ವ್ಯಾಪ್ತಿಯ ಹರವೆ ಹೋಬಳಿ ತೆರಕಣಾಂಬಿ ಸಮೀಪದ ಕೊತ್ತಲ ವಾಡಿಯ ಕರಿಕಲ್ಲು ಕ್ವಾರಿಯಲ್ಲಿ ಚಿರತೆಯ ಅಸಹಜ ಸಾವಿನ ಪ್ರಕರಣದಲ್ಲಿ ಒಬ್ಬನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಚಿರತೆಯ ಕಳೇಬರದ ಪಕ್ಕದಲ್ಲೇ ನಾಯಿ ಹಾಗೂ ಕುರುವಿನ ಕಳೇಬರವೂ ಪತ್ತೆಯಾಗಿದ್ದರಿಂದ, ವಿಷಪ್ರಾಶನದಿಂದ ಮೃತಪಟ್ಟಿರಬಹುದು ಎಂಬ ಶಂಕೆ ಇದೆ. ಹೀಗಾಗಿ, ಅಧಿಕಾರಿಗಳು ಜಾನುವಾರ ಸಾಕಣೆದಾರನೊಬ್ಬನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ. ಚಾಮರಾಜನಗರ ಸಿಸಿಎಫ್ ಹೀರಾಲಾಲ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ.

ಪ್ರಿಯಕರ ಆತ್ಮಹತ್ಯೆ: ನಾಲ್ವರ ವಿರುದ್ಧ ದೂರು

ಹರಪನಹಳ್ಳಿ (ವಿಜಯನಗರ ಜಿಲ್ಲೆ): ಪ್ರೇಯಸಿಯ ಮನೆಯವರ ಕೊಲೆ ಬೆದರಿಕೆಗೆ ಹೆದರಿದ ಪ್ರೇಮಿಯೊಬ್ಬ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಉದ್ಗಟ್ಟಿ ದೊಡ್ಡ ತಾಂಡಾದಲ್ಲಿ (ಬಾಪೂಜಿ ನಗರ) ಗುರುವಾರ ನಡೆದಿದೆ. ಪ್ರೇಯಸಿ ಸೇರಿ ನಾಲ್ವರ ವಿರುದ್ಧ ಸ್ಥಳೀಯ ಠಾಣೆಯಲ್ಲಿ ಶುಕ್ರವಾರ ದೂರು ದಾಖಲಾಗಿದೆ.


ಶಶಿಕುಮಾರ್

ಬಾಪೂಜಿ ನಗರದ ಪಿ.ಟಿ.ಶಶಿಕುಮಾರ್ (26) ಮೃತ ಯುವಕ.

ಯುವತಿ ಮನೆಯವರು ಹೆಣ್ಣು ಕೊಡುವುದಿಲ್ಲ ಎಂದು ಹೇಳಿ ಕೊಲೆ ಬೆದರಿಕೆ ಹಾಕಿದ್ದರು. ಇದರಿಂದ ಜೀವ ಭಯದಲ್ಲಿ ಶಶಿಕುಮಾರ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತನ ಅಣ್ಣ ಠಾಣೆಗೆ ದೂರು ನೀಡಿದ್ದಾರೆ.

‘449 ಎಕರೆ ಜಮೀನು ನೀಡಲು ಸಿದ್ಧ’

ದೇವನಹಳ್ಳಿ–ಚನ್ನರಾಯಪಟ್ಟಣ ರೈತ ಹೋರಾಟ ಸಮಿತಿ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ ವಿವಿಧ ರೈತ ಸಂಘಟನೆಗಳ ಪ್ರತಿನಿಧಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ರಕ್ಷಣಾ ಮತ್ತು ವೈಮಾನಿಕ ಪಾರ್ಕ್ ನಿರ್ಮಾಣಕ್ಕೆ 449 ಎಕರೆಯಷ್ಟು ಭೂಮಿಯನ್ನು ನೀಡಲು ಸಿದ್ಧ ಎಂದು ತಿಳಿಸಿದ್ದಾರೆ.

‘ಚನ್ನರಾಯಪಟ್ಟಣ ಹೋಬಳಿ ರೈತ ಹೋರಾಟ ಸಮಿತಿ’ಯು ಸ್ವಾತಂತ್ರ್ಯ ಉದ್ಯಾನದಲ್ಲಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಪ್ರತಿನಿಧಿಗಳು, ಆನಂತರ ಮುಖ್ಯಮಂತ್ರಿಯ ನಿವಾಸಕ್ಕೆ ತೆರಳಿ ಅವರೊಂದಿಗೆ ಚರ್ಚೆ ನಡೆಸಿದರು.

‘ಸ್ವಾಧೀನಪಡಿಸಿಕೊಳ್ಳುವ ಪ್ರತಿ ಎಕರೆಗೆ ₹3.50 ಕೋಟಿ ಪರಿಹಾರ ನಿಗದಿ ಮಾಡಬೇಕು. ಭೂಮಿ ಕೊಡುವ ರೈತರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ಉದ್ಯೋಗ ನೀಡಬೇಕು. ತಾಲ್ಲೂಕಿನ ಜಮೀನನ್ನು ಯಾವುದೇ ಕಾರಣಕ್ಕೂ ಹಸಿರು ವಲಯವನ್ನಾಗಿ ಘೋಷಿಸಬಾರದು. ಗ್ರಾಮದ ಅಕ್ಕಪಕ್ಕದ ಜಮೀನುಗಳನ್ನು ಹಳದಿ ವಲಯವನ್ನಾಗಿ ಪರಿವರ್ತಿಸಬೇಕು ಎಂಬ ಷರತ್ತುಗಳಿರುವ ಮನವಿಪತ್ರವನ್ನು ಸಲ್ಲಿಸಿದರು’ ಎಂದು ಮುಖ್ಯಮಂತ್ರಿ ಸಚಿವಾಲಯವು ತಿಳಿಸಿದೆ.

ಸಭೆ ನಡೆಸಿದ ಮುಖ್ಯಮಂತ್ರಿ

ಭೂಸ್ವಾಧೀನಕ್ಕೆ ರೈತರ ವಿರೋಧ ವ್ಯಕ್ತವಾಗಿರುವ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಸಚಿವರು ಹಾಗೂ ಕಾನೂನು ತಜ್ಞರ ಜತೆ ಸಭೆ ನಡೆಸಿದರು.


ಸಿದ್ದರಾಮಯ್ಯ

ಸಚಿವ ಕೆ.ಎಚ್. ಮುನಿಯಪ್ಪ, ಸಚಿವ ಬೈರತಿ ಸುರೇಶ್, ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಸಭೆಯಲ್ಲಿ ಇದ್ದರು.

ಪ್ರತಿಭಟನೆಯಲ್ಲಿ ಸಮಿತಿ ಸಂಚಾಲಕರಾದ ಶ್ರೀನಿವಾಸ್, ಪ್ರಕಾಶ್ ದೊಡ್ಡೇಗೌಡ, ರಂಗಣ್ಣ, ಜಗದೀಶ್, ಭರತ್, ದೇವರಾಜ್ ಅವರ ಜೊತೆಯಲ್ಲಿ ನೂರಾರು ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬೆವರ ಹನಿಗೆ ಗೌರವ ಕೊಡಿ: ಆಗ್ರಹ

ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆ ವೇಳೆ, ‘ಭೂಮಿ ಕಳೆದುಕೊಂಡ ರೈತರಿಗೆ ಸರ್ಕಾರಿ ಉದ್ಯೋಗ ನೀಡಿ’, ‘ರೈತರ ಭೂಮಿಗೆ ಮಾರುಕಟ್ಟೆ ದರ ಕೊಡಿ ಅಥವಾ ಪರ್ಯಾಯ ಭೂಮಿ ನೀಡಿ’, ‘ರೈತರ ಬೆವರ ಹನಿಗೆ ಗೌರವ ಕೊಡಿ’ ಎಂದು ಒತ್ತಾಯಿಸಿದರು.

‘ಕೆಐಎಡಿಬಿ, ರೈತರ ಜಮೀನು ವಶಕ್ಕೆ ಪಡೆಯುವ ಬಗ್ಗೆ ತಕರಾರಿಲ್ಲ. ನಮ್ಮ ಷರತ್ತುಗಳಿಗೆ ಒಪ್ಪಿದರೆ ಮಾತ್ರ ಭೂ ಸ್ವಾಧೀನಕ್ಕೆ ಸಹಕಾರ ನೀಡುತ್ತೇವೆ. ಇಲ್ಲದಿದ್ದರೆ ಸರ್ಕಾರದ ವಿರುದ್ಧ ನಿರಂತರ ಹೋರಾಟ ಮಾಡುತ್ತೇವೆ’ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.



ದೇವನಹಳ್ಳಿ–ಚನ್ನರಾಯಪಟ್ಟಣ ಹೋರಾಟ ಸಮಿತಿ ನೇತೃತ್ವದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ನೂರಾರು ರೈತರು ಪಾಲ್ಗೊಂಡಿದ್ದರು

ರೈತರ ಭೂಮಿ ಕಸಿಯಲು ಮುಂದಾದರೆ ಸರ್ಕಾರ ಪತನ

ದೇವನಹಳ್ಳಿ: ಭೂಸ್ವಾಧೀನ ವಿರೋಧಿಸಿ ಸಾವಿರಕ್ಕೂ ಹೆಚ್ಚು ದಿನಗಳಿಂದ ಹೋರಾಟ ನಡೆಸುತ್ತಿರುವ ಚನ್ನರಾಯಪಟ್ಟಣದ ರೈತರ ಪರ ರಾಜ್ಯ ಸರ್ಕಾರ ಜುಲೈ 15ರಂದು ಗಟ್ಟಿ ನಿರ್ಧಾರ ತೆಗೆದುಕೊಳ್ಳದೆ ಹೋದರೆ ಸರ್ಕಾರ ಪತನ ಆಗಬಹುದು ಎಂದು ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿ ಹೋರಾಟಗಾರರು ಎಚ್ಚರಿಕೆ ನೀಡಿದ್ದಾರೆ.

‘ಒಂದು ವೇಳೆ ಸರ್ಕಾರ ರೈತರ ವಿರುದ್ಧ ನಿರ್ಧಾರ ಕೈಗೊಂಡರೆ ಹೋರಾಟವನ್ನು ರಾಷ್ಟ್ರ ಮಟ್ಟಕ್ಕೆ ಕೊಂಡೊಯ್ಯುತ್ತೇವೆ’ ಎಂದು ಸಂಘಟನೆಯ ಮುಖಂಡರು ಶನಿವಾರ ದೇವನಹಳ್ಳಿ ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಸಿದರು.

‘ಭೂಮಿ ಕೊಡುವುದಾಗಿ ಕೆಲವರು ಹೇಳುತ್ತಿದ್ದಾರೆ. ಹೋರಾಟ ನಿರ್ಣಾಯಕ ಹಂತ ತಲುಪಿರುವಾಗ ಈ ರೀತಿಯ ಹೇಳಿಕೆಗೆ ಸರ್ಕಾರದ ಪ್ರಚೋದನೆ ಕಾರಣ. ಚನ್ನರಾಯಪಟ್ಟಣ ಹೋಬಳಿ 13 ಹಳ್ಳಿ ರೈತರು, ಜನರು ಒಗ್ಗೂಡಿ ಹೋರಾಡುತ್ತಿರುವಾಗ ಸರ್ಕಾರ ಆ ಒಗ್ಗಟ್ಟು ಮುರಿಯಲು ಭೂಸ್ವಾಧೀನ ಪರವಾದ ತಂಡ ಹುಟ್ಟು ಹಾಕಿದೆ. ಇದು ಸರ್ಕಾರಿ ಪ್ರಾಯೋಜಿತ ದಲ್ಲಾಳಿಗಳ ತಂಡ’ ಎಂದು ಹೋರಾಟಗಾರರು ಟೀಕಿಸಿದರು.

ಭೂಸ್ವಾಧೀನ ಕೈಬಿಡಿ: ಸಾಹಿತಿ, ಹೋರಾಟಗಾರರ ಪತ್ರ

ನವದೆಹಲಿ: ದೇವನಹಳ್ಳಿಯಲ್ಲಿ ರೈತರ ಜಮೀನು ಕಿತ್ತುಕೊಂಡು ಅಲ್ಲಿ 1,700 ಎಕರೆಯಲ್ಲಿ ರಕ್ಷಣಾ ಕಾರಿಡಾರ್ ಸ್ಥಾಪನೆಗೆ ಮುಂದಾಗಿರುವುದು ಸರಿಯಲ್ಲ. ಈ ಭೂಸ್ವಾಧೀನ ಕೈಬಿಡಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ಒತ್ತಾಯಿಸಿ ಸಾಹಿತಿಗಳು, ಹೋರಾಟಗಾರರು ಹಾಗೂ ಚಿಂತಕರು ಕಾಂಗ್ರೆಸ್ ಹೈಕಮಾಂಡ್‌ಗೆ ಶನಿವಾರ ಪತ್ರ ಬರೆದಿದ್ದಾರೆ.

ಈ ಪತ್ರಕ್ಕೆ ರಾಮಚಂದ್ರ ಗುಹಾ, ದೇವನೂರು ಮಹಾದೇವ, ಪ್ರಕಾಶ್ ಕಮ್ಮರಡಿ, ಅ.ನ. ಯಲ್ಲಪ್ಪ ರೆಡ್ಡಿ, ಬಿ.ಜಯಶ್ರೀ, ಪ್ರೊ.ಕೆ.ನಾರಾಯಣಗೌಡ, ಡಾ.ಜಿ.ಎನ್. ದೇವಿ, ಎಸ್.ಜಿ.ಸಿದ್ದರಾಮಯ್ಯ, ಗಿರೀಶ್ ಕಾಸರವಳ್ಳಿ, ಅರುಂಧತಿ ನಾಗ್, ಡಾ.ಕೆ.ಮರುಳಸಿದ್ಧಪ್ಪ, ವಿಜಯಮ್ಮ ಸೇರಿದಂತೆ ವಿವಿಧ ಕ್ಷೇತ್ರಗಳ 65 ಸಾಧಕರು ಸಹಿ ಹಾಕಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್ ಹಾಗೂ ಜೈರಾಮ್ ರಮೇಶ್ ಅವರಿಗೆ ಈ ಪತ್ರ ಬರೆಯಲಾಗಿದೆ.

‘ಪತ್ನಿಯೇ ನದಿಗೆ ನೂಕಿದ್ದಾಳೆ’

ಪ್ರಜಾವಾಣಿ ವಾರ್ತೆ

ರಾಯಚೂರು: ತಾಲ್ಲೂಕಿನ ಗುರ್ಜಾಪುರ ಬಳಿಯ ಕೃಷ್ಣಾ ನದಿಯ ಬ್ರಿಜ್ ಕಂ ಬ್ಯಾರೇಜ್ ಮೇಲೆ ನಿಂತು ಫೋಟೊ ತೆಗೆಸಿಕೊಳ್ಳುತ್ತಿದ್ದಾಗ ತನ್ನ ಪತ್ನಿಯೇ ನದಿಗೆ ತಳ್ಳಿದ್ದಾಳೆ ಎಂದು ಪತಿ ಆರೋಪಿಸಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಮೂರು ತಿಂಗಳ ಹಿಂದೆಯಷ್ಟೇ ಮದುವೆಯಾಗಿರುವ ರಾಯಚೂರು ತಾಲ್ಲೂಕಿನ ದೇವಸುಗೂರಿನ ತಾತಪ್ಪ ಹಾಗೂ ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ದೇವರಗಡ್ಡಿಯ ಗದ್ದೆಮ್ಮ ಸೇತುವೆ ಮೇಲೆ ಶುಕ್ರವಾರ ಬೈಕ್ ಮೇಲೆ ಹೋಗುತ್ತಿದ್ದಾಗ ಫೋಟೊ ತೆಗೆದುಕೊಳ್ಳಲು ನಿರ್ಧರಿಸಿದ್ದಾರೆ. ಫೋಟೊ ತೆಗೆಯುವಾಗ ನದಿಗೆ ಬಿದ್ದ ತಾತಪ್ಪ ಈಜಿ ಕಲ್ಲು ಬಂಡೆ ಏರಿ ರಕ್ಷಣೆಗಾಗಿ ಮೊರೆಯಿಡುತ್ತಿದ್ದರು. ಆಗ ಸ್ಥಳೀಯರು ಅವರನ್ನು ರಕ್ಷಿಸಿದ್ದಾರೆ.

‘ಸೇತುವೆ ಮೇಲೆ ಮೊದಲು ಪತ್ನಿಯ ಫೋಟೊವನ್ನು ನಾನು ತೆಗೆದ ಬಳಿಕ ನನ್ನ ಫೋಟೊ ತೆಗೆಯುವಂತೆ ಹೇಳಿದೆ. ಆಗ ಆಕೆ ನನ್ನನ್ನೇ ನದಿಗೆ ನೂಕಿದ್ದಾಳೆ’ ಎಂದು ತಾತಪ್ಪ ಆರೋಪಿಸಿದ್ದಾರೆ. ‘ತಾತಪ್ಪ ಅವರೇ ಆಯತಪ್ಪಿ ನದಿಗೆ ಬಿದ್ದಿದ್ದಾರೆ’ ಎಂದು ಗದ್ದೆಮ್ಮ ಪ್ರತಿಕ್ರಿಯಿಸಿದ್ದಾರೆ.

‘2025ರ ಏಪ್ರಿಲ್ 18ರಂದು ತಾತಪ್ಪ ಹಾಗೂ ಗದ್ದೆಮ್ಮ ಅವರ ಮದುವೆ ಆಗಿದೆ. ತಾತಪ್ಪ ನದಿಯಲ್ಲಿ ಬಿದ್ದ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಪ್ರಕರಣದ ಬಗ್ಗೆ ವಿವರಣೆ ನೀಡುವಂತೆ ದಂಪತಿಗೆ ನೋಟಿಸ್ ಜಾರಿ ಮಾಡಿದ್ದೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ತಿಳಿಸಿದ್ದಾರೆ.



ಗೀಜಗನ ಗೂಡು..

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿ ಹೊರವಲಯದ ನಾಗನಹಳ್ಳಿ ಬಳಿ ಶನಿವಾರ ಮರವೊಂದರಲ್ಲಿ ಗೂಡು ಕಟ್ಟುತ್ತಿರುವ ಗೀಜಗನ ಹಕ್ಕಿಗಳು ಕ್ಯಾಮೆರಾ ಕಣ್ಣಿಗೆ ಕಂಡಿದ್ದು ಹೀಗೆ

ಕಡಿತವಾಗಿತ್ತು ಇಂಧನ ಸಂಪರ್ಕ

ಒಂದನೇ ಪುಟದಿಂದ...

- ಎಂಜಿನ್‌ಗಳನ್ನು ಪುನಃ ಆನ್ ಮಾಡಲು ಪೈಲಟ್‌ಗಳು ಪ್ರಯತ್ನಿಸಿದ್ದಾರೆ. ಆಗ ಎಂಜಿನ್ 1ರಲ್ಲಿ ಭಾಗಶಃ ಚೇತರಿಕೆ ಕಂಡುಬಂದಿದೆ. ಆದರೆ ಎಂಜಿನ್ 2ರಲ್ಲಿ ಯಾವುದೇ ಚೇತರಿಕೆ ಕಂಡುಬಂದಿಲ್ಲ. ಇದರಿಂದ ಈ ಪ್ರಯತ್ನ ವಿಫಲವಾಗಿದೆ
- ಈ ತುರ್ತು ಪರಿಸ್ಥಿತಿಯ ಬಗ್ಗೆ ತಿಳಿಯುತ್ತಿದ್ದಂತೆ ಪೈಲಟ್‌ಗಳು ವಿಮಾನದ ಸ್ವಯಂಚಾಲಿತ ವ್ಯವಸ್ಥೆಯನ್ನು ಸಕ್ರಿಯಗೊಳಿಸಲು ಯತ್ನಿಸಿದ್ದಾರೆ. ‘ರ್‍ಯಾಮ್ ಏರ್ ಟರ್ಬೈನ್’ (ಆರ್‌ಎಟಿ), ತುರ್ತು ಫ್ಯಾನ್ ವ್ಯವಸ್ಥೆಗಳನ್ನು ಸಕ್ರಿಯಗೊಳಿಸಿದರೂ ದುರಂತ ತಪ್ಪಿಸುವಲ್ಲಿ ವಿಫಲರಾಗಿದ್ದಾರೆ
- ಸಾಮಾನ್ಯವಾಗಿ ವಿಮಾನದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾದಾಗ ‘ಆರ್‌ಎಟಿ’ ಅನ್ನು ಸಕ್ರಿಯಗೊಳಿಸಲಾಗುತ್ತದೆ. ಅಂದರೆ ಎಂಜಿನ್ ಸ್ಥಗಿತಗೊಂಡಿದ್ದು, ವಿದ್ಯುತ್ ಪೂರೈಕೆ ಮೇಲೂ ಪರಿಣಾಮ ಆಗಿತ್ತೆಂದು ಗೊತ್ತಾಗುತ್ತದೆ
- ತುರ್ತುಸ್ಥಿತಿ ಅರಿತ ಪೈಲಟ್ ಒಬ್ಬರು ‘ಮೇ ಡೇ, ಮೇ ಡೇ, ಮೇ ಡೇ’ ಎಂದು ನೆರವು ಯಾಚಿಸಿದರು. ಆದರೆ ವಾಯು ಸಂಚಾರ ನಿಯಂತ್ರಕರು ಏನಾಗಿದೆ ಎಂಬುದನ್ನು ತಿಳಿದುಕೊಳ್ಳುವಷ್ಟರಲ್ಲಿ ವಿಮಾನವು ವಿದ್ಯಾರ್ಥಿಗಳ ಹಾಸ್ಟೆಲ್‌ಗೆ ಅಪ್ಪಳಿಸಿತ್ತು
- ವಿಮಾನವು ಟೇಕ್–ಆಫ್ ಆಗುವ ವೇಳೆ ಸಹ ಪೈಲಟ್ ವಿಮಾನ ಚಲಾಯಿಸುತ್ತಿದ್ದರು. ಕ್ಯಾಪ್ಟನ್ ಮೇಲ್ವಿಚಾರಣೆ ನಡೆಸುತ್ತಿದ್ದರು
- ವಿಮಾನಕ್ಕೆ ಪೂರೈಸಲಾಗಿದ್ದ ಇಂಧನವನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಗಿದ್ದು, ತೃಪ್ತಿದಾಯಕ ವರದಿ ಬಂದಿದೆ
- ಪಕ್ಷಿಗಳ ಹಾರಾಟ ಅಥವಾ ಹವಾಮಾನ ವೈಪರೀತ್ಯ ಈ ಅವಘಡಕ್ಕೆ ಕಾರಣವಲ್ಲ
- ಇಬ್ಬರೂ ಪೈಲಟ್‌ಗಳು ಆರೋಗ್ಯವಂತರಾಗಿದ್ದರು. ಅಲ್ಲದೆ ವಿಮಾನ ಹಾರಾಟದಲ್ಲಿ ಸಾಕಷ್ಟು ಅನುಭವಿಗಳಾಗಿದ್ದರು
- ಬೋಯಿಂಗ್ 787–8 ವಿಮಾನಗಳ ಎಂಜಿನ್ ನಿರ್ವಾಹಕರು ಮತ್ತು ತಯಾರಿಕರಿಗೆ ಸದ್ಯಕ್ಕೆ ಯಾವುದೇ ಕ್ರಮ ಕೈಗೊಳ್ಳಬಾರದು

ನಿಲ್ದಾಣದಿಂದ ಪತನದವರೆಗೆ...

11:17	ಲಂಡನ್‌ನ ಗ್ಯಾಟ್‌ವಿಕ್‌ಗೆ ತೆರಳಬೇಕಿದ್ದ ವಿಮಾನವು ದೆಹಲಿಯಿಂದ ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ಬಂದಿಳಿಯಿತು
11:55	ನಿಲ್ದಾಣಕ್ಕೆ ಏರ್‌ಇಂಡಿಯಾ ಸಿಬ್ಬಂದಿ ಆಗಮನ
12:10	ದೋಷನಿವಾರಣೆ ಪರೀಕ್ಷೆ ಬಳಿಕ ಹಾರಾಟಕ್ಕೆ ಸಿದ್ಧಗೊಂಡ ವಿಮಾನ
12:35	ಬೋರ್ಡಿಂಗ್ ಗೇಟ್‌ಗೆ ವಿಮಾನದ ಸಿಬ್ಬಂದಿ ಪ್ರವೇಶ
1:13	ವಿಮಾನದ ಪುಶ್ ಬ್ಯಾಕ್‌ಗೆ ಪೈಲಟ್‌ಗಳಿಂದ ಮನವಿ, ಏರ್‌ಟ್ರಾಫಿಕ್ ಕಂಟ್ರೋಲ್‌ನಿಂದ (ಎಟಿಸಿ) ಸಮ್ಮತಿ
1:17	ವಿಮಾನದ ಸ್ಟಾರ್ಟಪ್‌ಗೆ ಎಟಿಸಿ ಒಪ್ಪಿಗೆ
1:18	ಪಾರ್ಕಿಂಗ್ ಪ್ರದೇಶದಿಂದ ನಿರ್ಗಮಿಸಿದ ವಿಮಾನ
1:19	ರನ್ ವೇ–23 ಬಳಕೆಯ ಅಗತ್ಯವನ್ನು ಎಟಿಸಿಗೆ ಖಚಿತಪಡಿಸಿದ ಪೈಲಟ್‌ಗಳು
1:25	ಟ್ಯಾಕ್ಸಿ ತೆರವಿಗೆ ಎಟಿಸಿ ಅನುಮತಿ
1:33	ರನ್ ವೇ –23ಯಲ್ಲಿ ಸರಿಯಾಗಿ ನಿಲ್ಲಿಸಲು ಸೂಚನೆ
1:37	ಟೇಕ್–ಆಫ್‌ಗೆ ಅನುಮತಿ
1:38	ವಿಮಾನ ಮೇಲಕ್ಕೆ ಹಾರಿದಾಗ ‘ಕಟ್–ಆಫ್’ ಸ್ಥಿತಿ ತಲುಪಿದ ಎಂಜಿನ್ 1 ಮತ್ತು 2ಕ್ಕೆ ಇಂಧನ ಪೂರೈಸುವ ಸ್ವಿಚ್
1:39	ಪೈಲಟ್ ಒಬ್ಬರಿಂದ ‘ಮೇ ಡೇ’ ಘೋಷಣೆ. ಎಟಿಸಿ ಪ್ರಶ್ನೆಗಳಿಗೆ ಯಾವುದೇ ಪ್ರತಿಕ್ರಿಯೆ ಇಲ್ಲ. ವಿಮಾನ ನಿಲ್ದಾಣದ ಹೊರಗೆ ವಿಮಾನ ಪತನ
1:44	ಘಟನಾ ಸ್ಥಳಕ್ಕೆ ಧಾವಿಸಿದ ವಿಮಾನ ನಿಲ್ದಾಣದ ಅಗ್ನಿಶಾಮಕ ಸಿಬ್ಬಂದಿ

‘ಇಂಧನ ಸ್ವಿಚ್: ಆಕಸ್ಮಿಕವಾಗಿ ಬದಲಾಗದು’

ನವದೆಹಲಿ/ಮುಂಬೈ (ಪಿಟಿಐ): ವಿಮಾನದಲ್ಲಿನ ಇಂಧನ ಪೂರೈಕೆಯ ಸ್ವಿಚ್‌ನ ಸ್ಥಾನ ಆಕಸ್ಮಿಕವಾಗಿ ಬದಲಾಗುವುದಿಲ್ಲ. ಹಾಗೆಲ್ಲ ಅದನ್ನು ಬದಲಿಸುವಂತೆಯೂ ಇಲ್ಲ. ಅದಕ್ಕೆ ಒಂದು ಕಾರ್ಯವಿಧಾನವಿದೆ ಎನ್ನುತ್ತಾರೆ ಅನುಭವಿ ಪೈಲಟ್ ಒಬ್ಬರು.

ಇಂಧನದ ಸ್ವಿಚ್‌ಗಳನ್ನು ಸಾಮಾನ್ಯವಾಗಿ ‘ಬ್ರಾಕೆಟ್’ಗಳಿಂದ ರಕ್ಷಿಸಲಾಗಿರುತ್ತದೆ. ಹೀಗಾಗಿ ಅವುಗಳ ಆಕಸ್ಮಿಕ ಚಲನೆ ಸಾಧ್ಯವಿಲ್ಲ. ಅವುಗಳ ಸ್ಥಾನವನ್ನು ಬದಲಿಸಲು ಮೊದಲಿಗೆ ಸ್ವಿಚ್‌ಗಳನ್ನು ಮೇಲಕ್ಕೆ ಎತ್ತಬೇಕು. ಬೋಯಿಂಗ್ 787 ಡ್ರೀಮ್‌ಲೈನರ್‌ನಲ್ಲಿ ಇಂಧನ ಸ್ವಿಚ್‌ಗಳು ‘ಥ್ರಸ್ಟ್ ಲಿವರ್’ಗಳ ಅಡಿಯಲ್ಲಿರುತ್ತವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ವಿಮಾನ ಸಕಾರಾತ್ಮಕವಾಗಿ ಹಾರಿದಾಗ ಪೈಲಟ್ ‘ಗೇರ್ ಅಪ್’ ಎಂದು ಹೇಳಬೇಕು. ಅದನ್ನು ಹೇಳಲಾಗಿದೆಯೋ ಇಲ್ಲವೋ ಎಂಬುದರ ಬಗ್ಗೆ ‘ಟ್ರಾನ್ಸ್‌ಕ್ರಿಪ್ಟ್’ ಉಲ್ಲೇಖಿಸಿಲ್ಲ. ‘ಗೇರ್ ಲಿವರ್’ ಏಕೆ ಕೆಳಗಿದೆ? ‘ಗೇರ್ ಅಪ್’ ಮಾಡುವ ಹಂತದಲ್ಲಿ ಏನಾಗಿರಬಹುದು ಎಂಬ ಪ್ರಶ್ನೆಗಳು ಕಾಡುತ್ತಿವೆ ಎಂದಿದ್ದಾರೆ.

‘ಇಂಧನ ಪೂರೈಕೆ ಸ್ವಿಚ್‌ಗಳ ಸ್ಥಾನವನ್ನು ಮಾನವ ಸಂಪರ್ಕದಿಂದ ಮಾತ್ರ ಬದಲಿಸಬಹುದು. ಈ ವಿಮಾನದಲ್ಲಿ ಸ್ವಿಚ್‌ಗಳ ಸ್ಥಾನ ಏಕೆ ಬದಲಾಗಿದೆ ಎಂಬುದರ ಬಗ್ಗೆ ಪ್ರಾಥಮಿಕ ವರದಿಯಲ್ಲಿ ಸ್ಪಷ್ಟ ಮಾಹಿತಿಯಿಲ್ಲ’ ಎಂದು ಭಾರತೀಯ ಪೈಲಟ್‌ಗಳ ಒಕ್ಕೂಟದ (ಎಫ್‌ಪಿಐ) ಅಧ್ಯಕ್ಷ ಸಿ.ಎಸ್.ರಾಂಧವ ಪ್ರತಿಕ್ರಿಯಿಸಿದ್ದಾರೆ.

‘ಇದು ತಾಂತ್ರಿಕ ಅಥವಾ ಸಾಫ್ಟ್‌ವೇರ್ ಲೋಪದಿಂದ ಸಂಭವಿಸಿದೆಯೇ ಎಂಬುದರತ್ತಲೂ ಗಮನಹರಿಸಬೇಕು’ ಎಂದು ಡಿಜಿಸಿಎಯ ಹಿರಿಯ ಮಾಜಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪಾರದರ್ಶಕ ತನಿಖೆಗೆ ಆಗ್ರಹ: ‘ಪೈಲಟ್‌ಗಳೇ ದೋಷ ಎಸಗಿರಬಹುದು ಎಂಬಂತೆ ಪ್ರಾಥಮಿಕ ತನಿಖಾ ವರದಿ ಸೂಚಿಸುತ್ತದೆ. ಇದು ಸರಿಯಲ್ಲ. ದುರಂತದ ಕುರಿತು ಮುಕ್ತ ಮತ್ತು ಪಾರದರ್ಶಕ ತನಿಖೆ ಆಗಬೇಕು’ ಎಂದು ಭಾರತೀಯ ವಿಮಾನಯಾನ ಪೈಲಟ್‌ಗಳ ಸಂಘ (ಎಎಲ್‌ಪಿಎ) ಆಗ್ರಹಿಸಿದೆ.

ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು ತನಿಖಾ ಪ್ರಕ್ರಿಯೆಯಲ್ಲಿ ತನ್ನ ಪ್ರತಿನಿಧಿಗಳನ್ನು ವೀಕ್ಷಕರನ್ನಾಗಿಸಬೇಕು ಎಂದು ಸಂಘ ಒತ್ತಾಯಿಸಿದೆ.

ಇಂಧನ ನಿಯಂತ್ರಣ ಸ್ವಿಚ್

- 2018ರ ಡಿಸೆಂಬರ್‌ನಲ್ಲಿ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್‌ನಿಂದ (ಎಫ್‌ಎಎ) ಸ್ಪೆಷಲ್ ಏರ್‌ವರ್ದಿನೆಸ್ ಇನ್‌ಫಾರ್ಮೇಶನ್ ಬುಲೆಟಿನ್ (ಎಸ್‌ಎಐಬಿ) ಬಿಡುಗಡೆ
- ಇಂಧನ ನಿಯಂತ್ರಣ ಸ್ವಿಚ್‌ನ ಲಾಕಿಂಗ್ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಬುಲೆಟಿನ್‌ನಲ್ಲಿ ಎಚ್ಚರಿಕೆ
- ಎಸ್‌ಎಐಬಿಯು ತನ್ನ ನಿರ್ದೇಶನದ ಕಡ್ಡಾಯ ಅನುಷ್ಠಾನಕ್ಕೆ ಸೂಚಿಸಿಲ್ಲದ ಕಾರಣ ಇದಕ್ಕೆ ಸಂಬಂಧಿಸಿದ ಪರಿಶೀಲನೆ ನಡೆಸಿರಲಿಲ್ಲ: ಏರ್ ಇಂಡಿಯಾ
- ನಿರ್ವಹಣೆ ದಾಖಲೆ ಪ್ರಕಾರ, ಥ್ರೋಟಲ್ ಕಂಟ್ರೋಲ್ ಮಾಡ್ಯುಲ್ ಅನ್ನು (ಎಂಜಿನ್ ಒಳಗೆ ಗಾಳಿ ಪ್ರವಹಿಸುವಿಕೆಯನ್ನು ನಿಯಂತ್ರಿಸುವ ವಿದ್ಯುತ್‌ಚಾಲಿತ ಸಾಧನ) 2019 ಮತ್ತು 2023ರಲ್ಲಿ ಬದಲಾಯಿಸಲಾಗಿತ್ತು
- ಈ ಬದಲಾವಣೆಯು ಇಂಧನ ನಿಯಂತ್ರಣ ಸ್ವಿಚ್‌ಗೆ ಸಂಬಂಧಿಸಿಲ್ಲ

ಆಧಾರ: ವಿಮಾನ ಅಪಘಾತ ತನಿಖಾ ಬ್ಯುರೊ (ಎಎಐಬಿ) ಪ್ರಾಥಮಿಕ ತನಿಖಾ ವರದಿ

7 ದಿನಗಳ ಪುನಶ್ಚೇತನ ಶಿಬಿರದಲ್ಲಿ ಭಾಗವಹಿಸಲಿದ್ದಾರೆ ಗಗನಯಾತ್ರಿಗಳು

ಶುಭಾಂಶು ಶುಕ್ಲಾ 15ಕ್ಕೆ ಭೂಮಿಗೆ ವಾಪಸ್

ನವದೆಹಲಿ (ಪಿಟಿಐ): ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ (ಐಎಸ್‌ಎಸ್) ಜುಲೈ 15ರಂದು ಭೂಮಿಗೆ ಮರಳಲಿದ್ದು, ಕ್ಯಾಲಿಫೋರ್ನಿಯಾದ ಕಡಲ ತೀರದ ನೀರಿನಲ್ಲಿ ಇಳಿಯಲಿದ್ದಾರೆ.

‘ಆ್ಯಕ್ಸಿಯಂ–4’ ಕಾರ್ಯಕ್ರಮದ ಭಾಗವಾಗಿ ಶುಕ್ಲಾ, ಕಮಾಂಡರ್ ಪೆಗ್ಗಿ ವಿಟ್ಸನ್, ಹಂಗರಿಯ ಟಿಬೊರ್ ಕಾಪು ಹಾಗೂ ಪೋಲೆಂಡ್‌ನ ಸ್ಲಾವೋಸ್ ಯು. ವಿನ್ನಿವ್ಸ್ಕಿ ಅವರು ಜೂನ್ 26ರಂದು ಐಎಸ್‌ಎಸ್‌ಗೆ ತೆರಳಿದ್ದರು.

ನಾಲ್ವರು ಗಗನಯಾತ್ರಿಗಳು ಐಎಸ್‌ಎಸ್‌ನಿಂದ ಸೋಮವಾರ ಸಂಜೆ ಭಾರತೀಯ ಕಾಲಮಾನ ಪ್ರಕಾರ ಸಂಜೆ 4.35ಕ್ಕೆ ಡ್ರ್ಯಾಗನ್ ನೌಕೆಯಲ್ಲಿ ಹೊರಡಲಿದ್ದು, ನಿಗದಿತ ಕಕ್ಷೆಯಲ್ಲಿ ಹಲವು ಸುತ್ತು ಹಾಕಿದ ಬಳಿಕ ಜುಲೈ 15ರಂದು ಮಧ್ಯಾಹ್ನ 3 ಗಂಟೆಗೆ ಕ್ಯಾಲಿಫೋರ್ನಿಯಾದ ಕಡಲ ತೀರದಲ್ಲಿ ಬಂದಿಳಿಯಲಿದ್ದಾರೆ ಎಂದು ರಾಷ್ಟ್ರೀಯ ಏರೋನಾಟಿಕ್ಸ್ ಮತ್ತು ಬಾಹ್ಯಾಕಾಶ ಆಡಳಿತವು ತಿಳಿಸಿದೆ.

ಶುಕ್ಲಾ ಹಾಗೂ ಇತರ ಮೂವರು ಗಗನಯಾತ್ರಿಗಳು ಸ್ಪೇಸ್ ಸೂಟ್ ಧರಿಸಿ, ಮಧ್ಯಾಹ್ನ 2.25ಕ್ಕೆ ಬಾಹ್ಯಾಕಾಶ ನೌಕೆ ಏರುವ ಸಾಧ್ಯತೆ ಇದೆ. ಭೂಮಿಗೆ ಪಯಣ ಆರಂಭಿಸುವ ಮುನ್ನ ಅಗತ್ಯ ಪರೀಕ್ಷೆಗಳನ್ನು ನಡೆಸಲಿದ್ದಾರೆ.

18 ದಿನಗಳ ಕಾಲ ಬಾಹ್ಯಾಕಾಶದಲ್ಲಿದ್ದ ಗಗನಯಾತ್ರಿಗಳು ಭೂಮಿಗೆ ಮರಳಿದ ಬಳಿಕ, ಏಳು ದಿನಗಳ ಪುನಶ್ಚೇತನ ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಅವರು ಭೂಮಿಯ ಗುರುತ್ವಾಕರ್ಷಣೆಗೆ ಹೊಂದಿಕೊಳ್ಳಲು ವೈದ್ಯರ ತಂಡ ನೆರವಾಗಲಿದೆ.

ಐಎಸ್‌ಎಸ್ ಗಂಟೆಗೆ 28 ಸಾವಿರ ಕಿ.ಮೀ. ವೇಗದಲ್ಲಿ ಭೂಮಿಯನ್ನು ಸುತ್ತುತ್ತಿದೆ. ಡ್ರ್ಯಾಗನ್ ಬಾಹ್ಯಾಕಾಶ ಕೋಶವನ್ನು ಐಎಸ್‌ಎಸ್‌ನಿಂದ ಅನ್‌ಡಾಕ್ (ಬೇರ್ಪಡಿಸುವುದು) ಪ್ರಕ್ರಿಯೆ ನಡೆಸಲಾಗುತ್ತದೆ. ಬಳಿಕ, ಭೂಮಿಯ ವಾತಾವರಣಕ್ಕೆ ಪ್ರವೇಶಿಸಲಿದೆ. ಆಳ ಬಾಹ್ಯಾಕಾಶದಲ್ಲಿ ಒಂದು ದಿನಕ್ಕಾಗಿ ಸೂಕ್ಷ್ಮ ಪಾಚಿಯನ್ನು ಬಳಸಿ ಆಹಾರ ಉತ್ಪಾದನೆ, ಆಮ್ಲಜನಕ ಹಾಗೂ ಜೈವಿಕ ಇಂಧನ ಉತ್ಪಾದನೆಯ ಪ್ರಯೋಗವನ್ನು ಶುಕ್ಲಾ ಅವರು ಮುನ್ನಡೆಸಿದ್ದಾರೆ ಎಂದು ‘ಆ್ಯಕ್ಸಿಯಂ ಸ್ಪೇಸ್’ ಹೇಳಿದೆ.

ಕಕ್ಷೆಯಲ್ಲಿನ ಕ್ಲಿಷ್ಟಕರ ವಾತಾವರಣದಲ್ಲಿ ಗಗನಯಾತ್ರಿಗಳು ದೀರ್ಘಕಾಲದವರೆಗೆ ದೈಹಿಕ ಹಾಗೂ ಮಾನಸಿಕವಾಗಿ ಹೇಗಿರಲಿದ್ದಾರೆ ಎಂಬುದರ ಪ್ರಯೋಗವೂ ನಡೆಯಲಿದೆ.

ಮುಖ್ಯಾಂಶಗಳು

- 18 ದಿನಗಳ ಕಾಲ ಬಾಹ್ಯಾಕಾಶದಲ್ಲಿ ವಾಸ
- ಕ್ಯಾಲಿಫೋರ್ನಿಯಾದ ಕಡಲ ತೀರದಲ್ಲಿ ಇಳಿಯಲಿದ್ದಾರೆ
- 263 ಕೆ.ಜಿ. ವಸ್ತುಗಳನ್ನು ಹೊತ್ತು ತರಲಿದೆ ನೌಕೆ


ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಗಗನಯಾತ್ರಿಗಳು

ಐಎಸ್‌ಎಸ್‌ನಲ್ಲಿ 60 ಪ್ರಯೋಗ

‘ಡ್ರ್ಯಾಗನ್ ನೌಕೆಯು ಗಗನಯಾತ್ರಿ ಗಳೊಂದಿಗೆ 263 ಕೆ.ಜಿಯಷ್ಟು ವಸ್ತುಗಳನ್ನು ಹೊತ್ತು ತರಲಿದೆ. ನಾಸಾದ ಹಾರ್ಡ್‌ವೇರ್ ಹಾಗೂ 60 ಪ್ರಯೋಗಗಳಿಗೆ ಬಳಸಿದ್ದ ವಸ್ತುಗಳೂ ಸೇರಿವೆ. ಬಾಹ್ಯಾಕಾಶದ ಕೊನೆಯ ದಿನಗಳನ್ನು ಸಂತಸದಿಂದ ಕಳೆಯುತ್ತಿದ್ದೇವೆ. ಈ ಸಂಭ್ರಮಕ್ಕಾಗಿ ಕಾಕ್‌ಟೈಲ್ ಮತ್ತು ಉತ್ತಮ ಸ್ನೇಹಿತರ ಬಳಗವಿದೆ’ ಎಂದು ಆ್ಯಕ್ಸಿಯಂ–4 ಮಿಷನ್ ಕಮಾಂಡರ್ ಪೆಗ್ಗಿ ವಿಟ್ಸನ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಶುಕ್ಲಾ ಅವರು ತೆಗೆದುಕೊಂಡು ಹೋದ ಕ್ಯಾರೆಟ್ ಹಲ್ವಾ ಹಾಗೂ ಮಾವಿನ ರಸ ಪಾರ್ಟಿಗೆ ಕಳೆ ತಂದಿತ್ತು ಎಂದಿದ್ದಾರೆ.

₹550 ಕೋಟಿ ಪಾವತಿ

2027ರಲ್ಲಿ ಬಾಹ್ಯಾಕಾಶಕ್ಕೆ ಮನುಷ್ಯರನ್ನು ಕಳುಹಿಸುವ ‘ಗಗನಯಾನ’ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವ ಉದ್ದೇಶ ಇಸ್ರೊ ಹೊಂದಿದೆ. ಅಲ್ಲಿನ ಅನುಭವ ಪಡೆಯುವ ಉದ್ದೇಶದಿಂದ ಶುಭಾಂಶು ಶುಕ್ಲಾ ಅವರನ್ನು ಐಎಸ್‌ಎಸ್‌ಗೆ ಕಳುಹಿಸಲು ₹550 ಕೋಟಿ ಪಾವತಿಸಲಾಗಿದೆ ಎಂದು ಇಸ್ರೊ ತಿಳಿಸಿದೆ.

ಗಗನಯಾನ: ಎಸ್‌ಎಂಪಿಎಸ್ ಅಭಿವೃದ್ಧಿ ಪೂರ್ಣ

ಬೆಂಗಳೂರು (ಪಿಟಿಐ): ಮಹತ್ವಾಕಾಂಕ್ಷಿ ಗಗನಯಾನ ಯೋಜನೆಯ ನೌಕೆಗೆ ಅಳವಡಿಸಲಾಗುವ ಸರ್ವಿಸ್ ಮಾಡ್ಯೂಲ್ ಪ್ರೊಪಲ್ಷನ್ ಸಿಸ್ಟಮ್‌ನ (ಎಸ್‌ಎಂಪಿಎಸ್) ಅಭಿವೃದ್ಧಿ ಕಾರ್ಯವು ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಇಸ್ರೊ ಶನಿವಾರ ಮಾಹಿತಿ ನೀಡಿದೆ.

ಎಸ್‌ಎಂಪಿಎಸ್‌ನ ಕಾರ್ಯಕ್ಷಮತೆಯ ಭಾಗವಾಗಿ 350 ಸೆಕೆಂಡ್‌ನಷ್ಟು ಉಷ್ಣತೆ ಕ್ಷಮತೆಯ ಪರೀಕ್ಷೆಯನ್ನು ಶುಕ್ರವಾರ ನಡೆಸಲಾಯಿತು. ಈ ಸಂದರ್ಭದಲ್ಲಿ ಪ್ರೊಪಲ್ಷನ್ ಸಿಸ್ಟಮ್‌ನ ಒಟ್ಟಾರೆ ಕಾರ್ಯನಿರ್ವಹಣೆಯು ನಿರೀಕ್ಷೆಯಂತೆ ಇತ್ತು ಎಂದು ಇಸ್ರೊ ಪ್ರಕಟಣೆ ತಿಳಿಸಿದೆ.

ತಮಿಳುನಾಡಿನ ಮಹೇಂದ್ರಗಿರಿಯ ಇಸ್ರೊ ಪ್ರೊಪಲ್ಷನ್ ಕೇಂದ್ರದಲ್ಲಿ ಈ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದೆ.

ಪ್ರೊಪಲ್ಷನ್ ಸಿಸ್ಟಮ್ ಅಂದರೆ, ಒತ್ತಡವನ್ನು ಸೃಷ್ಟಿಸಿ ನೂಕುಬಲದ ಮೂಲಕ ನೌಕೆಯನ್ನು ನಿಗದಿತ ಕಕ್ಷೆಗೆ ಅಥವಾ ಪ್ರದೇಶಕ್ಕೆ ಕಳುಹಿಸುವ ಪ್ರಕ್ರಿಯೆ.

ಸುಳಿವು ನೀಡಿದವರಿಗೆ ₹1.18 ಕೋಟಿ ಬಹುಮಾನ ಘೋಷಿಸಲಾಗಿತ್ತು

ಛತ್ತೀಸಗಢ: 23 ನಕ್ಸಲರ ಶರಣಾಗತಿ

ಸುಕ್ಮಾ, ಛತ್ತೀಸಗಢ (ಪಿಟಿಐ): ಇಲ್ಲಿನ ಸುಕ್ಮಾ ಜಿಲ್ಲೆಯಲ್ಲಿ ಮೂವರು ದಂಪತಿ ಸೇರಿದಂತೆ 23 ಮಂದಿ ನಕ್ಸಲರು ಶರಣಾಗಿದ್ದಾರೆ. ಇವರ ಸುಳಿವು ನೀಡಿದವರಿಗೆ ಸರ್ಕಾರವು ₹1.18 ಕೋಟಿ ನಗದು ಬಹುಮಾನ ಘೋಷಿಸಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

‘ಶರಣಾದವರಲ್ಲಿ 11 ಮಂದಿ ಹಿರಿಯ ಕಾರ್ಯಕರ್ತರಾಗಿದ್ದು, ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಆರ್ಮಿ- (ಪಿಜಿಎಲ್‌ಎ) 1ನೇ ಬೆಟಾಲಿಯನ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಇದನ್ನು ಮಾವೋವಾದಿಗಳ ಅತ್ಯಂತ ಶಕ್ತಿಶಾಲಿಯಾದ ಸೇನಾ ವಿಭಾಗವೆಂದೇ ಪರಿಗಣಿಸಲಾಗುತ್ತಿತ್ತು’ ಎಂದು ಹೇಳಿದ್ದಾರೆ.

ಶರಣಾಗದವರಲ್ಲಿ 9 ಮಂದಿ ಮಹಿಳೆಯರು ಇದ್ದಾರೆ ಎಂದು ಸುಕ್ಮಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವ್ಹಾಣ್ ತಿಳಿಸಿದ್ದಾರೆ.


ಸಾಂದರ್ಭಿಕ ಚಿತ್ರ

ಲೋಕೇಶ್ ಅಲಿಯಾಸ್ ಭೀಮಾ (35), ರಮೇಶ್ ಅಲಿಯಾಸ್ ಕಲ್ಮಾ(23), ಕವಾಸಿ ಮಾಸ (35), ಮದಕಂ ಹುಂಗಾ (23), ನುಪ್ಪೊ ಗಂಗಿ (28), ಪುನೆಂ ದೇವೆ (30), ಪರಸ್ಕಿ ಪಾಂಡೆ (22), ಮಾಧ್ವಿ ಜೋಗಾ (20), ನುಪ್ಪೊ ಲಚ್ಛೂ (25), ಪೊದಿಯಂ ಸುಖರಾಂ (24) ಹಾಗೂ ದುಧಿ ಭೀಮಾ ಅವರ ಸುಳಿವು ನೀಡಿದವರಿಗೆ ತಲಾ ₹8 ಲಕ್ಷ ನಗದು ಬಹುಮಾನ ಘೋಷಿಸಲಾಗಿತ್ತು.

‘ಸಂಘಟನೆಯ ವಿಭಾಗೀಯ ಸಮಿತಿ ಸದಸ್ಯರಾಗಿದ್ದ ಲೋಕೇಶ್ ಹಾಗೂ 8 ಮಂದಿ ಸೇರಿಕೊಂಡು ಪಿಜಿಎಲ್‌ಎಯ ಬೆಟಾಲಿಯನ್ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈಗ ಸಂಘಟನೆಯು ದುರ್ಬಲವಾಗಿದ್ದು, ನಕ್ಸಲ್ ನಿಗ್ರಹ ಕಾರ್ಯಾಚರಣೆಯ ಬಳಿಕ ಸಂಘಟನೆಯ ಬಲ ಕ್ಷೀಣಿಸಿದೆ’ ಎಂದು ಚವ್ಹಾಣ್ ಹೇಳಿದ್ದಾರೆ.

ಉಳಿದ ನಾಲ್ಕು ಕಾರ್ಯಕರ್ತರ ಮೇಲೆ ತಲಾ ₹5 ಲಕ್ಷ, ಒಬ್ಬನಿಗೆ ₹3 ಲಕ್ಷ ಹಾಗೂ ಏಳು ಕಾರ್ಯಕರ್ತರ ಸುಳಿವು ನೀಡಿದವರಿಗೆ ತಲಾ ₹1 ಲಕ್ಷ ಬಹುಮಾನ ಘೋಷಿಸಲಾಗಿತ್ತು.

ತಲಾ ₹50 ಸಾವಿರ ನೆರವು: ‘ಶರಣಾದ ನಕ್ಸಲರು ಸುಕ್ಮಾ ಜಿಲ್ಲೆಯ ಜಗರ್‌ಗುಂಡಾ, ಕೆರ್ಲಾಪಲ್ ಹಾಗೂ ಅಮ್ದಾಯಿ ಪ್ರದೇಶದಲ್ಲಿ ಸಕ್ರಿಯರಾಗಿದ್ದರು. ಅವರೆಲ್ಲರಿಗೂ ಸರ್ಕಾರದ ಪುನರ್ವಸತಿ ಯೋಜನೆ ಅಡಿಯಲ್ಲಿ ತಲಾ ₹50 ಸಾವಿರ ನಗದು ಹಾಗೂ ಇನ್ನಿತರ ನೆರವು ನೀಡಲಾಗುವುದು’ ಎಂದು ಎಸ್ಪಿ ಕಿರಣ್ ಚವ್ಹಾಣ್ ಸ್ಪಷ್ಟಪಡಿಸಿದ್ದಾರೆ.

ಮಣಿಪುರ: 8 ಬಂಡುಕೋರರ ಬಂಧನ

ಇಂಫಾಲ್ (ಪಿಟಿಐ): ಮಣಿಪುರದ ವಿವಿಧ ನಿಷೇಧಿತ ಸಂಘಟನೆಗಳ ಸದಸ್ಯರಾಗಿರುವ 8 ಮಂದಿ ಬಂಡುಕೋರರನ್ನು ಬಂಧಿಸಿರುವುದಾಗಿ ಪೊಲೀಸರು ಶನಿವಾರ ತಿಳಿಸಿದ್ದಾರೆ.

ನಿಷೇಧಿತ ಸಂಘಟನೆ ಪಿಸಿ–ರೆಡ್ ಆರ್ಮಿಯ ಸಕ್ರಿಯ ಸದಸ್ಯನಾಗಿದ್ದ ಒಬ್ಬ ವ್ಯಕ್ತಿಯನ್ನು ಪಶ್ಚಿಮ ಇಂಫಾಲದ ಮಹಾಬಿ ಎಂಬಲ್ಲಿ ಶುಕ್ರವಾರ ಬಂಧಿಸಲಾಗಿದೆ. ಸೋಷಿಯಲಿಸ್ಟ್ ರೆವಲ್ಯೂಷನ್ ಪಾರ್ಟಿಯ (ಎಸ್‌ಒಆರ್‌ಇಪಿಎ) ಇಬ್ಬರನ್ನು ಕಾಕ್ಚಿಂಗ್ ಜಿಲ್ಲೆಯ ಉಮಾತೆಲ್ ಎಂಬಲ್ಲಿ ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಕೆಸಿಪಿ (ಪಿಡಬ್ಲ್ಯೂಜಿ) ಸಂಘಟನೆಯ ಮೂವರು ಸದಸ್ಯರನ್ನು ಪಶ್ಚಿಮ ಇಂಫಾಲದಲ್ಲಿ ಮಂಗಳವಾರ ಹಾಗೂ ಕೆಸಿಪಿ (ತೈಬಾಂಗ್ಬಾ) ಸಂಘಟನೆಯ ಇಬ್ಬರನ್ನು ಇಂಫಾಲ್ ಪೂರ್ವ ಜಿಲ್ಲೆಯ ಗ್ರಾಮವೊಂದರಲ್ಲಿ ಶುಕ್ರವಾರ ಬಂಧಿಸಲಾಗಿದೆ ಎಂದೂ ಮಾಹಿತಿ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಟ್ಟಡ ಕುಸಿದು ಆರು ಸಾವು

ನವದೆಹಲಿ (ಪಿಟಿಐ): ಈಶಾನ್ಯ ದೆಹಲಿಯಲ್ಲಿ ಶನಿವಾರ ನಾಲ್ಕು ಅಂತಸ್ತಿನ ಕಟ್ಟಡ ಕುಸಿದು ಬಿದ್ದ ಪರಿಣಾಮ ಎರಡು ವರ್ಷದ ಬಾಲಕಿ ಸೇರಿದಂತೆ ಆರು ಮಂದಿ ಮೃತಪಟ್ಟಿದ್ದಾರೆ ಮತ್ತು ಎಂಟು ಮಂದಿ ಗಾಯಗೊಂಡಿದ್ದಾರೆ.

ಘಟನೆಯಲ್ಲಿ ಕಟ್ಟಡದ ಮಾಲೀಕ ಮತ್ಲೂಬ್, ಅವರ ಪತ್ನಿ ರಾಬಿಯಾ, ಇಬ್ಬರು ಗಂಡುಮಕ್ಕಳು ಹಾಗೂ ಇತರ ಇಬ್ಬರು ಮೃತಪಟ್ಟಿದ್ದಾರೆ. ಕಟ್ಟಡದಡಿ ಸಿಲುಕಿದ್ದ ಇತರ ಎಂಟು ಜನರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಅವಘಡದಿಂದ ಮುಂಭಾಗದ ಕಟ್ಟಡಕ್ಕೂ ಹಾನಿಯಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಸವಾಲುಗಳಿಗೆ ಬೇಕಿದೆ ತುರ್ತು ಪರಿಹಾರ’


ಗವಾಯಿ

ಹೈದರಾಬಾದ್ (ಪಿಟಿಐ): ಭಾರತದ ಕಾನೂನು ಅಥವಾ ನ್ಯಾಯಾಂಗ ವ್ಯವಸ್ಥೆಯು ವಿನೂತನ ಸವಾಲುಗಳನ್ನು ಎದುರಿಸುತ್ತಿದ್ದು, ತುರ್ತಾಗಿ ಪರಿಹಾರ ಕಂಡುಕೊಳ್ಳಬೇಕಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ಶನಿವಾರ ಹೇಳಿದರು. ದೇಶದಲ್ಲಿ ನ್ಯಾಯದಾನ ವಿಳಂಬವಾಗುತ್ತಿದೆ. ಒಳ್ಳೆಯ ಪ್ರತಿಭೆಗಳಿಂದ ಇಂಥ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಅವರು ಅಭಿಪ್ರಾಯಪಟ್ಟರು.

ಜುಲೈ 30 ಜೆಪಿಸಿ ಸಭೆ ನಿರೀಕ್ಷೆ

ನವದೆಹಲಿ (ಪಿಟಿಐ): ‘ಒಂದು ರಾಷ್ಟ್ರ–ಒಂದು ಚುನಾವಣೆ’ ಕುರಿತು ಜುಲೈ 30ರಂದು ಮುಂದಿನ ಜಂಟಿ ಸಂಸದೀಯ ಸಮಿತಿ ಸಭೆ ನಡೆಯುವ ನಿರೀಕ್ಷೆಯಿದೆ’ ಎಂದು ಸಮಿತಿ ಅಧ್ಯಕ್ಷ ಪಿ.ಪಿ. ಚೌಧರಿ ತಿಳಿಸಿದ್ದಾರೆ.

ಈ ಸಭೆಯಲ್ಲಿ ನ್ಯಾಯಮೂರ್ತಿ ರಾಜೇಂದ್ರ ಮಲ್ ಲೋಧಾ, ನ್ಯಾಯಮೂರ್ತಿ ಶರದ್ ಅರವಿಂದ್ ಬೋಗ್ಡೆ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಿದ್ದಾರೆ. ಶುಕ್ರವಾರ ನಡೆದ ಸಮಿತಿಯ 8ನೇ ಸಭೆಯಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಜೆ.ಎಸ್.ಖೇಹರ್, ಡಿ.ವೈ. ಚಂದ್ರಚೂಡ್ ಕೂಡ ಅಭಿಪ್ರಾಯ ನೀಡಿದ್ದಾರೆ’ ಎಂದರು.

‘ರಾಧಿಕಾ ಅಕಾಡೆಮಿ ಹೊಂದಿರಲಿಲ್ಲ’

ಗುರುಗ್ರಾಮ (ಪಿಟಿಐ): ‘ಹರಿಯಾಣದ ಟೆನಿಸ್ ಆಟಗಾರ್ತಿ ರಾಧಿಕಾ ಯಾದವ್ ಸ್ವಂತ ಅಕಾಡೆಮಿ ಹೊಂದಿರಲಿಲ್ಲ. ಕಲಿಕಾರ್ಥಿಗಳಿಗೆ ವಿವಿಧ ಪ್ರದೇಶದಲ್ಲಿರುವ ಟೆನ್ನಿಸ್ ಮೈದಾನಗಳಲ್ಲಿ ತರಬೇತಿ ನೀಡುತ್ತಿದ್ದರು. ಇದಕ್ಕೂ ಆಕೆಯ ತಂದೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು’ ಎಂದು ಗುರುಗ್ರಾಮದ ಪೊಲೀಸರು ತಿಳಿಸಿದ್ದಾರೆ.

ರಾಧಿಕಾ ಅವರನ್ನು ತಂದೆ ದೀಪಕ್ ಯಾದವ್ ಗುಂಡಿಕ್ಕಿ ಹತ್ಯೆ ಮಾಡಿದ್ದರು. ‘ಅಕಾಡೆಮಿಗಳಲ್ಲಿ ತರಬೇತಿ ಮೂಲಕ ಮಗಳು ಹಣ ಸಂಪಾದಿಸುತ್ತಿದ್ದ ವಿಚಾರಕ್ಕೆ ಹಲವು ಸಲ ಆಕ್ಷೇಪ ವ್ಯಕ್ತಪಡಿಸಿದ್ದರು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಅಪರೂಪದ ಕಲಾಕೃತಿ 12
ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಅದೂ ಬೆಂಗಳೂರಿನಲ್ಲಿ ಇಟಲಿಯ ಪ್ರಸಿದ್ಧ ಚಿತ್ರಕಲಾವಿದ ಕರವಾಜಿಯೊ ಅವರ ಕಲಾಕೃತಿ ಪ್ರದರ್ಶನ ನಡೆಯಿತು



ಆಕಾಶದೆತ್ತರದಿಂದ ಸೇತುವೆಯ ನೋಟ ಚಿತ್ರ: ಫಕ್ರುದ್ದೀನ್ ಎಚ್.

ದ್ವೀಪವೂ... ಸೇತುವೆಯೂ... ಬಿಡುಗಡೆಯೂ...

ಈ ಸೇತುವೆ 'ದ್ವೀಪ'ವಾಗಿದ್ದ ಗ್ರಾಮಗಳಿಗೆ ಸಂಪರ್ಕ ಬೆಸೆಯುವ ಕೊಂಡಿಯಾಗಿದೆ. ಇಂಥ ದಿನಕ್ಕಾಗಿ 'ದ್ವೀಪವಾಸಿ'ಗಳು ಹಲವು ದಶಕಗಳಿಂದ ಆಸೆಗಣ್ಣಿನಿಂದ ಕಾಯ್ದುಕುಳಿತಿದ್ದರು. ಈಗ ಆ ದಿನ ಬಂದೇಬಿಟ್ಟಿದೆ. ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಅಂಬಾರಗೋಡ್ಲು–ಕಳಸವಳ್ಳಿ ನಡುವೆ ಹೊಳೆಬಾಗಿಲಲ್ಲಿ ಶರಾವತಿಯ ಹಿನ್ನೀರಿನಲ್ಲಿ ನಿರ್ಮಾಣಗೊಂಡ ದೇಶದ ಎರಡನೇ ಅತೀ ದೊಡ್ಡ ತೂಗು ಸೇತುವೆ ಜುಲೈ 14 ರಂದು ಸಂಚಾರಕ್ಕೆ ಮುಕ್ತವಾಗಲಿದೆ.

• ವೆಂಕಟೇಶ ಜಿ.ಎಚ್

ನಾನು ದೇಶದ ಎರಡನೇ ಅತೀ ದೊಡ್ಡ ತೂಗು ಸೇತುವೆ ಮೇಲೆ ನಿಂತಿದ್ದೆ. ಇದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಅಂಬಾರಗೋಡ್ಲು–ಕಳಸವಳ್ಳಿ ನಡುವೆ ಹೊಳೆಬಾಗಿಲಲ್ಲಿ ಶರಾವತಿಯ ಹಿನ್ನೀರಿನುದ್ದಕ್ಕೂ ಎದ್ದು ನಿಂತಿದೆ. ಸಂಚಾರಕ್ಕೆ ಮುಕ್ತವಾಗುತ್ತಿರುವ ಸೇತುವೆಯನ್ನು ಕಣ್ತುಂಬಿಕೊಳ್ಳಲು, ಅದರ ಮೇಲೆ ಮೊದಲ ಹೆಜ್ಜೆ ಇಟ್ಟು ನೆನಪಿನ ಕೋಶದಲ್ಲಿ ಜೋಪಾನ ಮಾಡಿಕೊಳ್ಳಲು ಹಲವರು ಬರುತ್ತಿದ್ದಾರೆ. ಸೇತುವೆ ಮೇಲೆ ನಿಂತು ಫೋಟೊ, ಸೆಲ್ಫಿ ಕ್ಲಿಕ್ಕಿಸಿಕೊಂಡು, ವಿಡಿಯೊ, ರೀಲ್ಸ್ ಮಾಡಿ ಸಂಭ್ರಮಿಸುತ್ತಿದ್ದಾರೆ. ಈ ಭಾಗದಲ್ಲಿ ಈಗ ಎಲ್ಲೆಲ್ಲಿಯೂ ಈ ಸೇತುವೆಯದೇ 'ಮಾತು–ಕತೆ'.

ಈ ಸೇತುವೆ ನಿರ್ಮಾಣಕ್ಕೂ ಹಿಂದಿನ ಕಥೆ ಹೀಗಿದೆ.

ನಲವತ್ತರ ದಶಕದಲ್ಲಿ ಜೋಗದ ಬಳಿ ಜಲ ವಿದ್ಯುತ್ ಉತ್ಪಾದನೆಗೆ ನೀರು ಸಂಗ್ರಹಕ್ಕೆ ಸಾಗರ ತಾಲ್ಲೂಕಿನ ಮಡೇನೂರು ಬಳಿ ಶರಾವತಿ ನದಿಗೆ 'ಹಿರೇಭಾಸ್ಕರ' ಹೆಸರಲ್ಲಿ ಅಣೆಕಟ್ಟೆ ನಿರ್ಮಿಸಲಾಯಿತು. ಅಲ್ಲಿಯವರೆಗೂ ಮಲೆನಾಡಿನ ಸಾಮಾನ್ಯ ಹಳ್ಳಿ, ಪೇಟೆಗಳಂತಿದ್ದ ಕರೂರು–ಬಾರಂಗಿ ಹೋಬಳಿಗಳ ಭೂ ಪ್ರದೇಶ ಶರಾವತಿಯ ಹಿನ್ನೀರು ಹಾದಿಯಲ್ಲಿ 'ದ್ವೀಪ'ವಾಗಿ ಬದಲಾಗಿಬಿಟ್ಟವು.

ಮುಂದೆ ಜೋಗದ ಪರಿಸರದಲ್ಲಿ ವಿದ್ಯುತ್ ಉತ್ಪಾದನೆಗೆ ಅವಕಾಶ ಹೆಚ್ಚುತ್ತಿದ್ದಂತೆಯೇ ಮೊದಲಿಗೆ ಮೈಸೂರು ಸಂಸ್ಥಾನ ನಿರ್ಮಿಸಿದ್ದ 'ಹಿರೇಭಾಸ್ಕರ' ಎಂಬ ಪುಟ್ಟ ಅಣೆಕಟ್ಟೆಯನ್ನು ಮುಳುಗಿಸಿ ಲಿಂಗನಮಕ್ಕಿ ಜಲಾಶಯ (1964) ಎದ್ದುನಿಂತಿತು. ಇದರಿಂದ ಶರಾವತಿಯ ಹಿನ್ನೀರ ಒಡಲಲ್ಲಿ ನೀರು ಸಂಗ್ರಹದ ಅಗಾಧತೆ ಹೆಚ್ಚುತ್ತಿದ್ದಂತೆಯೇ ಎರಡೂ ಹೋಬಳಿಗಳ ವ್ಯಾಪ್ತಿಯ 60ಕ್ಕೂ ಹೆಚ್ಚು ಹಳ್ಳಿಗಳ ಸುಮಾರು 20 ಸಾವಿರ ಜನರು ಸಂಪರ್ಕದಿಂದ ವಂಚಿತರಾದರು.

ಈ ಹೊತ್ತಿನಲ್ಲಿ ಮರದ ಹುಟ್ಟು, ಬುಟ್ಟಿ, ನಾಡದೋಣಿಗಳೇ 'ದ್ವೀಪ'ದ ಜನರು ಮತ್ತು ಸಾಗರ ಪಟ್ಟಣದ ನಡುವೆ ಸಂಪರ್ಕ ಕೊಂಡಿ ಆಗಿದ್ದವು. ಎರಡು ದೋಣಿಗಳನ್ನು ಸೇರಿಸಿ ರೂಪಿಸುತ್ತಿದ್ದ 'ಜಂಗಲ್'ನಲ್ಲಿ ಎತ್ತಿನಬಂಡಿ, ಅಡಿಕೆ, ಕಾಳುಮೆಣಸು ಸಾಗಿಸಬೇಕಿತ್ತು. ಮಳೆಗಾಲ, ಗಾಳಿ ತೀವ್ರವಾಗಿದ್ದಾಗ ತಿಂಗಳುಗಟ್ಟಲೇ ದೋಣಿಗಳ ಓಡಾಟ ಸಾಧ್ಯವಾಗುತ್ತಿರಲಿಲ್ಲ. ಇದು ಸ್ಥಳೀಯರ ಬದುಕನ್ನು ಅಸಹನೀಯವಾಗಿಸುತ್ತಿತ್ತು. ಅದೊಮ್ಮೆ ಮದುವೆ ದಿಬ್ಬಣ ಹೊತ್ತು ಸಾಗುತ್ತಿದ್ದ ದೋಣಿ ಕರೂರು ಬಳಿ ಮುಗುಚಿ ವಧು–ವರರ ಸಮೇತ 22 ಜನರು ನೀರು ಪಾಲಾಗಿದ್ದರು.

ದೇಶದ ಎರಡನೇ ದೊಡ್ಡ ತೂಗುಸೇತುವೆ..

'ಅಂಬಾರಗೋಡ್ಲು–ಕಳಸವಳ್ಳಿ ನಡುವೆ 2.44 ಕಿಲೋಮೀಟರ್ ಉದ್ದದ ತೂಗು ಸೇತುವೆ ನಿರ್ಮಾಣ ಆಗಿದ್ದು, ₹573 ಕೋಟಿ ವೆಚ್ಚವಾಗಿದೆ. ಅದರಲ್ಲಿ 740 ಮೀಟರ್ ದೂರ ಕೇಬಲ್ ನೆರವಿನಿಂದ ಇರುವ ತೂಗು ಸೇತುವೆ ಆಗಿದ್ದು, ನಾಲ್ಕು ಪಿಲ್ಲರ್‌ಗಳ ಮೇಲೆ ನಿಂತಿದೆ. 2019ರ ಡಿಸೆಂಬರ್‌ನಲ್ಲಿ ಕಾಮಗಾರಿ ಆರಂಭವಾಯಿತು. ಕೋವಿಡ್ ಮತ್ತಿತರ ಕಾರಣಕ್ಕೆ ಮೂರು ವರ್ಷಗಳಲ್ಲಿ ಮುಗಿಯಬೇಕಿದ್ದ ಕಾಮಗಾರಿ ಐದೂವರೆ ವರ್ಷ ತೆಗೆದುಕೊಂಡಿತು' ಎನ್ನುವ ಮಾಹಿತಿಯನ್ನು ಸೇತುವೆ ನಿರ್ಮಾಣದ ಉಸ್ತುವಾರಿ ಹೊತ್ತಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾರ್ಯನಿರ್ವಾಹಕ ಎಂಜಿನಿಯರ್ ಪೀರ್‌ಪಾಷಾ ನೀಡಿದರು.

'ಇಲ್ಲಿ ಶರಾವತಿ ಹಿನ್ನೀರು ಪೂರ್ಣ ಭರ್ತಿ ಆದಾಗ 150 ಅಡಿಯಷ್ಟು ಆಳ ನೀರು ಸಂಗ್ರಹವಾಗಿರುತ್ತದೆ. ಹೀಗಾಗಿ ಸೇತುವೆಯನ್ನು ಅಂತರರಾಷ್ಟ್ರೀಯ ಗುಣಮಟ್ಟದ ಉತ್ಕೃಷ್ಟ ತಾಂತ್ರಿಕತೆ ಬಳಸಿ ವಿನ್ಯಾಸಗೊಳಿಸಲಾಗಿದೆ. ಪ್ರವಾಹ, ಗಾಳಿಯ ಒತ್ತಡವನ್ನು ನಿಭಾಯಿಸುವ ಜೊತೆಗೆ 100 ಟನ್ ತಾಳಿಕೊಳ್ಳುವ ಸಾಮರ್ಥ್ಯ ಸೇತುವೆ ಹೊಂದಿದೆ. ಗುಜರಾತ್‌ನ ಓಖಾ ಬಳಿ ನರ್ಮದಾ ನದಿಗೆ ನಿರ್ಮಿಸಿರುವ ತೂಗುಸೇತುವೆ ಬಳಿಕ ದೇಶದಲ್ಲಿ ನಿರ್ಮಾಣಗೊಂಡ ಎರಡನೇ ಅತಿ ದೊಡ್ಡ ತೂಗು ಸೇತುವೆ ಇದು' ಎನ್ನುತ್ತಾರೆ.



ಸಾಗರ ತಾಲ್ಲೂಕಿನ ಹೊಳೆಬಾಗಿಲು–ಕಳಸವಳ್ಳಿ ನಡುವೆ ಶರಾವತಿ ಹಿನ್ನೀರಿನಲ್ಲಿ ಲಾಂಚ್ ಸಂಚಾರ ಚಿತ್ರ: ಸುಕುಮಾರ್ ಎಂ. ತುಮರಿ

ಲಾಂಚ್ ಓಡಾಟಕ್ಕೆ 56 ವರ್ಷ!

ಬರೋಬ್ಬರಿ 56 ವರ್ಷಗಳು ಶರಾವತಿ ಹಿನ್ನೀರು ಭಾಗದ ಸಂಪರ್ಕ ಸೇತುವಾಗಿದ್ದ ಲಾಂಚ್‌ಗಳು ಇಲ್ಲಿನ ಜನರ ಭಾವಕೋಶದಲ್ಲಿ ಶಾಶ್ವತವಾಗಿ ಉಳಿಯಲಿವೆ. ಸೇತುವೆ ಸಂಚಾರಕ್ಕೆ ಮುಕ್ತವಾಗುತ್ತಿದ್ದಂತೆಯೇ ಲಾಂಚ್‌ಗಳ ಸೇವೆಯ ಅಗತ್ಯ ಇಲ್ಲವಾಗಲಿದೆ. ಆದರೆ, ಲಾಂಚ್‌ಗಳ ಓಡಾಟ ನಿಲ್ಲಿಸದೇ ಅವುಗಳನ್ನು ಹಿನ್ನೀರಿನಲ್ಲಿ ಪ್ರವಾಸೋದ್ಯಮಕ್ಕೆ ಪೂರಕವಾಗಿ ಬಳಸಿಕೊಳ್ಳಲು ಜಿಲ್ಲಾಡಳಿತ ಯೋಜನೆ ಸಿದ್ಧಪಡಿಸಿದೆ.

ಲಾಂಚ್ ಸೇವೆ ಬಂತು


ದುರಂತದ ನಂತರ ಸಮಸ್ಯೆಯ ಗಂಭೀರತೆ ಅರಿತ ಸರ್ಕಾರ 'ದ್ವೀಪ'ದ ಜನರ ಓಡಾಟಕ್ಕೆ 1969ರಲ್ಲಿ ಲಾಂಚ್ ಸೇವೆಯನ್ನು ಆರಂಭಿಸಿತು. ಆಗ ಅಕ್ಕಿ–ಬೇಳೆ, ರೋಗ–ರುಜಿನ, ಹೆರಿಗೆ–ಬಾಣಂತನ, ಶಾಲೆ–ಕಾಲೇಜು, ಕೃಷಿ ಕಾರ್ಯ ಎಲ್ಲದಕ್ಕೂ ಲಾಂಚ್‌ನ ಹಾದಿ ಕಾಯಬೇಕಿತ್ತು. ಲಾಂಚ್ ಬಂದಾಗಲಷ್ಟೇ ಅಲ್ಲಿನ ಜನರ ಬದುಕು ಚಲನಶೀಲವಾಗುತ್ತಿತ್ತು.

ಎರಡು ಲಾಂಚ್‌ಗಳು ಇದ್ದಾಗಲೂ ಸಂಜೆ ಆರು ಗಂಟೆಯ ನಂತರ ತಾಲ್ಲೂಕು ಕೇಂದ್ರ ಸಾಗರಕ್ಕೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಅವು ಸಂಚಾರ ನಿಲ್ಲಿಸುತ್ತಿದ್ದಂತೆಯೇ 'ದ್ವೀಪ'ದ ಜನರ ಬದುಕು ಸ್ತಬ್ಧಗೊಳ್ಳುತ್ತಿತ್ತು. ಹೆರಿಗೆ ನೋವು ಬಂದರೆ, ಯಾರಾದರೂ ಅನಾರೋಗ್ಯಕ್ಕೆ ತುತ್ತಾದರೆ ಬೆಳಕು ಹರಿಯುವವರೆಗೂ ಕಾದು ಕುಳಿತುಕೊಳ್ಳಲೇಬೇಕಿತ್ತು. ತೀವ್ರ ಕಾಯಿಲೆಯವರಾದರೆ ಸತ್ತು ಹೋದರು ಎಂದೇ ಲೆಕ್ಕ. ಅಡಿಕೆಗೆ ಸಾಗರವೇ ಮಾರುಕಟ್ಟೆ. ಊರ ಮಕ್ಕಳ ಶಿಕ್ಷಣಕ್ಕೂ ಅಲ್ಲಿಗೇ ಹೋಗಬೇಕಿತ್ತು. 40 ಕಿಲೋಮೀಟರ್ ದೂರದ ಆ ಊರಿಗೆ ಕಾರ್ಗಲ್–ಕೋಗಾರ್ ಮೂಲಕ 110 ಕಿಲೋಮೀಟರ್ ಸುತ್ತಿ ಬಳಸಿ ಹೋಗಬೇಕು. ನಾವು ಇಲ್ಲಿಯವರೆಗೂ 'ದ್ವೀಪ'ದವರು ಆಗಿದ್ದೆವು. ಸೇತುವೆ ಆಗಿ ನಮ್ಮ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದೆ. ಇನ್ನು ನಾಗರಿಕರು ಅನ್ನಿಸಿಕೊಳ್ಳಲಿದ್ದೇವೆ ಎಂದು ಜೆಟ್ಟಿನಬೈಲು ಪಿ.ಟಿ. ಸುಬ್ಬರಾವ್ ನಗೆ ಚೆಲ್ಲುತ್ತಾರೆ.

'ದ್ವೀಪ' ವ್ಯಾಪ್ತಿಯ ಸುಳ್ಳೊಳ್ಳಿಯಿಂದ ಹಾರಿಗೆಯ ಆಸ್ಪತ್ರೆಗೆ ತುಂಬು ಗರ್ಭಿಣಿಯನ್ನು ಕರೆದೊಯ್ಯಲು ಉದ್ದಾನೆಯ ಲಾಂಚ್ ಬಳಿಗೆ ಕರೆದೊಯ್ಯುವಾಗ ಜೋರು ಮಳೆ. ದಾರಿ ಮಧ್ಯೆಯೆ ಆಕೆಗೆ ಹೆರಿಗೆ ನೋವು ಹೆಚ್ಚಾಯಿತು. ಮರದ ಕೆಳಗೆ ಜೀಪು ನಿಲ್ಲಿಸಿ ಬೆಡ್‌ಶೀಟ್‌ನಿಂದ ಗಾಜು ಮುಚ್ಚಿದೆ. ದಾರಿ ಮಧ್ಯೆಯೇ ಹೆರಿಗೆ ಆಯ್ತು ಎಂದು ಹೊಳೆಬಾಗಿಲಲ್ಲಿ 15 ವರ್ಷಗಳಿಂದ ಜೀಪು ಓಡಿಸುತ್ತಿರುವ ಬಿಳಿಗಾರಿನ ಸುರೇಶ್ ಜೈನ್ ನೆನಪಿಸಿಕೊಂಡರು.

ಇಪ್ಪತ್ತು ವರ್ಷಗಳಿಂದ ಈಚೆಗೆ ಹಿನ್ನೀರಿನಾಚೆಯ ಸಿಗಂದೂರು ಕ್ಷೇತ್ರ ಪ್ರವರ್ಧಮಾನಕ್ಕೆ ಬಂದು ರಾಜ್ಯದ ಪ್ರಮುಖ ಯಾತ್ರಾ ಸ್ಥಳವಾಯಿತು. ನಾಡಿನೆಲ್ಲೆಡೆಯಿಂದ ನಿತ್ಯ ಬರುತ್ತಿದ್ದ ಸಾವಿರಾರು ಜನರು ಓಡಾಟಕ್ಕೆ ಅದೇ ಲಾಂಚ್ ಸೇವೆಯನ್ನೇ ಅವಲಂಬಿಸಿದ್ದರು. ಜೊತೆಗೆ 'ದ್ವೀಪ' ಭಾಗದಲ್ಲೂ ಜನಸಂಖ್ಯೆ ಹೆಚ್ಚಳ, ಉದ್ಯೋಗ, ವ್ಯವಹಾರ ನಿಮಿತ್ತ ಹೊರ ಪ್ರಪಂಚದ ಅವಲಂಬನೆಯೂ ಹೆಚ್ಚಿತು. ಅಲ್ಲಿಯವರೆಗೂ ಕೊಂಚ ಸುಲಭವಾಗಿದ್ದ ಲಾಂಚ್ ಓಡಾಟ ಸ್ಥಳೀಯರು–ಹೊರಗಿನವರ ನಡುವೆ ಪೈಪೋಟಿಗೆ, ಸಂಘರ್ಷಕ್ಕೆ ಹಾದಿ ಮಾಡಿಕೊಟ್ಟಿತು.

12ನೇ ಪುಟಕ್ಕೆ...



ಲಾಂಚ್‌ನಲ್ಲಿ ನಿಂತು ಸೇತುವೆ ನಿರ್ಮಾಣ ನೋಡುತ್ತಿರುವ ಅಪ್ಪ ಚಿತ್ರ: ಸುಕೃತ ಎಸ್.

'ಸಾಗರ' ಸೇರಿದ ನನ್ನೂರು ಈಗ ದ್ವೀಪವಲ್ಲ!

• ಸುಕೃತ ಎಸ್.

ನೆನಪಿನ ಅಲೆಗಳು

ಭಾರತದ ಖ್ಯಾತ ನಿರ್ದೇಶಕ ಸತ್ಯಜಿತ್ ರೇ ಅವರ 'ಪಥೇರ್ ಪಾಂಚಾಲಿ' ಸಿನಿಮಾ ಇಲ್ಲಿ ನನಗೆ ನೆನಪಿಗೆ ಬರುತ್ತಿದೆ. ಹೊಗೆಯುಗುಳುತ್ತಾ ಆ ಊರಿಗೆ ರೈಲು ಬರುವ ದೃಶ್ಯವನ್ನು ಜಗತ್ತಿನ ಸಿನಿಮಾ ಲೋಕದಲ್ಲಿ ಕ್ಲಾಸಿಕ್ ದೃಶ್ಯಗಳ ಸಾಲಿಗೆ ಸೇರಿಸಲಾಗಿದೆ. ದೂರದಲ್ಲಿ ಕೇಳಿಸುವ ರೈಲಿನ ಶಬ್ದ, ಆ ಶಬ್ದವನ್ನು ಆಲಿಸುವ ಅಕ್ಕ ಮತ್ತು ತಮ್ಮ, ಶಬ್ದ ಹತ್ತಿರವಾಗುವುದು, ಹೊಗೆ ಕಾಣುವುದು, ಇಬ್ಬರೂ ಶಬ್ದ ಅರಸಿ ಓಡುವುದು, ಕೊನೆಗೆ ರೈಲು ಹಾದು ಹೋಗುವುದು... 70 ವರ್ಷಗಳ ಹಿಂದೆ ರೇ ಅವರು ಈ ದೃಶ್ಯಗಳಲ್ಲಿ ಕಟ್ಟಿಕೊಟ್ಟ ಆಧುನಿಕತೆಯು 2025ರಲ್ಲಿ ನನ್ನೂರನ್ನು ಸೇತುವೆಯ ಮೂಲಕ ಪ್ರವೇಶಿಸುತ್ತಿದೆ!

ನನ್ನಪ್ಪ, ದೊಡ್ಡಪ್ಪ ಅವರನ್ನು ನೋಡಿದಾಗ ನನಗೆ ಸತ್ಯಜಿತ್ ರೇ ಅವರ ಸಿನಿಮಾದ ಅಕ್ಕ-ತಮ್ಮನ ಜೋಡಿ ನೆನಪಾಗುತ್ತದೆ. ತಮ್ಮ ಜೀವಮಾನದಲ್ಲಿ ಇಂಥದ್ದೊಂದು ಸೇತುವೆ ನಿರ್ಮಾಣವಾಗುತ್ತದೆ, ತಾವು ಆ ಸೇತುವೆಯ ಮೇಲೆ ಹುಟ್ಟಿದ ಊರಿಗೆ ತಮ್ಮ ವಾಹನಗಳಲ್ಲಿ ಹೋಗುತ್ತೇವೆ ಎಂದು ನನ್ನಪ್ಪನಾಗಲಿ, ದೊಡ್ಡಪ್ಪನಾಗಲಿ ಅಂದುಕೊಂಡೇ ಇರಲಿಲ್ಲ. ತಮ್ಮ ಜೀವಮಾನದಲ್ಲಿ ಇಂಥ ದಿನ ಬರುತ್ತದೆ ಎಂದು ನನ್ನೂರಿನ ಹಿರಿಯರು ಯಾರೂ ಅಂದುಕೊಂಡಿರಲಿಲ್ಲ. ಮುಳುಗಡೆ ಪೂರ್ವದಲ್ಲಿ ಹಿರೇಭಾಸ್ಕರ ಅಣೆಕಟ್ಟಿನ ಮೇಲಿನ ರಸ್ತೆಯಲ್ಲಿ ಎತ್ತಿನಗಾಡಿಯಲ್ಲಿ ಓಡಾಡಿದ ಜೀವಗಳಿವು. ಓದಲು ಶಾಲೆಯೂ ಇಲ್ಲದೆ, ಸಾಗರದಲ್ಲಿ ವಾರಾನ್ನ ಮಾಡಿಕೊಂಡು, ಸಂಬಂಧಿಕರ ಮನೆಗಳಲ್ಲಿ ಉಳಿದುಕೊಂಡು ಓದಿ, ಬದುಕು ಕಟ್ಟಿಕೊಂಡವರು.

ರಾಜ್ಯಕ್ಕೆ ಬೆಳಕು ನೀಡಲು ತಮ್ಮವರ ಮನೆಗಳನ್ನೂ, ಬದುಕನ್ನೂ ಮುಳುಗಿಸಿಕೊಂಡ ನಂತರ ಅಲ್ಲೇ ಇತರೆ ಭಾಗದಲ್ಲಿ ನೆಲೆಸಿರುವ, ಸೌಲಭ್ಯ ವಂಚಿತ ನನ್ನೂರಿನ ಜನರು, ಇಷ್ಟು ವರ್ಷಗಳಿಂದ ಈ 'ದ್ವೀಪ'ದಲ್ಲಿ ಬದುಕುತ್ತಿದ್ದರು. ವಿದ್ಯುತ್ ಉತ್ಪಾದನೆಗಾಗಿ ಮನೆಮಾರುಗಳನ್ನೂ, ರಸ್ತೆ ಸಂಪರ್ಕವನ್ನೂ ಮುಳುಗಿಸಿದ ಮೇಲೆ ಸೇತುವೆ ನೀಡುವುದನ್ನು ಸರ್ಕಾರ ಮರೆತೇ ಬಿಟ್ಟಿತು. ಈಗ ಅದು ಸಾಕಾರಗೊಂಡಿದೆ. ಹಾಗಾದರೆ, ನನ್ನೂರಿಗೆ ಈ ಸೇತುವೆ ಏನು ಎಂದು ಪ್ರಶ್ನಿಸಿಕೊಂಡರೆ, ಅದು ನಮ್ಮ ಹಕ್ಕು ಎಂದೇ ಹೇಳಬೇಕು. ಅದು ನಮಗೆ ಬಿಡುಗಡೆಯ ಅವಕಾಶಗಳ ಮಹಾದ್ವಾರ ಎಂದೇ ಹೇಳಬೇಕು. ನಮ್ಮ ಹೋರಾಟದ ಫಲ ಎಂದೇ ಹೇಳಬೇಕು.

ಶರಾವತಿ ದಾಟುವುದಿಲ್ಲ!

ನನ್ನಜ್ಜಿ ಸರಸ್ವತಿ, 99 ವರ್ಷ ಬದುಕಿದ್ದಳು. ಇನ್ನೆರಡು ತಿಂಗಳಾಗಿದ್ದರೆ ಆಕೆಗೆ 100 ವರ್ಷ ತುಂಬುತ್ತಿತ್ತು. ನನ್ನ ದೊಡ್ಡಪ್ಪನ ಮನೆ ಈಗಲೂ ತುಮರಿಯಲ್ಲಿದೆ. ನಮ್ಮ ಮೂಲ ಊರು ನಿಟ್ಟೂರಿನ ಗೆಂಟಿಗೆಮನೆ. ಆದರೆ, ನನ್ನಜ್ಜ ಅರಬಳ್ಳಿಯಲ್ಲಿ ನೆಲೆಸಿದ್ದ. ಲಿಂಗನಮಕ್ಕಿ ಅಣೆಕಟ್ಟು ಕಾರಣ ಅರಬಳ್ಳಿಯ ನಮ್ಮ ಮನೆ ಮುಳುಗಡೆಯಾಯಿತು. ಬಳಿಕ ನನ್ನಜ್ಜ ತುಮರಿಗೆ ಬಂದು ನೆಲಸಿದ. ನನ್ನಜ್ಜಿಯೂ ನನ್ನ ಈ ದೊಡ್ಡಪ್ಪನ ಮನೆಯಲ್ಲಿಯೇ ಇದ್ದಳು.

ಆಕೆಗೆ ಸುಮಾರು 80 ವರ್ಷ ಆಗುವವರೆಗೂ ಸಾಗರದಲ್ಲಿರುವ ಮಕ್ಕಳ ಮನೆಗೆ ಬಂದು ಹೋಗುತ್ತಿದ್ದಳು. 'ನಾನು ಇನ್ನು ಶರಾವತಿ ದಾಟುವುದಿಲ್ಲ. ನನ್ನ ಸಾವು ಶರಾವತಿಯ ಈ ಬದಿಯಲ್ಲಿಯೇ ಆಗಬೇಕು' ಎಂದು ಒಂದು ದಿನ ಘೋಷಿಸಿಯೇ ಬಿಟ್ಟಳು. ಇಂದು ನಮ್ಮೊಂದಿಗಿಲ್ಲದ ನನ್ನೂರಿನ ಹಲವು ಹಿರಿಯ ಜೀವಗಳು ಇಂಥ ಶಪಥವನ್ನು ಮಾಡಿದ್ದವು.

ಪ್ರವಾಸಿಗರಿಗೆ ಲಾಂಚ್ ಪ್ರಯಾಣವು ಸೋಜಿಗ, ಉಲ್ಲಾಸ ಮತ್ತು ಉತ್ಸಾಹದಿಂದ ಕೂಡಿದ ಅನುಭವ. ನನ್ನೂರು ಸಾಗರ ತಾಲ್ಲೂಕು ವ್ಯಾಪ್ತಿಗೆ ಬರುತ್ತದೆ. ನಮ್ಮ ಎಲ್ಲ ಕೆಲಸ ಕಾರ್ಯಗಳೂ, ವ್ಯವಹಾರಗಳೂ ಸಾಗರದಲ್ಲಿಯೇ ಆಗಬೇಕು. ಲಾಂಚ್ ಸೇವೆ ನಮ್ಮ ಅಗತ್ಯವಾಗಿತ್ತು. ಆದರೆ, ಪ್ರವಾಸಿಗರಿಗೆ ಇದು ಮೋಜಾಗಿತ್ತು.

ಸೇತುವೆ ನಿರ್ಮಾಣವಾಗುತ್ತಿದ್ದ ಸಂದರ್ಭದಲ್ಲಿ ಮತ್ತು ಸೇತುವೆ ನಿರ್ಮಾಣ ಕಾರ್ಯ ಮುಗಿದ ಬಳಿಕ ಸಾಮಾಜಿಕ ಜಾಲತಾಣಗಳಲ್ಲಿ ನೂರಾರು ಪೋಸ್ಟ್‌ಗಳು, ಮೀಮ್‌ಗಳು ಹರಿದಾಡುತ್ತಿವೆ. ಸಿನಿಮಾ ನಟರೂ ಸೇರಿದಂತೆ ಜನರು ಪೋಸ್ಟ್ ಹಂಚಿಕೊಳ್ಳುತ್ತಿದ್ದಾರೆ. ಕೆಲವರು ಸೇತುವೆ ನಿರ್ಮಾಣವನ್ನು ಸಂಭ್ರಮಿಸಿದರೆ, ಕೆಲವರು ಬೇಸರವನ್ನೂ ವ್ಯಕ್ತಪಡಿಸುತ್ತಿದ್ದಾರೆ. ಲಾಂಚ್ ಪ್ರಯಾಣದ ಮಜವೇ ಬೇರೆ ಎನ್ನುತ್ತಿದ್ದಾರೆ. ಇದೆಂಥ ಮನಸ್ಥಿತಿ?

ಇದು ಬಹಳ ವರ್ಷಗಳ ಹಿಂದಿನ ಮಾತು. ತುಮರಿ ಸರ್ಕಾರಿ ಶಾಲೆಯಲ್ಲಿ ಎನ್‌ಎಸ್‌ಎಸ್ ಶಿಬಿರ ಆಯೋಜಿಸಲಾಗಿತ್ತು. ಅಪ್ಪನನ್ನು ಭಾಷಣಕ್ಕೆ ಕರೆದಿದ್ದರು. ಅಪ್ಪನೊಂದಿಗೆ ನಾನೂ ಹೋಗಿದ್ದೆ. ವೇದಿಕೆಯಲ್ಲಿದ್ದ ಮತ್ತೊಬ್ಬ ಭಾಷಣಕಾರರು ಸೇತುವೆ ಕುರಿತು ಮಾತನಾಡಿದ್ದರು. 'ಸೇತುವೆ ನಿರ್ಮಾಣವಾದರೆ ಇಷ್ಟೊಂದು ಭರಪೂರವಾಗಿರುವ ಪ್ರಕೃತಿ ಸಂಪತ್ತು ನಾಶವಾಗಿಬಿಡುತ್ತದೆ' ಎಂದಿದ್ದರು!

ಸೇತುವೆ ನಿರ್ಮಾಣವಾಗಿರುವುದು ನನ್ನೂರಿನ ಜನರಿಗಾಗಿ. ಸೇತುವೆ ನಮ್ಮ ಹಕ್ಕು. ಮೂಲಸೌಕರ್ಯಗಳಿಂದ ನಮ್ಮನ್ನು ವಂಚಿಸಿದ್ದ ಸರ್ಕಾರ ಈಗಲಾದರೂ ನನ್ನೂರಿಗೆ ಸೇತುವೆ ನಿರ್ಮಿಸಿ, ಸೌಕರ್ಯಗಳು ಒದಗುವಂತೆ ಮಾಡುತ್ತಿದೆ. ಈಗ ನನ್ನೂರು ದ್ವೀಪವಲ್ಲ, ಮತ್ತೆ 'ಸಾಗರ'ವನ್ನು ಸೇರಿಕೊಂಡಿದೆ!

❖

ಅವಮಾನ ಸಣ್ಣದಾಯ್ತು ಗೆಲುವು ದೊಡ್ಡದಾಯ್ತು!

• ಕೀರ್ತಿಕುಮಾರಿ ಎಂ.

ಆ ದಿನ ಅನಿ ಮಂಗಳೂರು ಅವರು ಬಸ್ತಿ (ಭಿಕ್ಷಾಟನೆ) ಮುಗಿಸಿ ರಾತ್ರಿ ಮನೆ ತಲುಪುವ ಧಾವಂತದಲ್ಲಿದ್ದರು. ಆದರೆ ಅವರು ಲಿಂಗತ್ವ ಅಲ್ಪಸಂಖ್ಯಾತೆ ಎನ್ನುವುದು ಗೊತ್ತಾಗುತ್ತಿದ್ದಂತೆ ಆಟೊ ಚಾಲಕರು ಆಟೊ ನಿಲ್ಲಿಸದೆ ವೇಗವನ್ನು ಹೆಚ್ಚಿಸಿಕೊಂಡು ಹೋಗುತ್ತಿದ್ದರು. ಮನೆಯಲ್ಲಿ ತಾಯಿ ಒಬ್ಬರೇ ಇದ್ದಿದ್ದರಿಂದ ಅನಿ ಅವಮಾನದಿಂದ ಕುದಿಯುತ್ತಲೇ ದಾಪುಗಾಲು ಹಾಕುತ್ತಾ ನಡೆದೇ ಮನೆ ತಲುಪಿದ್ದರು. ತಮಗಾದ ಅವಮಾನವನ್ನು ನೆನೆದು ಇಡೀ ರಾತ್ರಿ ಕಣ್ಣೀರು ಹಾಕಿದರು. ನಮ್ಮದಲ್ಲದ ತಪ್ಪಿಗೆ ಸಮಾಜ ಏಕೆ ನಮ್ಮನ್ನು ಹೀಗೆ ಕಾಣುತ್ತದೆ ಎಂದು ಸಂಕಟಪಟ್ಟರು. ಆಗ ತಾಯಿ, 'ನಿನ್ನ ಕಾಲ ಮೇಲೆ ನೀನು ನಿಂತಾಗ ಮಾತ್ರ ಇಂಥ ಅವಮಾನಗಳನ್ನು ಮೆಟ್ಟಿ ನಿಲ್ಲಬಹುದು' ಎಂದು ಸಮಾಧಾನ ಮಾಡಿದರು. ಈ ಘಟನೆ ಅನಿ ಅವರ ಆತ್ಮಾಭಿಮಾನಕ್ಕೂ ಪೆಟ್ಟು ನೀಡಿತ್ತು. ಈ ಅವಮಾನವನ್ನೇ ಸಾಧನೆಯ ಮೆಟ್ಟಿಲುಗಳನ್ನಾಗಿ ಮಾಡಿಕೊಳ್ಳುವ ದಿಟ್ಟ ನಿರ್ಧಾರಕ್ಕೆ ಬಂದರು. ತಾವೇ ಆಟೊ ಖರೀದಿಸಲು ಸಂಕಲ್ಪ ಮಾಡಿದರು!

ಫೈನಾನ್ಸ್‌ನಿಂದ ಸಾಲ ಪಡೆದು ಮೊದಲಿಗೆ ಒಂದು ಆಟೊ ಖರೀದಿಸಿದರು. ಆದರೆ ಆಟೊ ಖರೀದಿಸಿ, ಚಾಲನೆ ಕಲಿತರೂ ಅಂದುಕೊಂಡಂತೆ ಜೀವನ ಸಾಗಲಿಲ್ಲ. ಆಟೊ ಓಡಿಸುವವರು ಲಿಂಗತ್ವ ಅಲ್ಪಸಂಖ್ಯಾತೆ ಎಂದು ತಿಳಿದ ತಕ್ಷಣ ಜನರು ಕಪೋಲಕಲ್ಪಿತ ಭಯದಿಂದ ಆಟೊವನ್ನೇ ಹತ್ತುತ್ತಿರಲಿಲ್ಲ. ಬೇರೆ ದಾರಿ ಕಾಣದ ಅನಿ ಆಟೊವನ್ನು ಬಾಡಿಗೆಗೆ ನೀಡಿದರು. ದಿನದ ಬಾಡಿಗೆ ಪಡೆಯಲು ಆರಂಭಿಸಿದರು. ಅನಂತರ ದುಡಿಮೆ ಕೈಹಿಡಿಯಿತು. ಇರುವ ಆಟೊ ಆಧಾರದಲ್ಲಿ ಬ್ಯಾಂಕುಗಳಲ್ಲಿ ಮತ್ತು ಫೈನಾನ್ಸ್‌ಗಳಲ್ಲಿ ಸಾಲ ಮಾಡಿ ಹಂತ ಹಂತವಾಗಿ ನಾಲ್ಕು ಆಟೊ ಖರೀದಿಸಿದರು.

ಈ ದಿಟ್ಟ ಹೆಜ್ಜೆಯಿಂದ ಅನಿ ಅವರ ಬದುಕು ತಕ್ಕಮಟ್ಟಿಗೆ ಸುಧಾರಿಸಿದೆ. ಸ್ವಾವಲಂಬಿ ಜೀವನದ ಜೊತೆಗೆ ಬಡತನದ ಬೇಗೆಯಲ್ಲಿ ಬೆಂದ ತಂದೆ–ತಾಯಿಗೂ ಸಹಾಯ ಮಾಡುತ್ತಿದ್ದಾರೆ. ಮನೆ ಮಗ ಲಿಂಗತ್ವ ಅಲ್ಪಸಂಖ್ಯಾತೆಯಾದ ನಂತರ ಹೊಟ್ಟೆಯೊಳಗೇ ಸಂಕಟಪಡುವ ತಂದೆ–ತಾಯಿಯ ನೋವಿಗೆ 'ಮುಲಾಮು' ಹಚ್ಚುತ್ತಿದ್ದಾರೆ.

ಜಿಮ್ ಟ್ರೈನರ್ ಮತ್ತು ಸಮಾಜ ಸೇವೆ...

ಅನಿ ಅವರಿಗೆ ಜಿಮ್ ಸೇರಲು ಆಸಕ್ತಿ ಇತ್ತು. ಆದರೆ ಲಿಂಗತ್ವ ಅಲ್ಪಸಂಖ್ಯಾತೆ ಎಂಬ ಕಾರಣಕ್ಕಾಗಿ ಯಾವ ಜಿಮ್‌ಗಳಲ್ಲೂ ಅವರನ್ನು ಸೇರಿಸಿಕೊಳ್ಳುತ್ತಿರಲಿಲ್ಲ. ಕೊನೆಗೂ ಒಬ್ಬರು ಜಿಮ್ ಪ್ರವೇಶಕ್ಕೆ ಅನುಮತಿ ನೀಡಿದರು. ಅಲ್ಲಿ ಜಿಮ್ ಮಾಡುವ ಜೊತೆಗೆ ತರಬೇತಿಯನ್ನೂ ಪಡೆದ ಅನಿ, ಸದ್ಯ ಜಿಮ್‌ವೊಂದರಲ್ಲಿ ವೈಯಕ್ತಿಕ ತರಬೇತುದಾರರಾಗಿದ್ದಾರೆ. ಜೊತೆಗೆ ಲಿಂಗತ್ವ ಅಲ್ಪಸಂಖ್ಯಾತರ ಕುರಿತ ಕಥಾಹಂದರ ಹೊಂದಿರುವ 'ಶಿವಲೀಲಾ' ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ ಹಾಗೂ ಇದೇ ಸಿನಿಮಾದಲ್ಲಿ ಲೈನ್ ಪ್ರೊಡ್ಯೂಸರ್ ಆಗಿ ಕೆಲಸ ಮಾಡುತ್ತಿದ್ದಾರೆ.

ತಮ್ಮಂತೆ ಅವಮಾನ, ಕಷ್ಟ ಎದುರಿಸುತ್ತಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಏನನ್ನಾದರೂ ಮಾಡಬೇಕು ಎಂಬುದು ಅನಿ ಅವರ ಮನದಾಳದ ತುಡಿತ. ಹೀಗಾಗಿ ತಮ್ಮ ಆಟೊದಲ್ಲಿ ಗರ್ಭಿಣಿಯರಿಗೆ ಮತ್ತು ಹಿರಿಯ ಲಿಂಗತ್ವ ಅಲ್ಪಸಂಖ್ಯಾತರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿದ್ದಾರೆ.

ಜೊತೆಗೆ ಆಟೊದಿಂದ ಬರುವ ಹಣದಲ್ಲಿ ಅಲ್ಪಭಾಗವನ್ನು ಅನಾಥಾಶ್ರಮಕ್ಕೆ ಊಟ ನೀಡಲು ಮತ್ತು ಬೀದಿಬದಿ ಪ್ರಾಣಿ ಪಕ್ಷಿಗಳಿಗೆ ಆಹಾರ ನೀಡಲು ಮೀಸಲಿಡುತ್ತಿದ್ದಾರೆ.



ಅನಿ ಅವರು ಮೂಲತಃ ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಹಿರೇದಿನ್ನಿ ಕ್ಯಾಂಪ್‌ನವರು. ಕಡುಬಡತನದ ಕುಟುಂಬ. ತಂದೆ–ತಾಯಿ ಕೂಲಿ ಮಾಡಿ ನಾಲ್ವರು ಮಕ್ಕಳನ್ನು ಸಾಕುತ್ತಿದ್ದರು. ಈ ಮಧ್ಯೆ ಅನಿ ಅವರು ಎರಡನೇ ತರಗತಿಯಲ್ಲಿದ್ದಾಗಲೇ ಅವರಲ್ಲಿ ಶಾರೀರಿಕ ಬದಲಾವಣೆಗಳಾಗುತ್ತಿದ್ದವು. ಆದರೆ ಲಿಂಗತ್ವ ಅಲ್ಪಸಂಖ್ಯಾತರಿಗೆ ಗಾಯದ ಮೇಲೆ ಬರೆ ಎಳೆಯುವಂತೆ ಪ್ರತಿ ದಿನ, ಪ್ರತಿ ಕ್ಷಣ ಅವಮಾನ, ತಾತ್ಸಾರ ಮಾಡುವುದನ್ನು ಕಂಡ ಅನಿ, 'ನಾನು ಈ ರೀತಿ ಅವಮಾನಕ್ಕೆ ಒಳಗಾಗಬಾರದು ಎಂದರೆ ಶಿಕ್ಷಣವೊಂದೇ ಅಸ್ತ್ರ' ಎಂದುಕೊಂಡರು. ಹೀಗಾಗಿ ಶಾರೀರಿಕ ಬದಲಾವಣೆಗಳನ್ನು ಗಂಭೀರವಾಗಿ ಪರಿಗಣಿಸದ ಅವರು ಹಿರೇದಿನ್ನಿ ಕ್ಯಾಂಪ್‌ನಲ್ಲಿ ಪ್ರಾಥಮಿಕ ಶಿಕ್ಷಣ, ಹಿರೇದಿನ್ನಿಯಲ್ಲಿ 6-8ನೇ ತರಗತಿ, ತೋರಣದಿನ್ನಿಯಲ್ಲಿ ಪ್ರೌಢ ಶಿಕ್ಷಣ ಮತ್ತು ಲಿಂಗಸೂರಿನಲ್ಲಿ ಪದವಿ ಪಡೆದರು. ದಿನವೂ ಕನಿಷ್ಠ ಆರು ಕಿಲೋಮೀಟರ್ ನಡೆದೇ ಸಾಗಬೇಕಿತ್ತು. ಆದರೂ ಶಿಕ್ಷಣ ಪಡೆಯಲೇಬೇಕೆನ್ನುವ ಉತ್ಕಟತೆ ಅವರಲ್ಲಿತ್ತು.

ಪದವಿಯಲ್ಲಿ ಹೆಚ್ಚು ಅಂಕ ಗಳಿಸಿದ್ದರಿಂದ ಮಂಗಳೂರಿನ ಸರ್ಕಾರಿ ಬಿ.ಎಡ್ ಕಾಲೇಜಿನಲ್ಲಿ ಸೀಟು ಸಿಕ್ಕಿತ್ತು. ಶಿಕ್ಷಕ ವೃತ್ತಿ ಮಾಡುವ ಹಂಬಲವೇನೋ ಹೆಚ್ಚಿತ್ತು. ಆದರೆ ಬಿ.ಎಡ್ ಎರಡನೇ ಸೆಮಿಸ್ಟರ್ ಓದುತ್ತಿರುವಾಗ ಅನಿ ಅವರಲ್ಲಿ ತಳಮಳ ಹೆಚ್ಚಾಯಿತು. ಅವರಲ್ಲಾಗುತ್ತಿದ್ದ ಶಾರೀರಿಕ ಮತ್ತು ಹಾವಭಾವ ಬದಲಾವಣೆ ಬಗ್ಗೆ ಸಮಾಜ ಹೇಗೆ ಪ್ರತಿಕ್ರಿಯಿಸುತ್ತದೋ ಎಂಬ ಅಂಜಿಕೆಯಿಂದ ಲಿಂಗತ್ವ ಅಲ್ಪಸಂಖ್ಯಾತರಂತೆ ಬದುಕಲು ಬೆಂಗಳೂರನ್ನು ಆಯ್ಕೆ ಮಾಡಿಕೊಂಡರು. ಅಲ್ಲಿ ಸಮುದಾಯದವರ ಜೊತೆ ಸೇರಿದರು. ಆದರೆ ಸ್ವಾವಲಂಬಿ ಬದುಕಿನ ಕನಸು ಕಂಡಿದ್ದ ಅವರಿಗೆ ಬಸ್ತಿ ಅನಿವಾರ್ಯ ಎಂಬುದನ್ನು ಸ್ವೀಕರಿಸಲು ಸಾಧ್ಯವಾಗಲಿಲ್ಲ. 'ಬಸ್ತಿ, ಲೈಂಗಿಕ ವೃತ್ತಿ ಕೆಲಸ ಮಾಡಲು ಸಾಧ್ಯವಿಲ್ಲ' ಎಂದಾಗ ಚಿತ್ರಹಿಂಸೆ, ಅವಮಾನ ಎದುರಿಸಬೇಕಾಯಿತು. ರಾತ್ರೋರಾತ್ರಿ ಅಲ್ಲಿಂದ ಹೊರಟು ಮತ್ತೆ ಮಂಗಳೂರಿಗೆ ಬಂದರು. ಪದವಿ ಅಂಕಪಟ್ಟಿ ಹಿಡಿದು ಹೋಟೆಲ್‌ಗಳು, ಕಚೇರಿಗಳಿಗೆ ಉದ್ಯೋಗಕ್ಕಾಗಿ ಅಲೆದಾಡಿದರು. ಎಲ್ಲ ಕಡೆ ನಿರಾಕರಣೆಯೊಂದೇ ಉತ್ತರವಾಗಿತ್ತು. ಉದ್ಯೋಗ ನಿರಾಕರಣೆ, ಮನೆ ಬಾಡಿಗೆ ಕೇಳಿದರೆ ಬಾಡಿಗೆದಾರರಿಂದ ಒಲ್ಲೆ ಎಂಬ ಮಾತು, ಸಾರ್ವಜನಿಕ ಸಾರಿಗೆಯಲ್ಲೂ ತಾತ್ಸಾರದ ನೋಟ– ಪ್ರತಿ ನಿತ್ಯ ಇಂಥ ತಿರಸ್ಕಾರದ ಅನುಭವಗಳಿಂದ ಅವರು ನೊಂದು ಬೆಂದಿದ್ದರು. ಬೇರೆ ದಾರಿ ಕಾಣದೆ ಬಸ್ತಿ ಮಾಡುತ್ತಾ ಜೀವನ ಸಾಗಿಸುತ್ತಿದ್ದರು. ಆದರೆ ಆ ರಾತ್ರಿ ಆದ ಅವಮಾನ ಅವರ ಜೀವನದ ದಿಕ್ಕನ್ನೇ ಬದಲಿಸಿಬಿಟ್ಟಿತು.



ತಮ್ಮ ಆಟೊದೊಂದಿಗೆ ಅನಿ ಮಂಗಳೂರು ಚಿತ್ರ: ಫಕ್ರುದ್ದೀನ್ ಎಚ್.

ಹೀಗಿ ಅವಮಾನದಿಂದ ನೊಂದು ಬೆಂದವರು ಜೀವನದಲ್ಲಿ ಉತ್ಸಾಹವನ್ನೇ ಕಳೆದುಕೊಳ್ಳುತ್ತಾರೆ. ಆದರೆ, ಅನಿ ಅದನ್ನೇ ಸವಾಲನ್ನಾಗಿ ಸ್ವೀಕರಿಸಿ, ಜಯಿಸಿ ತೋರಿಸಿದ್ದಾರೆ. ತಮ್ಮಂಥವರಿಗೆ ಹೊಸ ದಾರಿಯನ್ನೂ ತೋರಿಸಿದ್ದಾರೆ.

❖

ಶಿಶುಪಾಲರ ಅಂದದ ಮನೆ ತೋಟ

ಮನೆಯ ಹೊರಗೆ, ತಾರಸಿಯ ಮೇಲೆ ಗಿಡಗಳನ್ನು ಬೆಳೆಸುವುದು ಸಹಜ. ಆದರೆ ತಾವು ವಾಸಿಸುವ ಮನೆಯ ಡೈನಿಂಗ್ ಹಾಲ್‌ನಿಂದ ಹಿಡಿದು ಪ್ರತಿ ಮೂಲೆಯನ್ನೂ ಸಸ್ಯಕಾಶಿಯನ್ನಾಗಿಸಿಕೊಂಡಿದ್ದಾರೆ ದಾವಣಗೆರೆಯ ಪ್ರೊ.ಎಸ್.ಶಿಶುಪಾಲ. ಅವರ ಮನೆ ಹೊರಾಂಗಣ ಹಾಗೂ ಒಳಾಂಗಣದಲ್ಲಿ ವಿವಿಧ ಪ್ರಬೇಧಗಳ 850ಕ್ಕೂ ಹೆಚ್ಚು ಗಿಡಗಳಿವೆ.

• ರಾಮಮೂರ್ತಿ ಪಿ.

ಆ ಬೀದಿಯಲ್ಲಿ ಓಡಾಡುವ ಜನರಿಗೆ ಅದೊಂದು ಮನೆ ಎಂಬ ಭಾವ ಸಹಜವಾಗಿ ಮೂಡುವುದಿಲ್ಲ. ಮನೆಯ ಗೇಟು ದಾಟುತ್ತಲೇ ವಿವಿಧ ಬಳ್ಳಿಗಳು ತಲೆ ಸವರಿ ತೋರಣದ ರೀತಿ ಸ್ವಾಗತಿಸುತ್ತವೆ. ಹತ್ತಾರು ಬಗೆಯ ಹೂವುಗಳು ಸುವಾಸನೆ ಬೀರುತ್ತವೆ. ಮನೆಯ ಬಾಗಿಲು ಪ್ರವೇಶಿಸುವ ಮುನ್ನವೇ ವಿವಿಧ ಜಾತಿಯ ನೂರಾರು ಗಿಡ–ಮರ, ಬಳ್ಳಿಗಳು ವಿಶೇಷ ಅನುಭವ ನೀಡುತ್ತವೆ.

ದಾವಣಗೆರೆ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹಾಗೂ ಹವ್ಯಾಸಿ ಪಕ್ಷಿ ವೀಕ್ಷಕ ಪ್ರೊ.ಎಸ್.ಶಿಶುಪಾಲ ಅವರ 'ಶಾಂತಿರತ್ನ' ಮನೆಯ ಚಿತ್ರಣವಿದು. ದಾವಣಗೆರೆಯ ಎಸ್.ಎಸ್.ಲೇಔಟ್‌ನ 'ಎ' ಬ್ಲಾಕ್‌ನಲ್ಲಿರುವ ನೆಲೆಸಿರುವ ಶಿಶುಪಾಲ ಅವರು ತಮ್ಮ ಮನೆಯಲ್ಲಿ ತೋಟವನ್ನು ಸೃಷ್ಟಿಸಿದ್ದಾರೆ.

ಶಿಶುಪಾಲ ಅವರ ಮನೆ ಹೊರಾಂಗಣ ಹಾಗೂ ಒಳಾಂಗಣದಲ್ಲಿ ವಿವಿಧ ಪ್ರಬೇಧಗಳ 850ಕ್ಕೂ ಹೆಚ್ಚು ಗಿಡ–ಮರಗಳಿವೆ. ಮನೆಯ ಹೊರಾಂಗಣದಲ್ಲಿ ದೊಡ್ಡದೊಡ್ಡ ಗಿಡ, ಮರಗಳಿವೆ. ಒಳಗಡೆ ಸಣ್ಣಸಣ್ಣ ಸಸಿಗಳನ್ನು ಪೋಷಿಸಲಾಗುತ್ತಿದೆ. ಹಾಲ್, ಡೈನಿಂಗ್ ಟೇಬಲ್, ದೇವರ ಕೋಣೆ, ಬೆಡ್‌ರೂಮ್, ಬಾತ್‌ರೂಮ್, ಅಡುಗೆ ಮನೆ.. ಹೀಗೆ ಮನೆಯ ಮೂಲೆ ಮೂಲೆಯಲ್ಲೂ ಸಸಿಗಳು ನಳನಳಿಸುತ್ತಿವೆ.

ಮೆಟ್ಟಿಲುಗಳ ಮೇಲೆ ಕುಂಡಗಳಲ್ಲಿ ಕುಳಿತು ನಗೆ ಬೀರುವ ಸಸಿಗಳನ್ನು ಕಣ್ತುಂಬಿಕೊಳ್ಳುತ್ತಾ, ಬಾಲ್ಕನಿಗೆ ತೆರಳಿದರೆ ಅಲ್ಲಿನ ಸಸ್ಯ ಸಂಪತ್ತು ಯಾವ ನರ್ಸರಿಗೂ ಕಡಿಮೆ ಇಲ್ಲದಂತೆ ಬೆಳೆದು ನಿಂತಿರುವುದು ಆಶ್ಚರ್ಯ ತರಿಸುತ್ತದೆ. ಈ ನಿವಾಸದಲ್ಲಿ ಹೇಗೆಂದರೆ ಹಾಗೆ ಓಡಾಡಿದರೆ ಅಲ್ಲಲ್ಲಿ ತೂಗು ಬಿಟ್ಟಿರುವ ಸಸಿಗಳ ಕುಂಡಗಳು ತಲೆಗೆ ಬಡಿಯುವುದು ಖಚಿತ. ಆದರೆ, ಮನೆಯ ಸದಸ್ಯರಿಗೆ ಮಾತ್ರ ಆ ಬಗ್ಗೆ ಚಿಂತೆಯಿಲ್ಲ. ಅವರಿಗೆ ಸಸಿ ತೋರಣಗಳ 'ಮ್ಯಾಪ್' ತಲೆಯಲ್ಲಿ ಅಚ್ಚು ಹೊತ್ತಿದೆ.

ದಾಸವಾಳ, ಲಿಲ್ಲಿ, ಮಲ್ಲಿಗೆ, ಗುಲಾಬಿ, ಸಂಪಿಗೆ, ಬ್ಲೀಡಿಂಗ್ ಹಾರ್ಟ್, ಪಾರಿಜಾತ ಸೇರಿದಂತೆ ಬಗೆ ಬಗೆಯ 110ಕ್ಕೂ ಹೆಚ್ಚಿನ ಹೂವಿನ ಸಸ್ಯಗಳು ಕುಂಡಗಳಲ್ಲಿ ಅರಳಿ ನಿಂತಿವೆ. ಕಮಲ, ನೈದಿಲೆ, ಗ್ರೀನ್‌ರೋಸ್ ಸೇರಿ ಇನ್ನಿತರೆ ಜಲಸಸ್ಯಗಳೂ ನೀರಿನಲ್ಲಿ ನಗೆ ಬೀರುತ್ತಿವೆ. ಮಣ್ಣು, ಸಿಮೆಂಟ್ ಹಾಗೂ ಪ್ಲಾಸ್ಟಿಕ್ ಕುಂಡಗಳಲ್ಲೇ 450ಕ್ಕೂ ಹೆಚ್ಚು ಸಸ್ಯಗಳು ನಳನಳಿಸುತ್ತಿವೆ.

ನಿಂಬೆ, ಪನ್ನೇರಳೆ, ಸೀತಾಫಲ, ಪಪ್ಪಾಯ, ಬಾಳೆ ಮನೆಯ ಸುತ್ತಲೂ ದಟ್ಟವಾಗಿ ಬೆಳೆದು ನಿಂತಿದ್ದು, ಎಲ್ಲಿಂದಲೋ ಹಾರಿ ಬರುವ ವಿವಿಧ ಪಕ್ಷಿಗಳಿಗೆ 'ಫಲ' ಕೊಡುತ್ತಿವೆ. ದೊಡ್ಡಪತ್ರೆ, ತುಳಸಿ, ಕರಿಬೇವು, ಪುದೀನಾ, ಅಲೊವೇರಾ, ಶುಂಠಿ, ಅರಿಸಿನ ಒಳಗೊಂಡು ಹತ್ತಾರು ಪ್ರಭೇದದ ಔಷಧೀಯ ಸಸ್ಯಗಳು, ಟೊಮೆಟೊ, ಬದನೆಯಂತಹ ತರಕಾರಿ ಹಾಗೂ ಬಗೆ ಬಗೆಯ ಬಳ್ಳಿಗಳು ಮನೆಯನ್ನು ಆವರಿಸಿಕೊಂಡಿವೆ.

ಹಸಿರನ್ನೇ ಹೊದ್ದಿರುವ 'ಶಾಂತಿರತ್ನ'ಕ್ಕೆ 21ಕ್ಕೂ ಹೆಚ್ಚು ತರಹೇವಾರಿ ಪಕ್ಷಿಗಳು ಭೇಟಿ ನೀಡುತ್ತಲೇ ಇರುತ್ತವೆ. ಹಲವು ಪಕ್ಷಿಗಳು ಇಲ್ಲಿಯೇ ಗೂಡು ಕಟ್ಟಿ ಮರಿ ಮಾಡಿಕೊಳ್ಳುವುದು ಸಹಜವಾಗಿದೆ. ಸೂರಕ್ಕಿ, ಪಿಕಳಾರ, ಹುಲಿಯಕ್ಕಿ, ಗಿಳಿಗಳ ನೆಚ್ಚಿನ ತಾಣವೂ ಇದಾಗಿದೆ.

ವಿದ್ಯಾರ್ಥಿಗಳಿಗೆ ಪರಿಸರ ಪಾಠ

ಶಿಶುಪಾಲ ಅವರ ಮನೆಗೆ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಶಿಕ್ಷಕರೊಂದಿಗೆ ಬಂದು ಪರಿಸರ ಪಾಠವನ್ನು ಆಲಿಸುತ್ತಾರೆ. ಹಸಿರು ನಿವಾಸವನ್ನು ಬೆರಗುಗಣ್ಣಿನಿಂದ ನೋಡುವ ಚಿಣ್ಣರು ಮನೆಯಲ್ಲೇ ತೋಟವನ್ನು ಸೃಷ್ಟಿಸುವ ಬಗೆಯನ್ನು ಶಿಶುಪಾಲ ಅವರಿಂದ ಕೇಳಿ ತಿಳಿದುಕೊಳ್ಳುತ್ತಿದ್ದಾರೆ. ಅವರು ಚಿಣ್ಣರಿಗೆ ಪರಿಸರ ಪ್ರೀತಿಯ ಬಗ್ಗೆ ಪಾಠ ಮಾಡುವ ಮೂಲಕ ಮಕ್ಕಳಲ್ಲಿ ಅರಿವು ಮೂಡಿಸುವ ಕಾರ್ಯದಲ್ಲೂ ತೊಡಗಿದ್ದಾರೆ.

ಶಿಶುಪಾಲ ಅವರ ಪರಿಸರ ಪ್ರೀತಿಗೆ ಹತ್ತಾರು ಪ್ರಶಸ್ತಿಗಳು ಒಲಿದು ಬಂದಿವೆ. ಮಾಲಿನ್ಯ ನಿಯಂತ್ರಣ ಮಂಡಳಿಯಿಂದ 'ಪರಿಸರ ಸ್ನೇಹಿ ಮನೆ' ಪ್ರಶಸ್ತಿ, ತೋಟಗಾರಿಕೆ ಇಲಾಖೆಯಿಂದ 'ಕೈತೋಟ' ವಿಭಾಗದಲ್ಲಿ ನೀಡುವ 'ಅತ್ಯುತ್ತಮ ಮನೆ' ಪ್ರಶಸ್ತಿಯು ಐದು ಬಾರಿ ಒಲಿದಿದೆ. ಭಾರತೀಯ ವಿಕಾಸ ಪರಿಷತ್ 'ಹಸಿರು ವಾಸಿ' ಮನೆ ಪ್ರಶಸ್ತಿ ಸೇರಿದಂತೆ ಹತ್ತಾರು ಸಂಘ–ಸಂಸ್ಥೆಗಳು ಪ್ರಶಸ್ತಿ ನೀಡಿ ಗೌರವಿಸಿವೆ.


ಮನೆಗೆ ಭೇಟಿ ನೀಡಿದ ವಿದ್ಯಾರ್ಥಿಗಳಿಗೆ ಶಿಶುಪಾಲ ಅವರು ಪರಿಸರ ಪಾಠ ಮಾಡುತ್ತಿರುವುದು

ಇವರ ಮನೆಯಲ್ಲಿ ಮಳೆ ನೀರನ್ನು ಸಂಗ್ರಹಿಸುವ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವ ಕಾರಣಕ್ಕೆ ಗಿಡ, ಮರಗಳಿಗೆ ನೀರಿನ ಸಮಸ್ಯೆ ಎದುರಾಗುತ್ತಿಲ್ಲ. ಚಾವಣಿಯಿಂದ ಬರುವ ನೀರು 'ರೈನಿ ಫಿಲ್ಟರ್' ಶುದ್ಧಗೊಂಡು ಐದು ಸಾವಿರ ಲೀಟರ್ ಸಾಮರ್ಥ್ಯದ ಸಂಪ್ ಸೇರುತ್ತಿದೆ. ಸಂಪ್‌ನಲ್ಲಿನ ನೀರನ್ನು ಗಿಡಗಳಿಗೆ ನೀರುಣಿಸಲು ಬಳಸಲಾಗುತ್ತಿದೆ. ಎಲ್ಲ ಸಸಿಗಳಿಗೆ ನೀರುಣಿಸಲು ಒಂದೆರೆಡು ತಾಸು ಸಮಯ ಬೇಕಾಗುತ್ತದೆ.

ಪ್ರಕೃತಿಯೇ ದೇವರು..

ಮನೆಯ ಆವರಣದಲ್ಲಿನ ಗಿಡಮರಗಳ ಎಲೆ, ಒಣಗಿದ ಹೂವು, ಮಣ್ಣು ಕಸವಲ್ಲ. ಮನಃಶಾಂತಿಗಾಗಿ ಇನ್ನೆಲ್ಲಿಗೋ ಹೋಗುವ ಅವಶ್ಯಕತೆಯೂ ಇಲ್ಲ. ಪ್ರಕೃತಿಯೇ ದೇವರು. ಇಲ್ಲಿ ಸಿಗುವ ನೆಮ್ಮದಿ ಬೇರೆಲ್ಲಿಯೂ ದೊರೆಯುವುದಿಲ್ಲ ಎನ್ನುತ್ತಾರೆ ಶಿಶುಪಾಲ. 'ನಮ್ಮ ಮನೆಯ ಗಿಡಮರಗಳಿಂದ ನಿತ್ಯವೂ ಕನಿಷ್ಠ ನೂರು ಜನರಿಗೆ ಶುದ್ಧಗಾಳಿ ದೊರೆಯುತ್ತಿದೆ. ಇದು ಕೂಡಾ ಒಂದು ರೀತಿಯ ಸಮಾಜ ಸೇವೆಯೇ ಆಗಿದೆ' ಎನ್ನುತ್ತಾರೆ.

ಪರಿಸರ, ಪಕ್ಷಿಸಂಕುಲ ಅಧ್ಯಯನ ಬಗ್ಗೆ ಆಸಕ್ತಿ ಹೊಂದಿರುವ ಅವರು, ಮನೆಯಲ್ಲಿ ಸಣ್ಣದೊಂದು ಗ್ರಂಥಾಲಯವನ್ನೇ ತೆರೆದಿದ್ದಾರೆ. ಸಮಯ ಸಿಕ್ಕಾಗಲೆಲ್ಲ ಕ್ಯಾಮೆರಾ ಹಿಡಿದು ಬೆಟ್ಟ ಗುಡ್ಡ, ಕೆರೆ ಕಟ್ಟೆಗಳತ್ತ ಸಾಗಿ, ವಿವಿಧ ಪಕ್ಷಿಗಳ ಚೆಂದದ ಚಿತ್ರಗಳನ್ನು ಸೆರೆ ಹಿಡಿಯುತ್ತಾರೆ.

ತಾಳ್ಮೆ ಇದ್ದರೆ ಮಾತ್ರ ಸಸಿಗಳ ಪೋಷಣೆ ಸಾಧ್ಯ. ಚಿಕ್ಕ ಮಕ್ಕಳೆಂದು ಭಾವಿಸಿ ನಿತ್ಯವೂ ನೀರುಣಿಸಿ, ಗೊಬ್ಬರ ಹಾಕಿ ಬೆಳೆಸಿದ ಸಸಿಗಳು ಹೂವು ಬಿಟ್ಟಾಗ ಸಿಗುವ ಖುಷಿಯನ್ನು ಪದಗಳಲ್ಲಿ ವರ್ಣಿಸಲಾಗದು. ಮನೆಯಲ್ಲಿರುವ ನೂರಾರು ಸಸಿಗಳು ನಮ್ಮ ಬದುಕಿನ ಭಾಗವೇ ಆಗಿವೆ ಎಂದು ಸಂತೃಪ್ತಿಯ ಭಾವ ತೋರಿದ್ದು ಶಿಶುಪಾಲ ಅವರ ಪತ್ನಿ ಪದ್ಮಲತಾ. ಪತಿಯ ಸಸ್ಯ ಪ್ರೀತಿಗೆ ನಿಜ ಅರ್ಥದಲ್ಲಿ ನೀರೆರೆದು ಪೋಷಿಸುತ್ತಿರುವವರೇ ಇವರು.

ಆಸಕ್ತಿ, ಸಸ್ಯ ಸಂಕುಲದ ಬಗೆಗೆ ಅಪಾರ ಪ್ರೀತಿ ಇದ್ದರೆ 'ಮನೆ ತೋಟ'ವನ್ನು ಸೃಷ್ಟಿಸಲು ಸಾಧ್ಯ.





ಶಿಶುಪಾಲ ಅವರ ಮನೆಯ ಒಳಗೆ ಮತ್ತು ಬಾಲ್ಕನಿಯಲ್ಲಿ ಸಸ್ಯಸಂಪತ್ತು ನಳನಳಿಸುತ್ತಿರುವುದು

ಚಿತ್ರಗಳು: ಸತೀಶ್ ಬಡಿಗೇರ

ಮೊದಲ ಓದು

ಸಾವನ್ನು ಗೆಲ್ಲಲು ಹೊರಟ ದೊರೆಯ ಸಾಹಸಗಾಥೆ



ಗಿಲ್ಗಮೆಶ್ ಮಹಾಗಾಥೆ
ಲೇ: ಡಾ. ಜೆ.ಬಾಲಕೃಷ್ಣ
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080–2216 1900

ಈಗಿನ ಇರಾಕ್ ಪ್ರದೇಶದಲ್ಲಿ ಕ್ರಿ.ಪೂ. 2850ರಿಂದ 2700ರವರೆಗಿದ್ದ ಉರುಕ್ ಸಾಮ್ರಾಜ್ಯದ ಐದನೇ ದೊರೆಯಾಗಿ ಸುಮಾರು 126 ವರ್ಷಗಳ ಕಾಲ ರಾಜ್ಯಭಾರ ಮಾಡಿದ್ದ ಎನ್ನಲಾದ ಗಿಲ್ಗಮೆಶ್ ಕುರಿತು ಹಲವು ಕೃತಿಗಳು ಈಗಾಗಲೇ ಬಂದಿವೆ. ಮೆಸೊಪೊಟೇಮಿಯಾದ ಈ ಕಥೆ ಹಲವು ದೇಶ, ಭಾಷೆ ಮತ್ತು ವಿವಿಧ ಸಾಹಿತ್ಯ ಪ್ರಕಾರಗಳಲ್ಲೂ ಪ್ರಕಟಗೊಂಡಿವೆ. ಇದಕ್ಕೊಂದು ಹೊಸ ಸೇರ್ಪಡೆ ಜೆ. ಬಾಲಕೃಷ್ಣ ಅವರ ಅನುವಾದಿತ ಕೃತಿ 'ಗಿಲ್ಗಮೆಶ್ ಮಹಾಗಾಥೆ'.

ಸಾವಿನ ಹೆದರಿಕೆಯಲ್ಲಿದ್ದ ದೊರೆ, ಅದನ್ನು ಹೇಗಾದರೂ ಮಾಡಿ ಗೆಲ್ಲಬೇಕು, ಅಮರತ್ವ ಸಾಧಿಸಬೇಕು ಎಂಬ ಚಡಪಡಿಸುವುದೇ ಈ ಮಹಾಗಾಥೆಯ ವಸ್ತು. ಹಿಂದೆ ಮೌಖಿಕ ರೂಪದಲ್ಲಿದ್ದ ಈ ಜನಪದ ಕಥೆ, 2700 ವರ್ಷಗಳ ಹಿಂದೆ ಲಿಖಿತ ರೂಪದಲ್ಲಿ ದಾಖಲಾಯಿತು ಎಂದೆನ್ನಲಾಗಿದೆ.

ಮದುವೆಯಾಗುವ ಹೆಣ್ಣುಗಳು ಮೊದಲ ರಾತ್ರಿಯನ್ನು ತನ್ನೊಂದಿಗೆ ಕಳೆಯಬೇಕು ಎಂಬ ಕಟ್ಟಪ್ಪಣೆಯ ಜತೆಗೆ ಈತನ ಕ್ರೌರ್ಯ ಹಾಗೂ ದಬ್ಬಾಳಿಕೆಗೆ ಅವನ ರಾಜ್ಯದ ಜನರು ರೋಸಿಹೋಗಿದ್ದರು. ದೇವತೆಗಳಿಗೂ ಇವನನ್ನು ನಿಯಂತ್ರಿಸುವುದು ಕಷ್ಟವಾಗಿತ್ತು. ಹೀಗಾಗಿ ಇವನ ಸಂಹಾರಕ್ಕೆ 'ಕಾಡು ಮನುಷ್ಯ'ನನ್ನು ಸೃಷ್ಟಿಸಿದರು. ಗಿಲ್ಗಮೆಶ್‌ನೊಂದಿಗೆ ಸಮಬಲದ ಕಾದಾಟದ ನಂತರ ಈ ಕಾಡು ಮನುಷ್ಯ ಆತನ ಸ್ನೇಹಿತನಾಗುತ್ತಾನೆ. ದೇವತೆಗಳ ಕೋಪಕ್ಕೆ ಗುರಿಯಾಗಿ ಸಾಯುತ್ತಾನೆ. ಆದರೆ ಗೆಳೆಯನ ಅಗಲಿಕೆಯ ಜತೆಗೆ, 'ಸಾವು' ಎಂಬುದು ಗಿಲ್ಗಮೆಶ್‌ನನ್ನು ಬಹುವಾಗಿ ಕಾಡುತ್ತದೆ. ಎಲ್ಲವನ್ನೂ ಗೆದ್ದ ಈ ದೊರೆ ಸಾವನ್ನೂ ಗೆಲ್ಲಲು ಹೊರಡುವುದು ಮತ್ತು ಅಂತಿಮವಾಗಿ ಸತ್ಯದ ಅರಿವು ಈ ಕೃತಿಯಲ್ಲಿದೆ.

ಗಿಲ್ಗಮೆಶ್ ಮಹಾಗಾಥೆಯ ಜತೆಗೆ, ಈತನ ಕುರಿತು ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಲಭ್ಯವಿರುವ ದಾಖಲೆಗಳ ಸಂಕ್ಷಿಪ್ತ ಮಾಹಿತಿಯನ್ನು ಚಿತ್ರಸಹಿತ ನೀಡುವ ಪ್ರಯತ್ನವನ್ನು ಲೇಖಕ ಇಲ್ಲಿ ಮಾಡಿದ್ದಾರೆ.

ಪುಟ: 104 ₹135

ಕಥೆ
ಮರಾಠಿ ಮೂಲ : ನೀರಜಾ
ಕನ್ನಡಕ್ಕೆ : ಚಂದ್ರಕಾಂತ ಪೋಕಳೆ ಅವರ
ಮುಟ್ಟು
prajavani.net/short-story

ಕವನ
ಡಾ. ಪದ್ಮ ಟಿ ಚಿನ್ಮಯಿ ಅವರ
ಬುದ್ಧನಾಗಿ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕಲ್ಗತ್ತಲೆ
ಕಲ್ಗತ್ತಲೆ (ನಾ). ಗಾಢ ಕತ್ತಲೆ
ಕುವೆಂಪು ಅವರು ಅರ್ಜುನನು ತನ್ನ ಸಖಿ ಚಿತ್ರಾಂಗದೆಯಿಂದ ಅಗಲುವ ರಾತ್ರಿ ದಟ್ಟ ಮೋಡ ಕವಿದು ಪೂರ್ಣ ಕತ್ತಲಾಗಿದ್ದುದನ್ನು ಚಿತ್ರಿಸಲು 'ಕಲ್ಗತ್ತಲೆ' ಪದ ರೂಪಿಸಿ ಪ್ರಯೋಗಿಸಿದ್ದಾರೆ. ಅದು ಮುಳ್ಳು ಮೊನೆಯು ಹತ್ತದಷ್ಟು ಗಾಢವಾಗಿತ್ತು.
'ಮುಳ್ಳುಮೊನೆಗೆಡೆಯಿಲ್ಲದಂದದಿ ಧರಿತ್ರಿಯಂ
ತೀವಿರ್ದುದಿರಿವ ಕಲ್ಗತ್ತಲೆ.'

ಸುದ್ದಿಬೆಂತರ
ಸುದ್ದಿಬೆಂತರ (ನಾ). ಸಮಾಚಾರ ಪಿಶಾಚಿ; ವಾರ್ತಾಭೂತ
ರಾವಣನು ಸೀತೆಯನ್ನು ಹೊತ್ತು ತಂದು ಅಶೋಕವನದಲ್ಲಿಟ್ಟಿರುವ ವಾರ್ತೆ ಹಬ್ಬಿದ ಬಗೆಯನ್ನು 'ಸುದ್ದಿಬೆಂತರ' ಪದದಿಂದ ಹೀಗೆ ಬಣ್ಣಿಸಿದ್ದಾರೆ:
'ಸುಯ್ಗಾಳಿಯಾಗಿ ಕಿವಿಯಿಂ
ಕಿವಿಗೆ ಸುಳಿದುದು ಸುದ್ದಿಬೆಂತರಂ'

ಮುನ್ನೋಟ 13-07-2025 ರಿಂದ 19-07-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಮುನ್ನಡೆಯುವಿರಿ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ನಿಮ್ಮವರೇ ವ್ಯವಹಾರಗಳಲ್ಲಿ ನಿಮಗೆ ಮೋಸ ಮಾಡಬಹುದು. ಭೂಮಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಯಶಸ್ಸು ದೊರೆಯುತ್ತದೆ. ಸಂಗಾತಿಗಾಗಿ ಹೆಚ್ಚು ಹಣ ಖರ್ಚಾಗುತ್ತದೆ. ಕೃಷಿಯಿಂದ ಲಾಭವಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಬಹಳ ಗಂಭೀರ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ವ್ಯವಹಾರಗಳಲ್ಲಿ ನಿಮಗೆ ಹೆಚ್ಚು ಸಂಪಾದನೆ ಇರುತ್ತದೆ. ಆಸ್ತಿ ಮಾಡುವ ವಿಚಾರದಲ್ಲಿ ಅತಿಯಾದ ಆತುರ ಬೇಡ. ಮೂತ್ರ ಸಂಬಂಧಿ ದೋಷಗಳಿರುವವರು ಹೆಚ್ಚು ಎಚ್ಚರ ವಹಿಸಿ. ನಿಮ್ಮೆಲ್ಲ ಕೆಲಸ ಕಾರ್ಯಗಳಿಗೆ ಸಂಗಾತಿಯ ಸಹಕಾರ ದೊರೆಯುತ್ತದೆ. ಹಣಕಾಸಿನ ವ್ಯವಹಾರ ಮಾಡುವವರಿಗೆ ಅನಿರೀಕ್ಷಿತ ಲಾಭ ಇರುತ್ತದೆ. ವೃತ್ತಿಯಲ್ಲಿ ಹೊಸ ಅವಕಾಶಗಳು ದೊರೆಯುತ್ತವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಉದ್ಯೋಗದಲ್ಲಿ ನಿಮ್ಮದೇ ಆದ ಪ್ರಭಾವ ಬೀರಿ ಯಶಸ್ಸನ್ನು ಪಡೆಯುವಿರಿ. ಕೃಷಿಯಿಂದ ಸ್ವಲ್ಪ ಆದಾಯವಿರುತ್ತದೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಹೆಚ್ಚು ಬೇಡಿಕೆ ಬರುತ್ತದೆ. ವೃತ್ತಿಯಲ್ಲಿ ಹಿರಿಯ ಮಹಿಳಾಧಿಕಾರಿಗಳಿಂದ ನಿಮಗೆ ಅನುಕೂಲವಾಗುತ್ತದೆ. ನಿಮ್ಮ ಹಗುರ ಮಾತಿನಿಂದ ಶತ್ರುಗಳು ಜಾಸ್ತಿಯಾಗಬಹುದು. ವೃತ್ತಿಯಲ್ಲಿದ್ದ ಕೆಲವು ಗೊಂದಲಗಳು ಪರಿಹಾರವಾಗುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿಮ್ಮ ಬಂಧುಗಳು ನಿಮಗೆ ಸಹಕರಿಸುವಂತೆ ನಟಿಸುವರು. ಹಿರಿಯರ ಸಹಾಯದಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಹಿರಿಯರಿಂದ ಆಸ್ತಿ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳು ಸ್ವಲ್ಪ ಶ್ರಮವಹಿಸಿದಲ್ಲಿ ಉತ್ತಮ ಫಲಿತಾಂಶವನ್ನು ಪಡೆಯಬಹುದು. ಕೆಲವರಿಗೆ ವಾಯು ಪ್ರಕೋಪ ಜಾಸ್ತಿಯಾಗುವ ಸಂದರ್ಭವಿದೆ. ಅವಿವಾಹಿತರಿಗೆ ಹಿರಿಯರಿಂದ ಸೂಕ್ತ ಸಂಬಂಧಗಳು ಒದಗುವ ಸಂದರ್ಭವಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಹಿರಿಯರಿಂದ ನಿಮ್ಮೆಲ್ಲಾ ಕೆಲಸಗಳಿಗೆ ಸಹಕಾರ ದೊರೆಯುತ್ತದೆ. ಆದಾಯವು ಕಡಿಮೆ ಇರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಮೂಳೆ ನೋವು ಕೆಲವರನ್ನು ಕಾಡಬಹುದು. ಸಂಗಾತಿಯು ಉತ್ತಮ ಸಂಪಾದನೆ ಮಾಡಿ ಸಂಸಾರಕ್ಕೆ ಬಳಸುವರು. ವಿದೇಶಿ ವ್ಯವಹಾರಗಳಲ್ಲಿ ನಿರೀಕ್ಷಿತ ಆದಾಯ ಇರುವುದಿಲ್ಲ. ವಾಹನ ಮಾರಾಟಗಾರರಿಗೆ ಉತ್ತಮ ಆದಾಯ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವಾರದ ಆರಂಭ ಬಹಳ ಆಲಸ್ಯದಿಂದ ಕೂಡಿರುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಕೃಷಿಯಿಂದ ಆದಾಯವಿರುತ್ತದೆ. ಹಿರಿಯರಿಂದ ಆರ್ಥಿಕ ಸಹಕಾರವನ್ನು ನಿರೀಕ್ಷೆ ಮಾಡಬಹುದು. ಸಂಗಾತಿಯಿಂದ ವೆಚ್ಚಗಳು ಹೆಚ್ಚಾಗಬಹುದು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ನಿಧಾನ ಗತಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸ್ವಲ್ಪ ಆರ್ಥಿಕ ಅಸಮತೋಲನವನ್ನು ಕಾಣಬಹುದು. ವೃತ್ತಿಯಲ್ಲಿ ಆದಾಯ ಹೆಚ್ಚಾಗುವ ಸಾಧ್ಯತೆ ಇದೆ. ಭೂಮಿಯನ್ನು ಖರೀದಿಸುವ ವಿಚಾರದಲ್ಲಿ ಸಾಕಷ್ಟು ಎಚ್ಚರದಿಂದಿರಿ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶವಿರುವುದಿಲ್ಲ. ವಿದೇಶಿ ಬಂಡವಾಳ ಹೂಡಿಕೆ ಮಾಡುವ ಮುನ್ನ ಸಾಕಷ್ಟು ಎಚ್ಚರವಹಿಸಿ. ಸಂಗಾತಿ ಕಡೆಯ ಹಿರಿಯರಿಂದ ನಿಮಗೆ ಸಾಕಷ್ಟು ಅನುಕೂಲವಾಗುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಅತಿ ಹೆಚ್ಚು ಒತ್ತಡದಲ್ಲಿ ಕೆಲಸ ಮಾಡಬೇಕಾಗಬಹುದು. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ಶತ್ರುಗಳು ಈಗ ನಿಮ್ಮ ಸಹವಾಸಕ್ಕೆ ಬರುವುದಿಲ್ಲ. ಕೃಷಿ ಸಂಬಂಧಿತ ಅಧ್ಯಯನವನ್ನು ಮಾಡುವವರಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ವಿವಾಹ ಆಕಾಂಕ್ಷಿತರಿಗೆ ಸಂಬಂಧಗಳು ದೊರಕುವ ಸಾಧ್ಯತೆಗಳಿವೆ. ವಿದೇಶಿ ವ್ಯವಹಾರ ಮಾಡುತ್ತಿರುವವರಿಗೆ ನಿರೀಕ್ಷಿತ ಲಾಭ ಬರುವ ಸಾಧ್ಯತೆ ಇದೆ. ಕೃಷಿಯಿಂದ ಆದಾಯವಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಎಲ್ಲರಿಗೂ ಉಪಕಾರಿಯಾಗಿರುವಿರಿ. ಆದಾಯವು ಕಡಿಮೆ ಇರುತ್ತದೆ. ಹೆಚ್ಚಿನ ಪರಿಶ್ರಮದಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ವೃತ್ತಿಪರ ಪರೀಕ್ಷೆಗಳನ್ನು ತೆಗೆದುಕೊಂಡು ಮುನ್ನಡೆಯಬಹುದು. ಪಿತ್ತ ವಿಕಾರಗಳು ಕೆಲವರನ್ನು ಕಾಡಬಹುದು. ಸಂಗಾತಿಗೆ ಹಿರಿಯರಿಂದ ಆಸ್ತಿ ದೊರಕುವ ಸಾಧ್ಯತೆಗಳಿವೆ. ಕೃಷಿಯಿಂದ ಆದಾಯವಿರುವುದಿಲ್ಲ. ಹಿರಿಯರ ಸಹಾಯದಿಂದ ನಿಮ್ಮ ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಹೆಚ್ಚು ಪರಿಶ್ರಮ ಪಟ್ಟು ಕೆಲಸ ಮಾಡುವಿರಿ. ಆದಾಯವು ಕಡಿಮೆ ಇದ್ದು ಅದರಲ್ಲೇ ನಿರ್ವಹಣೆ ಮಾಡುವಿರಿ. ಸಹೋದ್ಯೋಗಿಗಳ ಸಹಕಾರ ನಿಮಗೆ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅತಿ ಹೆಚ್ಚು ಫಲಿತಾಂಶ ಪಡೆಯುವ ಯೋಗವಿದೆ. ವ್ಯಾಪಾರ, ವ್ಯವಹಾರಗಳಲ್ಲಿ ಸಾಕಷ್ಟು ಎಚ್ಚರವಾಗಿರಿ. ಹಿರಿಯರ ಸಹಾಯದಿಂದ ಸರ್ಕಾರಿ ಕೆಲಸಗಳು ಸುಗಮವಾಗುತ್ತವೆ. ವೃತ್ತಿಯಲ್ಲಿ ಸ್ವಲ್ಪ ಅನುಕೂಲಗಳು ಹೆಚ್ಚುತ್ತವೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವ್ಯಾಪಾರಿ ಮನೋಭಾವದಲ್ಲಿರುವಿರಿ. ಆದಾಯವು ಚೇತರಿಸಿಕೊಳ್ಳುತ್ತದೆ. ಪುಸ್ತಕದ ಸಗಟು ವ್ಯಾಪಾರಿಗಳಿಗೆ ಹೆಚ್ಚು ಲಾಭವಿರುತ್ತದೆ. ಮಕ್ಕಳಿಂದ ಆರ್ಥಿಕ ಸಹಾಯ ದೊರೆಯುತ್ತದೆ. ಕಾನೂನು ವಿಷಯ ಓದುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸು ಇರುತ್ತದೆ. ಹರಿತವಾದ ಆಯುಧಗಳ ಜತೆ ಕೆಲಸ ಮಾಡುವವರು ಬಹಳ ಎಚ್ಚರದಿಂದ ಮಾಡಿ. ಸಂಗಾತಿಯ ಸಹಕಾರದಿಂದ ಸರಕಾರಿ ಹುದ್ದೆಗಳಲ್ಲಿ ಉನ್ನತ ಸ್ಥಾನ ಪಡೆಯಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ನಿಮ್ಮ ಮಾತಿನಲ್ಲಿ ಮತ್ತು ನಡೆನುಡಿಯಲ್ಲಿ ಬಹಳ ವ್ಯಾವಹಾರಿಕತೆ ಇರುತ್ತದೆ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಧಾರ್ಮಿಕ ಚಟುವಟಿಕೆಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ಕ್ರೀಡಾಪಟುಗಳಿಗೆ ನಿರೀಕ್ಷಿತ ಯಶಸ್ಸು ಇರುವುದಿಲ್ಲ. ಹಿರಿಯರಿಗಾಗಿ ಹಣ ಖರ್ಚಾಗುವುದು. ಸಂಗಾತಿಗೆ ಧಾರ್ಮಿಕ ಕಾರ್ಯಗಳಿಂದ ಆದಾಯ ಹೆಚ್ಚುತ್ತದೆ.

ಪದಬಂಧ 2900

ಮೇಲಿನಿಂದ ಕೆಳಕ್ಕೆ
1. ಧರಣಿ ಆಳುವವನ ನಕ್ಷತ್ರ 3
2. ಭಾರತದಲ್ಲಿ ಭೀಮ ದುರ್ಯೋಧನರ ನಡುವೆ ನಡೆದ ಯುದ್ಧ 5
3. ಸುಸಂಸ್ಕೃತರ ನೂರು ನಮಸ್ಕಾರ 5
4. ಬಾಣದಂತೆ ವಾಕ್ಸಿದ್ಧಿ ಪಡೆದ ಸರಸ್ವತಿ 3
7. ನನಸಾಗುವ ನಿರೀಕ್ಷೆಯಲ್ಲಿರುವ ಸ್ವಪ್ನ 3
8. ಸರೋವರದಂತಹ ಮನಸ್ಸಿಗೆ ಸಂಬಂಧಿಸಿದ್ದು 3
12. ಕಲ್ಲಿನ ಗೋರಿ ಕಟ್ಟಿ ಚೆಂಡು ಹೊಡೆಯುವಾಟ 3
14. ಸಮಸ್ಯೆಯುಂಟಾದಾಗ ಬರುವ ಪ್ರಶ್ನೆ 3
17. ಮುತ್ತಿನ ಜಾತಿಗೆ ಸೇರಿದ ಸಾಗರೋತ್ಪನ್ನ 3
19. ಖಾಂಡವದಹನದಲ್ಲಿ ತಲೆತಪ್ಪಿಸಿಕೊಂಡ ನಾಗ 3
20. ನಾಜೂಕು ನವಿರಾಗಿ ಮಾಡುವ ಮೋಸ 5
21. ಗುರಿ ತೋರುವ ಆಚಾರ್ಯನ ಪಾದರವಿಂದ 5
22. ಪ್ರೀತಿ ವಾತ್ಸಲ್ಯವನ್ನು ಗಟ್ಟಿಗೊಳಿಸುವ ದ್ರವ್ಯ ಸಿಂಚನ 3
26. ಉತ್ತರ ಕರ್ನಾಟಕದ ಮಂದಿಯ ಆತುರದ ಕರೆ 3
28. ರಸದಲ್ಲಿ ಭರದಿಂದ ನುಗ್ಗುವ ವೇಗ 3

ಎಡದಿಂದ ಬಲಕ್ಕೆ
1. ಇಹಲೋಕದ ವ್ಯಾಧಿ 4
3. ವೈರಿ ಧ್ವಂಸ 4
5. ಆತುರದಲ್ಲಿ ಕೊನೆ ಮುಟ್ಟುವ ಶೀಘ್ರ ನಡಿಗೆ 3
6. ಒಂದೇ ಒಂದು ಘಳಿಗೆಯ ಸುಖ 3
8. ಮಂಗನಿಗೆ ಬೆಲೆ ತಿಳಿಯದ ಹೊಳಪಿನ ಕಲ್ಲು 3
9. ಜಾತಕದ ಒಂಭತ್ತನೇ ಮನೆ 3
10. ಅಪರೂಪಕ್ಕೆ ಸಿಗುವ ನೋಟದ ಭಾಗ್ಯ 3
11. ಜೇನಿನ ಜೊತೆ ಕಲಿಸಿ ತಿನ್ನಬಹುದಾದ ಹಣ್ಣು 3
13. ಹಣ್ಣಿನ ರಸದಿಂದ ತಯಾರಿಸಿದ ಪೇಯ 3
15. ಸಹಜ ತಾಳ್ಮೆ 3
18. ಸಾಧನೆಯ ಸ್ಫೂರ್ತಿ ಪಡೆದವ 3
20. ಹೂವಿನ ಮನಸ್ಸನ್ನು ಮುದುಡು 3
22. ಪಕ್ವವಾಗದ ಬಾಲಿಷ ಪ್ರವೃತ್ತಿ 3
23. ಚಾತುರ್ವರ್ಣಗಳಲ್ಲಿ ಭುಜಬಲದವ 3
24. ರಣಭೂಮಿಯಲ್ಲಿ ಹರಿಯುವ ನೆತ್ತರು 3
25. ವಾಹನದ ಸಾರಥಿ 3
27. ಗಾಂಧಿ ಹೆಸರಿನಲ್ಲಿರುವ ವಿರಳ ಕರ್ಮ 3
29. ನಾಲ್ಕು ಪಟ್ಟು ಜಾಣ್ಮೆಯಿರುವ ಕುಶಲಿ 3
30. ಇಲ್ಲಿರುವ ನಂದಗೋಕುಲದಂತಹ ಸ್ವಗೃಹ 4
31. ತನ್ನೆಲ್ಲದವನು ಅರ್ಪಿಸುವ ಭಾವ ಹಿಂದುಮುಂದಾಗಿದೆ 4



ಪದಬಂಧ ಉತ್ತರ -2899

ಮೇಲಿಂದ ಕೆಳಕ್ಕೆ
1.ಜ್ಞಾಪಕ 2.ವಿಸ್ಮಯ 3.ಅಂಕೆಸಂಕೆ 4.ರಸಾಭಾಸ 7.ಮದ್ದಾನೆ 8.ಸಕಲಗುಣ 9.ಲಕ್ಷ್ಮೀಧಾಮ 10.ಮಹಾಸತ್ಯ 12.ಹಿರಿಯ 13.ನಿಷ್ಠಾವಂತ 14.ರಾಗರತಿ 15.ಹರ್ಷಿತ 16.ವರುಣ

ಎಡದಿಂದ ಬಲಕ್ಕೆ
1.ಜ್ಞಾನದೇವಿ 3.ಅಂಕುರ 5.ಸ್ಮರಣಸಂಚಿಕೆ 6.ಕಲಾಮಯ 8.ಸರ್ಕಾರಿಕೆಲಸ 10.ಮನೆಮುರುಕ 11.ಗುರುಮಹಿಮ 13.ನಿತ್ಯರಾಮಾಯಣ 15.ಹಯಗ್ರೀವ 17.ರಮಣಮಹರ್ಷಿ 18.ತಪತಿ 19.ತಮೋಗುಣ

ಕತ್ತಲೆ–ಬೆಳಕಿನ ಅಪೂರ್ವ ಕಲಾಕೃತಿ

ಕರವಾಜಿಯೊ ಅವರ ಕಲಾಕೃತಿ ಪ್ರದರ್ಶನ ಇತ್ತೀಚೆಗೆ ಬೆಂಗಳೂರಿನ ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್‌ನಲ್ಲಿ ನಡೆಯಿತು. ಅತ್ಯಂತ ಬೆಲೆಬಾಳುವ ಕಲಾಕೃತಿ ಇದಾಗಿದ್ದರಿಂದ ಪೊಲೀಸ್ ಭದ್ರತೆಯನ್ನು ಒದಗಿಸಲಾಗಿತ್ತು. 'ಭಾವಪರವಶಳಾದ ಮೇರಿ ಮ್ಯಾಗ್ಡಲೀನ್' ಎಂಬ ಈ ಕಲಾಕೃತಿಯು ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಪ್ರದರ್ಶನಗೊಂಡ ಕರವಾಜಿಯೊ ಅವರ ಕಲಾಕೃತಿಯೆಂಬ ಹೆಗ್ಗಳಿಕೆ ಗಳಿಸಿಕೊಂಡಿತು.

• ರೂಪಾ ಕೆ.ಎಂ.

ಭಾವನೆಗಳು ಉತ್ತುಂಗ ಸ್ಥಿತಿಯನ್ನು ತಲುಪಿದಾಗ ಅದು ನೋಡುಗರ ಎದೆಯನ್ನು ತಾಕಿ, ಹೊಸ ಸಂವೇದನೆಯೊಂದು ಸೃಷ್ಟಿಯಾಗುತ್ತದೆ. ಭಾವ ಸಂಘರ್ಷದ ಎಲ್ಲೆಗಳನ್ನು ಮೀರಿ, ನಿರ್ದಿಗಂತತೆಯನ್ನು ಸಾರುವ ಮೇರಿ ಮ್ಯಾಗ್ಡಲೀನ್ ಎಂಬ ಸೇಂಟ್ ಭಾವಪರವಶಳಾದ ಬಗೆಯನ್ನು ಇಂಚಿಂಚೂ 'ಜೀವಂತಿಕೆಯ' ಕ್ಯಾನ್ವಾಸ್‌ನಲ್ಲಿ ಕಟ್ಟಿಕೊಟ್ಟಿದ್ದಾರೆ ಇಟಲಿಯ ಪ್ರಸಿದ್ಧ ಚಿತ್ರಕಲಾವಿದ ಕರಾವಜಿಯೊ.

ಬೈಬಲ್‌ನಲ್ಲಿ ಉಲ್ಲೇಖಗೊಂಡಿರುವ ಮೇರಿ ಮ್ಯಾಗ್ಡಲೀನ್ ಕುರಿತ ಅಪ್ರತಿಮ ಎನಿಸುವ ತೈಲವರ್ಣದ ಕಲಾಕೃತಿ ಇದು. 'ಭಾವಪರವಶಳಾದ ಮೇರಿ ಮ್ಯಾಗ್ಡಲೀನ್' ಶೀರ್ಷಿಕೆಯ ಈ ಕಲಾಕೃತಿಯು 40.75 ಇಂಚು × 36 ಇಂಚು ಅಳತೆಯ ಕ್ಯಾನ್ವಾಸ್‌ನಲ್ಲಿ ಜೀವತಳೆದಿದೆ.

ಇದರಲ್ಲಿ ಮೇರಿ ಮ್ಯಾಗ್ಡಲೀನ್ ತಲೆ ತುಸುವೇ ಹಿಂದಕ್ಕೆ ಬಾಗಿದಂತೆ ಕಾಣುತ್ತದೆ. ಅರೆ ನಿಮೀಲಿತ ಕಣ್ಣುಗಳು, ಬಹಳ ಸೂಕ್ಷ್ಮವಾಗಿ ಬೆಸೆದುಕೊಂಡ ಕೈಗಳು, ಭಾವಪರವಶತೆಯಲ್ಲಿ ತಲ್ಲೀನಳಾದ ಮ್ಯಾಗ್ಡಲೀನ್ ಮತ್ತು ಅವಳ ಎಡಗಣ್ಣಿನಿಂದ ಸಣ್ಣ ಮುತ್ತಿನಂತೆ ಇದ್ದು ಇಲ್ಲದಂತೆ ಕಾಣುವ ಕಣ್ಣೀರ ಹನಿ. ಬಣ್ಣಗಳಲ್ಲಿ ಮೇರಿ ಜೀವತಳೆದಂತೆ ಭಾಸವಾಗಿ ನೋಡುಗರನ್ನು ನಿಬ್ಬೆರಗಾಗಿಸುತ್ತದೆ.

ಮೇರಿ ಮ್ಯಾಗ್ಡಲೀನ್ ಭಾವಕಡಲಿನಲ್ಲಿ ಎದ್ದ ಹಲವು ಸಂಘರ್ಷದ ತೆರೆಗಳನ್ನು ಹಾಗೂ ಅವುಗಳೆಲ್ಲ ಒಮ್ಮೆಲೆ ದಡವನ್ನು ತಲುಪಿ ಶಾಂತಗೊಂಡ ಭಾವವನ್ನು ಏಕಕಾಲಕ್ಕೆ ಕಲಾವಿದ ಇಲ್ಲಿ ಇಂಚಿಂಚು ಕುಂಚದಲ್ಲೇ ವ್ಯಕ್ತಪಡಿಸುವ ಮೂಲಕ ಬಣ್ಣಗಳ ಅನನ್ಯ ಸಾಧ್ಯತೆಯನ್ನು ತೋರಿಸಿದ್ದಾರೆ. ಇಲ್ಲಿ ಬಣ್ಣಗಳಷ್ಟೆ ಅಲ್ಲ, ಕತ್ತಲು ಮತ್ತು ಬೆಳಕು ತನ್ನದೇ ಆದ ಪರಿಧಿಯನ್ನು ಮೀರಿ, ಹಲವು ಮಾತುಗಳನ್ನು ಸರಾಗವಾಗಿ ಆಡುತ್ತವೆ.


ಇಟಾಲಿಯನ್ ಭಾಷೆಯಲ್ಲಿ 'ಚಿಯಾರೊಸ್ಕೊರೊ' ಎಂದು ಕರೆಯುವ ಬೆಳಕು–ಕತ್ತಲಿನ ಸಮಹಂಚಿಕೆಯ ತಂತ್ರಗಾರಿಕೆಯನ್ನು ಸಶಕ್ತವಾಗಿ ಬಳಸಿಕೊಳ್ಳಲಾಗಿದೆ. ಮೇರಿ ಮ್ಯಾಗ್ಡಲೀನ್ ದೇಹದ ಮೇಲೆ ಬಿದ್ದ ಬೆಳಕು ಸೂಚಿಸುವ ಭಾವನೆಗಳು ನಿಗೂಢ ಕತ್ತಲು ಹಿಡಿದಿಟ್ಟುಕೊಂಡ ಗುಟ್ಟುಗಳಿಗೆ ಪೈಪೋಟಿ ಕೊಡುವಂತೆ ಕಾಣುತ್ತವೆ.

ಕತ್ತಲು ಮತ್ತು ಬೆಳಕು ಎರಡೂ ವಿಭಿನ್ನ ಧ್ರುವಗಳು. ಬದುಕು ಇರುವುದು ಹಾಗೆ. ವೈರುಧ್ಯಗಳ ನಡುವಿನ ಸಮತೂಕದ ನಡಿಗೆ. ಇದನ್ನೇ ಕರವಾಜಿಯೊ ಕತ್ತಲು ಮತ್ತು ಬೆಳಕಿನ ಈ ತಂತ್ರಗಾರಿಕೆಯ ಮೂಲಕ ಸ್ಪಷ್ಟಪಡಿಸಲು ಹೊರಟಿದ್ದಾರೇನೋ ಅನಿಸುತ್ತದೆ. ವಿಭಿನ್ನ ಧ್ರುವಗಳನ್ನು ಬಳಸಿಕೊಂಡು ಹೊಸ ಭ್ರಮೆಯೊಂದನ್ನು ಸೃಷ್ಟಿಸಿರುವುದರಿಂದ ಇದು ಶತಮಾನಗಳು ಕಳೆದರೂ ಕಲಾಲೋಕದ ಕೌತುಕವಾಗಿಯೇ ಉಳಿದುಕೊಂಡಿದೆ.


ಈ ತೈಲವರ್ಣದ ಕಲಾಕೃತಿಯನ್ನು ಟೆನಿಬ್ರಿಸಂ ಶೈಲಿಯಲ್ಲಿ ರೂಪಿಸಲಾಗಿದೆ. ಟೆನಿಬ್ರಿಸಂ ಎಂಬುದು ಗಾಢ ಕತ್ತಲೆಯನ್ನು ಕಲಾಕೃತಿಯಲ್ಲಿ ತುಸು ಹೆಚ್ಚೇ ತಂದು, ಪ್ರಮುಖ ಭಾಗಗಳಿಗೆ ಗಾಢ ಬಣ್ಣವನ್ನು ಹರಿಸಲಾಗಿದೆ. ಅತಿ ಕತ್ತಲೆಯಿಂದಾಗಿ ಮುಖ್ಯ ಭಾಗಗಳು ಬೆಳಕಿನಲ್ಲಿ ಮೀಯುತ್ತವೆ. ಹೀಗೊಂದು ಭ್ರಮೆ ಸೃಷ್ಟಿಯಾಗಲು ವರ್ಣಗಳು ಮುಖ್ಯವಾಗುವಷ್ಟೆ ಗಾಢ ಕತ್ತಲು ಪ್ರಮುಖ ಪಾತ್ರ ವಹಿಸುತ್ತದೆ. ಕತ್ತಲಿನಿಂದ ಬೆಳಕಿನ ಮೌಲ್ಯ ಹೆಚ್ಚುತ್ತದೆ ವಿನಃ ಕುಸಿಯುವುದಿಲ್ಲ ಎಂಬ ಸಿದ್ಧಾಂತದಲ್ಲಿ ಇದನ್ನು ರೂಪಿಸಲಾಗಿದೆ. ಕರವಾಜಿಯೊನನ್ನು ಟೆನಿಬ್ರಿಸಂ ಶೈಲಿಯ ರೂವಾರಿಯೆಂದೇ ಇತಿಹಾಸ ನೆನೆಯುತ್ತದೆ. ಈ ತಂತ್ರಗಾರಿಕೆಯಿಂದಾಗಿ ಇಟಲಿ ಮತ್ತು ಸ್ಪಾನಿಷ್‌ನಲ್ಲಿ ಪ್ರಸಿದ್ಧಗೊಂಡ 'ಬರೋಕ್' ಶೈಲಿಯು ಕ್ರಮೇಣ ರೂಪುಗೊಂಡಿತು ಎಂಬ ವಾದವೂ ಇದೆ.

ಮಂದ ಬೆಳಕಿನಲ್ಲಿರುವ ಕೋಣೆಯಲ್ಲಿ ಮ್ಯಾಗ್ಡಲೀನ್ ಸುತ್ತ ಇರುವ ಕೆಂಪು ಮೇಲಂಗಿಯ ನೆರಳು ಎದ್ದು ಕಾಣುತ್ತದೆ. ಗಾಢ ಕೆಂಪು ಕರವಾಜಿಯೊ ನಿರಂತರವಾಗಿ ಬಳಸಿದ ಬಣ್ಣವಾಗಿದೆ. ಮೇಲಂಗಿಯ ಮಡಿಕೆಗಳಲ್ಲಿ ವಿಶಿಷ್ಟ ಸ್ವರೂಪದ ಸ್ಟ್ರೋಕ್‌ಗಳನ್ನು ಕಾಣಬಹುದು. ಮ್ಯಾಗ್ಡಲೀನಳ ಮುಖ ಮೃದುಭಾವಗಳಿಂದ ಆಕರ್ಷಣೀಯವೆನಿಸಿದರೂ, ಅವಳ ತುಟಿ ಮತ್ತು ಬೆರಳ ತುದಿಗಳು ಕಪ್ಪಾಗಾಗಿವೆ; ಓರೆಯಾದ ಕಣ್ಣಿನ ರಪ್ಪೆಗಳು, ಊದಿಕೊಂಡ ಗುಲಾಬಿ ಬಣ್ಣದ ಕಣ್ಣುಗಳು ಹಲವು ಪ್ರಶ್ನೆಗಳನ್ನು ಹಾಗೇ ದಾಟಿಸಿ ಮೌನವಾಗುತ್ತವೆ.

ಚಿತ್ರದ ಎಡಭಾಗದಿಂದ ಬರುವ ಬೆಳಕು ಚಿತ್ರಕಲೆಯ ಮೇಲೆ ಯಾವುದೇ ಪ್ರತಿಬಿಂಬಗಳನ್ನು, ನೆರಳುಗಳನ್ನು ಮೂಡಿಸದೇ ಬೆಳಕೂ ಕಲಾಕೃತಿಗೆ ಕೊಟ್ಟ ಸಾಥ್‌ನ ಬಗ್ಗೆ ಮೆಚ್ಚಿಕೊಳ್ಳುವಂತೆ ಮಾಡುತ್ತದೆ.



ಜಗತ್ಪ್ರಸಿದ್ಧ ಚಿತ್ರಕಲಾವಿದ ಕರವಾಜಿಯೊ ಅವರ ಮಾಸ್ಟರ್ ಪೀಸ್ 'ಭಾವಪರವಶಳಾದ ಮೇರಿ ಮ್ಯಾಗ್ಡಲಿನ್' ಕಲಾಕೃತಿ ಪ್ರದರ್ಶನ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.



ಕರವಾಜಿಯೊ ಕುರಿತು....

ಮೈಕೆಲೆಂಜಿಲೊ ಮೆರಿಸಿ ಡ ಕರವಾಜಿಯೊ 17ನೇ ಶತಮಾನದ ಇಟಲಿಯ ಪ್ರಸಿದ್ಧ ಕಲಾವಿದ. ಆತನ ವೈಯಕ್ತಿಕ ಬದುಕು ಹಲವು ವಿಚಿತ್ರಗಳಿಂದ ಕೂಡಿತ್ತು. ವಿಲಕ್ಷಣ ಸ್ವಭಾವದವನೆಂದೇ ಇತಿಹಾಸ ನೆನೆಯುತ್ತದೆ. ಕರವಾಜಿಯೊ 20ನೇ ವಯಸ್ಸಿಗೆ ಬಣ್ಣದ ವ್ಯಾಮೋಹ ಬೆಳೆಸಿಕೊಂಡ. ಆದರೆ ಬದುಕು ಹಲವು ಏರಿಳಿತಗಳಿಂದ ಕೂಡಿತ್ತು. ತಂಟೆಕೋರ, ಜಗಳಗಂಟನಾಗಿದ್ದ. ತನ್ನ ಸ್ನೇಹಿತನನ್ನು ಕ್ಷುಲ್ಲಕ ಕಾರಣಕ್ಕೆ ಕೊಲೆ ಮಾಡಿ ಜೈಲಿಗೂ ಹೋಗಿ ಬಂದಿದ್ದ ಎನ್ನುತ್ತದೆ ಇತಿಹಾಸ. ಕೊಲೆಯ ಕಾರಣದಿಂದಾಗಿ ಮಿಲಾನ್‌ನಿಂದ ವೆನಿಸ್ ಹಾಗೂ ರೋಮ್‌ಗೆ ಪಲಾಯನ ಮಾಡುವಂತೆಯೂ ಆಯಿತು.

38 ವರ್ಷಗಳ ಜೀವಿತಾವಧಿಯಲ್ಲಿ ಕರವಾಜಿಯೊ ಸುಮಾರು 100 ವರ್ಣಚಿತ್ರಗಳನ್ನು ರಚಿಸಿದ್ದು, ಅದರಲ್ಲಿ 60 ಆತನದ್ದೇ ಎಂದು ದೃಢೀಕರಿಸುವ ದಾಖಲೆಗಳನ್ನು ಹೊಂದಿವೆ.

1606ರಲ್ಲಿ ಈ ಕಲಾಕೃತಿಯನ್ನು ರಚಿಸಲಾಗಿದೆ. 2014ರಲ್ಲಿ ಯುರೋಪಿನ ಖಾಸಗಿ ಸಂಗ್ರಹಕಾರರೊಬ್ಬರಿಂದ ಪತ್ತೆ ಮಾಡಿ, ಈ ಕಲಾಕೃತಿಯ ಪ್ರದರ್ಶನಕ್ಕೆ ಅವಕಾಶ ಸಿಕ್ಕಿತು. ಇದಕ್ಕೂ ಮುಂಚೆ ಕಲಾಕೃತಿಯ ಬಗ್ಗೆ ಹೆಚ್ಚಿನ ಮಾಹಿತಿ ಇರಲಿಲ್ಲ.

ದ್ವೀಪವೂ...ಸೇತುವೆಯೂ...

10ನೇ ಪುಟದಿಂದ...

ಇದು 2004 ರಲ್ಲಿ ನಡೆದ ಘಟನೆ. ಆಗ ಒಂದೇ ಲಾಂಚ್ ಇತ್ತು. ಹೊಳೆಬಾಗಿಲಿನಿಂದ ಗಜಾನನ ಬಸ್‌ನ ಕೊನೆಯ ಟ್ರಿಪ್. ಲಾಂಚ್ ಹತ್ತಲು ಪ್ರವಾಸಿಗರನ್ನು ಸಾಲಿನಲ್ಲಿ ನಿಲ್ಲಿಸಲಾಗಿತ್ತು. ಬ್ಯಾಕೋಡಿನ ಯುವಕನೊಬ್ಬನಿಗೆ ಹಾವು ಕಚ್ಚಿತ್ತು. ಗುಮ್ಮನಬೈಲ್‌ನ ಹೆಣ್ಣುಮಗಳಿಗೆ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಆಸ್ಪತ್ರೆಗೆ ಕರೆದೊಯ್ಯಲು ಇಬ್ಬರನ್ನೂ ಒಂದೇ ವಾಹನದಲ್ಲಿ ಕೂರಿಸಿ ಲಾಂಚ್ ಹತ್ತಿಸಲು ಮುಂದಾದರು. ಆಗ ಸಾಲಿನಲ್ಲಿ ನಿಂತಿದ್ದ ಯಾತ್ರಿಕರು ಜಗಳ ತೆಗೆದರು. ಹಾವು ಕಚ್ಚಿದ್ದ ಸ್ಥಳಕ್ಕೆ ಕಟ್ಟು ಹಾಕಿದ್ದರಿಂದ ಆ ಯುವಕ ನೋವಿನಿಂದ ಬೊಬ್ಬೆ ಹಾಕುತ್ತಿದ್ದ. ಮಹಿಳೆಗೆ ಹೆರಿಗೆ ನೋವು. ಕೊನೆಗೆ ಪೊಲೀಸರು ಬಂದು ಪರಿಸ್ಥಿತಿ ನಿಯಂತ್ರಣಕ್ಕೆ ತಂದಿದ್ದರು. ಅಷ್ಟೊತ್ತಿಗೆ ಒಂದೂವರೆ ಗಂಟೆ ಅಲ್ಲಿಯೇ ಕಳೆದಿತ್ತು. ಆ ದಿನ ತಮ್ಮೂರಲ್ಲೇ ಸ್ಥಳೀಯರು ಪರಕೀಯರಾಗಿ ಹೊರಗಿನಿಂದ ಬಂದವರಿಂದ ದಬಾವಣೆಗೆ ಒಳಗಾಗಿದ್ದರು. ಆ ಘಟನೆ ಈ ಭಾಗದಲ್ಲಿ ಸೇತುವೆಯ ಕೂಗಿಗೆ ಬಲ ತಂದುಕೊಟ್ಟಿತ್ತು.



80ರ ದಶಕದ ಹೊಳೆಬಾಗಿಲು ಮತ್ತು ಲಾಂಚ್

'ಹತ್ತಾರು ಘಟನೆಗಳು ಲಾಂಚ್ ಹೊರತಾಗಿ ಪರ್ಯಾಯ ಸಂಪರ್ಕ ವ್ಯವಸ್ಥೆಯ ಯೋಚನೆಗೆ ಇಂಬುಕೊಟ್ಟವು. ಹಿನ್ನೀರಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಬೇಡಿಕೆ ಒಡಮೂಡಿತು. ಮುಂದೆ ಪಕ್ಷಾತೀತವಾಗಿ ಹೋರಾಟ ವೇದಿಕೆಯ ಹುಟ್ಟಿಗೆ ನಾಂದಿಯಾಯಿತು. ಹಿರಿಯರಾದ ಕಾಗೋಡು ತಿಮ್ಮಪ್ಪ ನಮ್ಮ ಬೆನ್ನಿಗೆ ನಿಂತರು. ಹೋರಾಟ ಗಂಭೀರ ಸ್ವರೂಪ ಪಡೆದು ಸರ್ಕಾರದ ಗಮನ ಸೆಳೆದಿತ್ತು. ಆದರೆ, ಅದು ಹಲವು ಅಡಚಣೆಗಳಿಂದ ಕಾರ್ಯಗತಗೊಂಡಿರಲಿಲ್ಲ' ಎಂದು ಅಂಬಾರಗೋಡ್ಲು–ಕಳಸವಳ್ಳಿ ಸೇತುವೆ ಹೋರಾಟ ಸಮಿತಿ ಮುಖಂಡ ಪ್ರಸನ್ನ ಕೆರೆಕೈ ಹೇಳುತ್ತಾರೆ.

ಹಿನ್ನೀರು ಹಾದಿಯಲ್ಲಿ ಸೇತುವೆ ನಿರ್ಮಾಣದಲ್ಲಿ ತುಮರಿಯ ಕೃಷಿಕ ಟಿ.ಎಂ.ಶ್ರೀಧರ ಮೊದಲು ಪ್ರಯತ್ನ ಆರಂಭಿಸಿದ್ದರು. ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಆಪ್ತ ವಲಯದಲ್ಲಿದ್ದ ಶ್ರೀಧರ, ಎಂಜಿನಿಯರ್‌ಗಳನ್ನು ಕರೆಸಿ ಹಿನ್ನೀರಿನಲ್ಲಿ ಸಮೀಕ್ಷೆ ಮಾಡಿ ವರದಿ ಸಿದ್ಧಪಡಿಸಿದ್ದರು. ಎಚ್.ಡಿ.ದೇವೇಗೌಡ ಅವರು ಪ್ರಧಾನಿ ಆಗಿದ್ದಾಗ ಅದನ್ನು ದೆಹಲಿಗೂ ತೆಗೆದುಕೊಂಡು ಹೋಗಿದ್ದರು. ಗೌಡರು ಅಧಿಕಾರದಿಂದ ಇಳಿಯುತ್ತಿದ್ದಂತೆಯೇ ಆ ಪ್ರಸ್ತಾವ ಮೂಲೆಗೆ ಸೇರಿತ್ತು. ಮುಂದೆ ಬಿ.ಎಸ್. ಯಡಿಯೂರಪ್ಪ ಅವರು ಉಪ ಮುಖ್ಯಮಂತ್ರಿ ಆಗುತ್ತಿದ್ದಂತೆಯೇ ಆರ್‌ಎಸ್‌ಎಸ್ ಮುಖಂಡ ಚದುರವಳ್ಳಿಯ ಪರಮೇಶ್ವರ ಸೇತುವೆ ವಿಚಾರದಲ್ಲಿ ಅವರ ಬೆನ್ನು ಬಿದ್ದರು ಎನ್ನುತ್ತಾರೆ ಕರೂರು ಹೋಬಳಿ ಗ್ರಾಮ ಪಂಚಾಯ್ತಿಗಳ ಒಕ್ಕೂಟದ ಅಧ್ಯಕ್ಷರೂ ಆದ ಜಟ್ಟಿನಬೈಲು ಪಿ.ಟಿ.ಸುಬ್ಬರಾವ್.

'ದ್ವೀಪ'ದ ಜನರು ನಿರ್ಣಯ ಕೈಗೊಂಡ ತಕ್ಷಣ ಹಿನ್ನೀರಲ್ಲಿ ಸೇತುವೆ ನಿರ್ಮಾಣ ಕೆಲಸ ಆಗಿಬಿಡುವಂತಹದ್ದಾಗಿರಲಿಲ್ಲ. ಸೀಮಿತ ಪ್ರದೇಶದ 20 ಸಾವಿರ ಜನರಿಗೆ ಇಂತಹದ್ದೊಂದು ಯೋಜನೆ ಬೇಕೇ? ಇದರಿಂದ ರಾಜ್ಯಕ್ಕೆ ಏನು ಲಾಭ ಇದೆ? ಆದಾಯ ರೂಪದಲ್ಲಿ ಹಾಕಿದ ಬಂಡವಾಳ ವಾಪಸ್ ಬರಲಿದೆಯೇ? ಎಂಬ ಪ್ರಶ್ನೆಗಳೂ ಅಧಿಕಾರಶಾಹಿಯಿಂದ ಎದುರಾಗಿದ್ದವು. ಅರಣ್ಯ, ವನ್ಯಜೀವಿ ವಲಯ, ಪರಿಸರ ಸೂಕ್ಷ್ಮ ಪ್ರದೇಶದ ಅಡಚಣೆ ನಿವಾರಣೆಯ ಜೊತೆಗೆ ದೊಡ್ಡಮಟ್ಟದ ಹಣಕಾಸಿನ ಬೆಂಬಲವೂ ಬೇಕಿತ್ತು. ಈ ಹೊತ್ತಿನಲ್ಲಿ ಬೆನ್ನಿಗೆ ನಿಂತವರು ಆಗ ಮುಖ್ಯಮಂತ್ರಿ ಆಗಿದ್ದ ಬಿ.ಎಸ್.ಯಡಿಯೂರಪ್ಪ. ಅವರು ತೋರಿದ ರಾಜಕೀಯ ಇಚ್ಛಾಶಕ್ತಿ ಫಲವಾಗಿ ಸೇತುವೆಯ ವಿಷಯ ಬಜೆಟ್‌ನಲ್ಲಿ ಸೇರ್ಪಡೆಗೊಂಡು ₹100 ಕೋಟಿ ಮೀಸಲಿಟ್ಟಿದ್ದರು ಎಂದು ಸುಬ್ಬರಾವ್ ಸ್ಮರಿಸುತ್ತಾರೆ.

ಕರೂರು–ಬಾರಂಗಿ ಹೋಬಳಿಯಲ್ಲಿರುವವರಲ್ಲಿ ಹೆಚ್ಚಿನವರು ಶರಾವತಿ ಯೋಜನೆ ಸಂತ್ರಸ್ತರು. ಅವರ ತ್ಯಾಗಕ್ಕೆ ಬೆಲೆ ಕೊಟ್ಟು, ಸಾಮಾಜಿಕ ನ್ಯಾಯಕ್ಕೆ ಮನ್ನಣೆ ಕೊಡಬೇಕೇ ಹೊರತು ಅಲ್ಲಿಂದ ಲಾಭ ನಿರೀಕ್ಷೆ ಬೇಡ ಎಂದು ಅಧಿಕಾರಶಾಹಿಗೆ ಯಡಿಯೂರಪ್ಪ ಕಿವಿಮಾತು ಹೇಳಿದರು. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಇಲ್ಲಿನ ಸಂಗತಿಗಳ ಮನದಟ್ಟು ಮಾಡಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಕೆ ಆಗಿ ಜಿಲ್ಲಾ ಮುಖ್ಯರಸ್ತೆ ಆಗಿದ್ದ ಸಾಗರ–ಮರಕುಟಿಕ ರಸ್ತೆ, ರಾಷ್ಟ್ರೀಯ ಹೆದ್ದಾರಿ 369E ಆಗಿ ಮೇಲ್ದರ್ಜೆಗೇರಿತು. ಸಂಚಾರ ದಟ್ಟಣೆ ಸೇರಿದಂತೆ ಅಗತ್ಯ ಮಾನದಂಡಗಳೇನೂ ಇಲ್ಲದ ರಸ್ತೆಯೊಂದು ಏಕಾಏಕಿ ಇಷ್ಟೊಂದು ದೊಡ್ಡ ಸ್ಥಾನಮಾನ ಪಡೆದದ್ದು ದೇಶದ ಇತಿಹಾಸದಲ್ಲಿಯೇ ವಿರಳಾತಿ ವಿರಳ.

'ಸೇತುವೆ ಆಗಿರೋದರಿಂದ ತುಂಬಾ ಅನುಕೂಲವಾಗಿದೆ. ಬೇಕಾದ ವಸ್ತುಗಳನ್ನು ನಾವೇ ತಂದುಕೊಳ್ಳಬಹುದು. ಇಲ್ಲಿಯವರೆಗೂ ಹಿನ್ನೀರು ದಾಟಬೇಕೆಂದರೆ ಲಾಂಚ್‌ನ ಸಮಯಕ್ಕೆ ಹೋಗಬೇಕಿತ್ತು. ಇನ್ನು ನಮ್ಮ ಬದುಕಿನ ಅಗತ್ಯಕ್ಕೆ ಸಮಯವನ್ನು ಹೊಂದಿಸಿಕೊಳ್ಳಲಿದ್ದೇವೆ. ಟೈಲರಿಂಗ್ ವೃತ್ತಿ ನನ್ನದು. ಹಿಂದೆ ವಿದ್ಯುತ್ ಸಂಪರ್ಕ ಇರಲಿಲ್ಲ. ಆ ದಿನಗಳಲ್ಲಿ ದೀಪದ ಬೆಳಕಲ್ಲಿ ಬಟ್ಟೆ ಹೊಲಿದಿದ್ದೇನೆ. ದ್ವೀಪಕ್ಕೆ ಮೊದಲ ಬಾರಿಗೆ ಕರೆಂಟ್ ಬಂದಾಗ ಬೆಳಕು ಕಂಡು ಖುಷಿ ಪಟ್ಟಿದ್ದೆ. ಈಗ ಸೇತುವೆ ಆಗಿರುವುದಕ್ಕೂ ಅಷ್ಟೇ ಖುಷಿ ಆಗಿದೆ' ಎಂದು ತುಮರಿಯ ಎಚ್.ವಿ.ಶಾರದಮ್ಮ ನಿರಾಳತೆ ಭಾವವನ್ನು ವ್ಯಕ್ತಪಡಿಸಿದರು.

ಒಂದು ಸೇತುವೆಯು 'ದ್ವೀಪ'ದಂತೆ ಬದುಕಿದ್ದ ಸಾವಿರಾರು ಜೀವಗಳಿಗೆ ಬಿಡುಗಡೆಯ ಅನುಭವವನ್ನು ನೀಡುತ್ತಿದೆ. ಹೊರಗಿನ ಪ್ರಪಂಚದೊಂದಿಗೆ ಸಂಪರ್ಕವನ್ನು ಬೆಸೆಯುತ್ತಿದೆ. ಎಂಟು ದಶಕಗಳ ಬಂಧನ, ಯಾತನೆಗೆ ಕೊನೆಗಾಣಿಸುತ್ತಿದೆ. ಇಲ್ಲಿನ ಜನರ ಬದುಕು ಇನ್ನು ಮುಂದೆ ಮುಕ್ತ...ಮುಕ್ತ...ಮುಕ್ತ...



ಸೇತುವೆ ನಿರ್ಮಾಣಕ್ಕೆ ಆಗ್ರಹಿಸಿ ದ್ವೀಪದಲ್ಲಿ ನಡೆದಿದ್ದ ಹಕ್ಕೊತ್ತಾಯದ ನೋಟ

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಗಣಿತದಲ್ಲಿ ಗರ್ದಿ ಗಮ್ಮತ್ತು

ಶಂಕರಗೌಡರಿಗೆ ಇಬ್ಬರು ಮೊಮ್ಮಕ್ಕಳು. ಒಬ್ಬ ಅಭಿನವ, ಇನ್ನೊಬ್ಬ ಚಿನ್ಮಯ. ಗೌಡರು ದಿನಾಲೂ ಆಫೀಸ್‌ನಿಂದ ಬರುವಾಗ ಮೊಮ್ಮಕ್ಕಳಿಗೆ ಚಾಕೊಲೇಟ್ ತಂದು ಕೊಡುತ್ತಿದ್ದರು. ಒಂದು ದಿನ ಇಬ್ಬರಿಗೂ ಚಾಕೊಲೇಟ್ ತಂದುಕೊಟ್ಟರು. ಇಬ್ಬರು ಎಣಿಸಿಕೊಂಡರು. ಅಭಿನವ ಹೇಳಿದ, ಇನ್ನೊಂದು ಚಾಕಲೇಟ್ ಬಂದಿದ್ದರೆ ಇಬ್ಬರಿಗೂ ಸಮವಾದ ಚಾಕೊಲೇಟ್ ಸಿಗುತ್ತಿತ್ತು. ಅದಕ್ಕೆ ಚಿನ್ಮಯ ಹೇಳಿದ, ನನಗೂ ಇನ್ನೊಂದು ಚಾಕೊಲೇಟ್ ಸಿಕ್ಕದರೆ ನಿನಗಿಂತ ದುಪ್ಪಟ್ಟು ಚಾಕೊಲೇಟ್ ಇರುತ್ತಿತ್ತು. ಹಾಗಿದ್ದರೆ ಇಬ್ಬರಿಗೂ ಬಂದ ಚಾಕೊಲೇಟ್‌ಗಳು ಎಷ್ಟೆಷ್ಟು?

ಮೋಜಿನ ಇಂಗ್ಲಿಷ್

Xಟ್ರಾ ವರ್ಡ್ಸ್


ನೀವು X ಅಕ್ಷರದಿಂದ ಕೊನೆಗೊಳ್ಳುವ ಹತ್ತು ಪದಗಳನ್ನು ಪಟ್ಟಿ ಮಾಡಿರಿ.

1		X
2		X
3		X
4		X
5		X
6		X
7		X
8		X
9		X
10		X

ಬಗೆಹರಿಯದ ಕಸದ ಸಮಸ್ಯೆ!

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡನ ಮನೆಯ ಕಂಪೌಂಡ್ ಹೊರಗಡೆ ಜನ ಕಸ ತಂದು ಸುರಿಯುತ್ತಿದ್ದರು. ಇದನ್ನು ಕಂಡ ಗುಂಡ 'ಇಲ್ಲಿ ಕಸ ಹಾಕಬಾರದು' ಎನ್ನುವ ಬೋರ್ಡ್ ಬರೆದು ಕಸವಿರುವ ಜಾಗದಲ್ಲಿ ಇಟ್ಟ. ಇನ್ಯಾರೂ ಕಸ ಹಾಕಲಾರರು ಎನ್ನುತ್ತಾ ಮನೆಯತ್ತ ಹೆಜ್ಜೆ ಹಾಕಿದ. ಒಂದೆರಡು ದಿನಗಳ ಬಳಿಕ ಬಂದು ನೋಡಿದಾಗ ಜನ ಬೋರ್ಡ್ ಇಟ್ಟಿರುವ ಜಾಗವನ್ನು ಬಿಟ್ಟು ಸುತ್ತಲೂ ಕಸ ಹಾಕಿದ್ದರು. ಇದನ್ನು ಕಂಡ ಗುಂಡ ಕಕ್ಕಾಬಿಕ್ಕಿಯಾದ!



ಹೊಂದಿಸು ಆನಂದಿಸು

ಇಲ್ಲಿ ಕೊಟ್ಟಿರುವ ಎಡಭಾಗದ ಜೀವಿಗಳ ಗುಣ ಸ್ವಭಾವಕ್ಕೆ ತಕ್ಕಂತೆ ಜನರು ಆಡುವ ಪದಗಳನ್ನು ಹೊಂದಿಸಿ.

1	ಕತ್ತೆ	A	ಸ್ವಭಾವ
2	ಕರಡಿ	B	ದ್ವೇಷ
3	ಆಮೆ	C	ಚರ್ಮ
4	ಆಕಳು	D	ನಿಷ್ಠೆ
5	ಹಾವು	E	ಭಾರ
6	ಎಮ್ಮೆ	F	ನಡಿಗೆ
7	ನಾಯಿ	G	ಕುಣಿತ
8	ನರಿ	H	ಚೇಷ್ಟೆ
9	ಕೋತಿ	I	ಬಲ
10	ಆನೆ	J	ಬುದ್ಧಿ

ಉತ್ತರಗಳು:

1	
2	
3	
4	
5	
6	
7	
8	
9	
10	

ಅಪರೂಪದ ಪದ

ಈ ವಿಶೇಷ ಪದವನ್ನು ಎಡದಿಂದಾದರೂ ಓದಿ, ಬಲದಿಂದಾದರೂ ಓದಿ... ▶ **ದುಡಿದುಡಿದು**

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಮಾಸ	+	ಸುರಿ	+	ರು	=	
2	ಕಣ	+	ಸುರಿ	+	ಮೆ	=	
3	ನಾಕ	+	ನಗು	+	ರು	=	
4	ಕಲೆ	+	ಬೇಡ	+	ಳೆ	=	
5	ಹುಳಿ	+	ಕಾರು	+	ಳು	=	

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಲಘುಆಹಾರ 2.ಮಳೆಕೊರತೆ 3.ಸಾವಿರಕೋಟಿ 4.ಜನಸಾಗರ 5.ಗಾರುಡಿಆಟ

ಅಕ್ಷರ ಆಟ: 1.ಕಡಲು 2.ಕಡವೆ 3.ಕಡತ 4.ಕಡಗ 5.ಕಡಲೆ 6.ಕವಚ 7.ಕವನ 8.ಕವಡೆ 9.ಕವಣೆ 10.ಕವಲು

ಸಿನಿಸ್ವಾರಸ್ಯ: ಸಕಲೇಶಪುರ

ಮೋಜಿನ ಇಂಗ್ಲಿಷ್: 1.MAN-MAD 2.SAY-SAD 3.BAD-BAN 4.CAN-CAR 5.DID-DIM 6.FAN-FAX 7.GET-GEM 8.HAD-HAT 9.KID-KIT 10.MIX-MID

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಊಮಿಕಾ ಬಾತಿ, ಬಾಗಲಕೋಟೆ
ಸಿಂಚನ ಆರ್., ಬೆಂಗಳೂರು
ಪ್ರಯಾಗ್ ಬಿ., ಕೋಲಾರ
ಅರ್ಜುನ್ ಶಂಕರ್, ಬೆಂಗಳೂರು
ಆವಿಶ್ ಕೆ., ಶಿವಮೊಗ್ಗ
ಅನನ್ಯ ವಿ., ಮಲ್ಲೇಶ್ವರ



ಭಾರತ ಮತ್ತು ಚೀನಾ ಗಡಿಯಲ್ಲಿರುವ ನಾಥು ಲಾ ಪ್ರದೇಶ


ಚಾಂಗು ಸರೋವರದ ನೋಟ

ಸಿಕ್ಕಿಂ ರಾಜ್ಯದಲ್ಲಿರುವ ನಾಥು ಲಾ ಅತ್ಯಂತ ಸುಂದರವಾದ ಪರ್ವತ ಶ್ರೇಣಿಯನ್ನು ಹೊಂದಿದೆ. ಈ ಭಾಗಕ್ಕೆ ಪ್ರವಾಸ ಮಾಡುವುದು ಮನಸ್ಸಿಗೆ ಮುದ ನೀಡುತ್ತದೆ. ಇಲ್ಲಿಗೆ ಭೇಟಿ ನೀಡಿದ ಲೇಖಕರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

ಭಾರತ-ಚೀನಾ ಗಡಿಯ ನಾಥು ಲಾ

• ಜಿ.ನಾಗೇಂದ್ರಕಾವೂರು

ಸಿಕ್ಕಿಂ ರಾಜ್ಯವು ಹಿಮಾಲಯದ ನಯನ ಮನೋಹರ ಪ್ರಕೃತಿಗೆ ಹೆಸರಾಗಿದೆ. ಆಕಾಶವನ್ನು ಚುಂಬಿಸುತ್ತಿರುವಂತೆ ಕಾಣುವ ಹಿಮದಿಂದ ಆವೃತವಾಗಿರುವ ಪರ್ವತಗಳು, ಮೋಡಿ ಮಾಡುವ ಭೂದೃಶ್ಯಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಸಿಕ್ಕಿಂನಲ್ಲಿ ಹಲವಾರು ಪ್ರವಾಸಿ ಆಕರ್ಷಣೆಗಳಿವೆ. ಅವುಗಳಲ್ಲಿ ರಾಜಧಾನಿ ಗ್ಯಾಂಗ್‌ಟಾಕ್‌ನಿಂದ ಸುಮಾರು 53 ಕಿಲೋಮೀಟರ್ ದೂರದಲ್ಲಿರುವ ಭಾರತ-ಚೀನಾ ನಡುವಿನ ಮೂರು ಮುಕ್ತ ವ್ಯಾಪಾರ ಗಡಿ ಪೋಸ್ಟ್‌ಗಳಲ್ಲಿ ಒಂದಾಗಿರುವ 'ನಾಥು ಲಾ' ಅತ್ಯಂತ ಜನಪ್ರಿಯ ಪ್ರವಾಸಿ ತಾಣ.


ನಾಥು ಲಾ ಚೀನಾ ಮತ್ತು ಭಾರತ ನಡುವೆ ವ್ಯಾಪಾರದಲ್ಲಿ ಪ್ರಮುಖ ಪಾತ್ರ ವಹಿಸಿದೆ. ನಾಥು ಲಾ, ಪೂರ್ವ ಸಿಕ್ಕಿಂ ಜಿಲ್ಲೆಯ ಹಿಮಾಲಯ ಪರ್ವತದ ಹಾದಿಯಾಗಿದ್ದು, ಸಿಕ್ಕಿಂ ಮತ್ತು ಚೀನಾದ ಟಿಬೆಟ್ ಸ್ವಾಯತ್ತ ಪ್ರದೇಶವನ್ನು ಸಂಪರ್ಕಿಸುತ್ತದೆ. ಟಿಬೆಟಿಯನ್ ಭಾಷೆಯಲ್ಲಿ 'ನಾಥು' ಎಂದರೆ ಕೇಳುವ ಕಿವಿಗಳು ಮತ್ತು 'ಲಾ' ಎಂದರೆ 'ಪಾಸ್' ಎಂದರ್ಥ. ಪ್ರಮುಖ ಬೌದ್ಧ ಮತ್ತು ಹಿಂದೂ ಯಾತ್ರಾಸ್ಥಳಗಳ ನಡುವಿನ ಅಂತರವನ್ನು ಕಡಿಮೆಗೊಳಿಸುವುದರೊಂದಿಗೆ ಆರ್ಥಿಕತೆಯನ್ನು ಬಲಪಡಿಸಲು ಸಹಕಾರಿಯಾಗಿದೆ. ಮಾನಸ ಸರೋವರ ಯಾತ್ರೆ ಕೈಗೊಳ್ಳಲು ಹಲವು ಮಾರ್ಗಗಳಿವೆ. ಹಿಮಾಲಯದಲ್ಲಿ ಚಾರಣ ನಡೆಸಲು ಸಾಧ್ಯವಾಗದವರು ನಾಥು ಲಾ ತಲುಪಿ ಅಲ್ಲಿಂದ ಚೀನಾ ಸರ್ಕಾರ ಒದಗಿಸುವ ವಾಹನ ಅಥವಾ ಕುದುರೆಗಳನ್ನೇರಿ ಮಾನಸ ಸರೋವರ ತಲುಪಬಹುದು.

ನಾಥು ಲಾ ಸಮೀಪವೇ ಹರ್ಭಜನ್ ಸಿಂಗ್ ದೇವಾಲಯ ಮತ್ತು ಚಾಂಗು ಸರೋವರ ಇರುವುದರಿಂದ ನಾಥು ಲಾ ವೀಕ್ಷಿಸಲು ತೆರಳುವ ಪ್ರವಾಸಿರು ಈ ಎರಡನ್ನೂ ತಪ್ಪದೇ ನೋಡುತ್ತಾರೆ.

ಚಳಿಗಾಲದಲ್ಲಿ ಹಿಮದಿಂದ ಆವೃತವಾಗಿರುವ ಪ್ರಕೃತಿ ವಿಭಿನ್ನ ಅನುಭವ ನೀಡುತ್ತದೆ. ಹೆಚ್ಚಾಗಿ ಪ್ರವಾಸಿಗರು ಚಳಿಗಾಲದಲ್ಲಿ ಗ್ಯಾಂಗ್‌ಟಾಕ್ ಹಾಗೂ ಸುತ್ತಮುತ್ತಲ ಪ್ರದೇಶಗಳಿಗೆ ಭೇಟಿ ನೀಡುತ್ತಾರೆ. ಆದರೂ, ಮೇಘಾಲಯದ ಹಲವು ಪ್ರದೇಶಗಳಲ್ಲಿ ಆರು ದಿನಗಳ ಚಾರಣ ನಡೆಸಿ ಹಿಂದಿರುಗುವ ಸಮಯದಲ್ಲಿ ಸಿಕ್ಕಿಂಗೆ ಭೇಟಿ ನೀಡಲು ನಾವು ನಿರ್ಧರಿಸಿದ್ದೆವು.

ಗ್ಯಾಂಗ್‌ಟಾಕ್‌ನಿಂದ 53 ಕಿಲೋಮೀಟರ್ ದೂರದಲ್ಲಿರುವ 'ನಾಥು ಲಾ'ಗೆ ನಾಲ್ಕು ಮಂದಿ ಹೊರಟೆವು. ಅಲ್ಲಿಗೆ ತಲುಪಲು ಸುಮಾರು 2 ರಿಂದ 3 ಗಂಟೆಗಳು ಹಿಡಿಯಿತು. ಪ್ರಯಾಣದ ಉದ್ದಕ್ಕೂ ಹಿಮಾಲಯ ಶ್ರೇಣಿಯ ರುದ್ರ ರಮಣೀಯ ದೃಶ್ಯಗಳು ಅನನ್ಯ ಅನುಭೂತಿ ನೀಡಿದವು. ಗ್ಯಾಂಗ್‌ಟಾಕ್‌ನಿಂದ ಹತ್ತು ಕಿಲೋಮೀಟರ್ ದೂರದಲ್ಲಿರುವ ಚೆಕ್‌ಪೋಸ್ಟ್‌ನಲ್ಲಿ ಚಾಂಗು ಸರೋವರ ವೀಕ್ಷಿಸಲು ಟಿಕೆಟ್ ಖರೀದಿಸಿದೆವು. ರಸ್ತೆ ಬದಿಯಲ್ಲಿ ಎತ್ತರಕ್ಕೆ ಬೆಳೆದು ನಿಂತಿರುವ ಕೋನಿಫೆರಸ್ ಮರಗಳು, ಪರ್ವತದ ಸಾಲುಗಳನ್ನು ಚುಂಬಿಸುತ್ತಿದ್ದ ಮೋಡಗಳು ಮಂತ್ರಮುಗ್ಧರನ್ನಾಗಿಸಿದವು. ನಮ್ಮ ಡ್ರೈವರ್ ಹೇಳಿದ ಹಾಗೆ ಒಂದೆರಡು ನಿಮಿಷಗಳಲ್ಲೇ ವಾತಾವರಣ ಬದಲಾಗುತ್ತಿತ್ತು. ಮೋಡಗಳು ಕೆಲವೇ ಸೆಕೆಂಡ್‌ಗಳಲ್ಲಿ ಚದುರಿಹೋಗುತ್ತಿದ್ದವು. ಮಾರ್ಗ ಮಧ್ಯೆ ಸಿಗುವ ವ್ಯೂ ಪಾಯಿಂಟ್‌ನಿಂದ ಕಾಣುವ ಕಾಂಚನ ಗಂಗಾ ಪರ್ವತದ ಸುಂದರ ನೋಟವನ್ನು ಕಣ್ತುಂಬಿಕೊಂಡೆವು. ನಾಥು ಲಾ ಐದು ಕಿಲೋಮೀಟರ್ ದೂರವಿರುವಾಗ ಮತ್ತೊಂದು ಚೆಕ್ ಪೋಸ್ಟ್ ಎದುರಾಯಿತು. ಇಲ್ಲಿ ಅನುಮತಿ ಪತ್ರಗಳನ್ನು ಪರಿಶೀಲಿಸಿದರು. ನಾಥು ಲಾಗೆ ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡಲಾಗಿರುವ ವಾಹನಗಳನ್ನು ಹೊರತು ಪಡಿಸಿದರೆ, ಇತರೆ ಯಾವುದೇ ವಾಹನಗಳನ್ನು ಒಳಗೆ ಬಿಡುವುದಿಲ್ಲ. ನಾವೆಲ್ಲರೂ ನಿಗದಿತ ವಾಹನಗಳಲ್ಲಿ ತೆರಳಿದೆವು.

ಬೇಲಿಯಿಂದ ಸುತ್ತುವರೆದಿರುವ ಇಂಡೋ-ಚೀನಾ ಗಡಿಯನ್ನು ತಲುಪಲು ಮೆಟ್ಟಿಲುಗಳನ್ನೇರಿ ಹೋಗಬೇಕು. ಎರಡೂ ಕಡೆಗಳಲ್ಲಿ ಆಯಾ ದೇಶಗಳ ಸೈನಿಕರು ಕಾವಲು ಕಾಯುತ್ತಿರುತ್ತಾರೆ. ಇಲ್ಲಿ ಇಂಡೋ-ಚೀನಾ ಯುದ್ಧದಲ್ಲಿ ವೀರ ಮರಣವನ್ನಪ್ಪಿದ ಸೈನಿಕರಿಗಾಗಿ ಸ್ಮಾರಕ ಮತ್ತು ಭಾರತೀಯ ಸೈನ್ಯದ ವಸ್ತುಪ್ರದರ್ಶನ ಕೇಂದ್ರವಿದೆ. ಸ್ಮಾರಕವು ಸೈನಿಕರ ಹೆಸರು, ಹುದ್ದೆ, ಹುತಾತ್ಮರಾದ ದಿನಾಂಕ ಮತ್ತು ಪಾಲ್ಗೊಂಡಿದ್ದ ಯುದ್ಧ ಮೊದಲಾದ ವಿವರಗಳನ್ನು ಒಳಗೊಂಡಿದ್ದು, ಸೈನಿಕರ ಶೌರ್ಯ ಮತ್ತು ತ್ಯಾಗದ ಐತಿಹಾಸಿಕ ದಾಖಲೆಗಳಾಗಿವೆ.


'ನಾಥು ಲಾ'ದಲ್ಲಿರುವ ಬುದ್ಧನ ಪ್ರತಿಮೆ

'ನಾಥು ಲಾ'ದಿಂದ 17 ಕಿಲೋಮೀಟರ್ ದೂರದಲ್ಲಿ ನೀರ್ಗಲ್ಲಿನ ಸರೋವರ 'ಚಾಂಗು' ಪ್ರವಾಸಿಗರನ್ನು ಸೆಳೆಯುತ್ತದೆ. ಕಡಿದಾದ ಪರ್ವತಗಳಿಂದ ಆವೃತವಾಗಿರುವ ಚಾಂಗು ಸರೋವರವನ್ನು ಪವಿತ್ರವೆಂದು ಪರಿಗಣಿಸಲಾಗಿದ್ದು, ಋತುಗಳಿಗೆ ಅನುಗುಣವಾಗಿ ಬಣ್ಣ ಬದಲಾಯಿಸುತ್ತದೆ. ಚಳಿಗಾಲದಲ್ಲಿ ಹೆಪ್ಪುಗಟ್ಟುವ ಸರೋವರದಲ್ಲಿ ಆಯೋಜಿಸಲಾಗುವ ಸ್ಕೇಟಿಂಗ್ ಮತ್ತು ಸ್ನೋಬಾಲ್ ಪಂದ್ಯಗಳು ಪ್ರವಾಸಿಗರನ್ನು ಹೆಚ್ಚಾಗಿ ಆಕರ್ಷಿಸುತ್ತವೆ. ಹಿಮಾಲಯದಲ್ಲಿ ಮಾತ್ರ ಕಾಣಸಿಗುವ 'ಯಾಕ್' ಪ್ರಾಣಿಗಳನ್ನು ಸುಂದರವಾಗಿ ಅಲಂಕರಿಸಿರುತ್ತಾರೆ. ಚಾಂಗು ಸರೋವರವನ್ನು ವೀಕ್ಷಿಸಲು ಬರುವ ಪ್ರವಾಸಿಗರು 'ಯಾಕ್' ಸವಾರಿ ಮಾಡಿ ಫೋಟೊ ಕ್ಲಿಕ್ಕಿಸಿಕೊಳ್ಳಲು ಮರೆಯುವುದಿಲ್ಲ.

'ನಾಥು ಲಾ'ಗೆ ಹೋಗಲು ಭಾರತೀಯ ಪ್ರಜೆಗಳು ಮಾತ್ರ ಅರ್ಹರಾಗಿರುತ್ತಾರೆ. ಗ್ಯಾಂಗ್‌ಟಾಕ್‌ನಲ್ಲಿರುವ ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನಯಾನ ಇಲಾಖೆಗೆ 'ನಾಥು ಲಾ'ಗೆ ಪ್ರವೇಶಿಸುವ ಒಂದು ದಿನ ಮುಂಚಿತವಾಗಿ ಅರ್ಜಿ ಸಲ್ಲಿಸಿ ಅನುಮತಿ ಪತ್ರವನ್ನು ಪಡೆದುಕೊಳ್ಳಬೇಕು. ಸಿಕ್ಕಿಂ ಸರ್ಕಾರದ ಅಧಿಕೃತ ವಾಹನಗಳಲ್ಲಿ ಮಾತ್ರ ಇಲ್ಲಿಗೆ ಭೇಟಿ ನೀಡಬಹುದು. ನಾಥು ಲಾ 14,140 ಅಡಿ ಎತ್ತರದಲ್ಲಿದೆ. ಆದ್ದರಿಂದ ಆಮ್ಲಜನಕದ ಕೊರತೆ ಕಾಣಿಸಿಕೊಳ್ಳುತ್ತದೆ. ಹೀಗಾಗಿ ಉಸಿರಾಟದ ತೊಂದರೆಯಿಂದ ಕುಸಿದು ಬೀಳುವ ಸಾಧ್ಯತೆಗಳಿವೆ. ದೀರ್ಘವಾಗಿ ಉಸಿರಾಡುವುದರಿಂದ ಕುಸಿದು ಬೀಳುವುದರಿಂದ ತಪ್ಪಿಸಿಕೊಳ್ಳಬಹುದು. ಸೋಮವಾರ ಮತ್ತು ಮಂಗಳವಾರ ಹೊರತುಪಡಿಸಿ ಇತರೆ ದಿನಗಳಲ್ಲಿ ನಾಥು ಲಾ ವೀಕ್ಷಿಸಲು ಬೆಳಿಗ್ಗೆ 8 ರಿಂದ ಮಧ್ಯಾಹ್ನ 3ರ ವರೆಗೆ ಮಾತ್ರ ಅನುಮತಿ ನೀಡುತ್ತಾರೆ. ಹಾಗಾಗಿ ಪ್ರವಾಸಿಗರು ಮೊದಲು ನಾಥು ಲಾ ವೀಕ್ಷಿಸಿ ನಂತರ ಹರ್ಭಜನ್ ಸಿಂಗ್ ದೇವಾಲಯ ಮತ್ತು ಚಾಂಗು ಲೇಕ್‌ಗಳನ್ನು ವೀಕ್ಷಿಸುತ್ತಾರೆ.


ಹರ್ಭಜನ್ ಸಿಂಗ್ ದೇವಾಲಯ


ಹಿಮದಿಂದ ಆವೃತವಾದಾಗ ನಾಥು ಲಾ ಹೀಗೆ ಕಾಣುತ್ತದೆ...

1.38 ಕೋಟಿ ಪ್ರಯಾಣಿಕರ ಸಂಚಾರ

ದೇಶೀಯ ವಿಮಾನ ಪ್ರಯಾಣಿಕರ ಸಂಚಾರ ಜೂನ್‌ನಲ್ಲಿ ಶೇ 5ರಷ್ಟು ಏರಿಕೆ



ನವದೆಹಲಿ (ಪಿಟಿಐ): ದೇಶೀಯ ವಿಮಾನ ಮಾರ್ಗದಲ್ಲಿ 1.38 ಕೋಟಿಗೂ ಹೆಚ್ಚು ಪ್ರಯಾಣಿಕರು ಜೂನ್ ತಿಂಗಳಿನಲ್ಲಿ ಸಂಚರಿಸಿದ್ದಾರೆ.

2024ರ ಜೂನ್‌ನಲ್ಲಿ 1.32 ಕೋಟಿ ಪ್ರಯಾಣಿಕರು ಸಂಚಾರ ಮಾಡಿದ್ದರು. ಇದಕ್ಕೆ ಹೋಲಿಸಿದರೆ ಶೇ 5.1ರಷ್ಟು ಏರಿಕೆಯಾಗಿದೆ. ಆದರೆ, ಇದೇ ವರ್ಷದ ಮೇ ತಿಂಗಳಿಗೆ ಹೋಲಿಸಿದರೆ ಶೇ 2.3ರಷ್ಟು ಇಳಿಕೆಯಾಗಿದೆ ಎಂದು ಕ್ರೆಡಿಟ್ ರೇಟಿಂಗ್ ಏಜೆನ್ಸಿ ಐಸಿಆರ್‌ಎ ತಿಳಿಸಿದೆ.

ಹೆಚ್ಚುತ್ತಿರುವ ವಿಮಾನ ಇಂಧನ ದರ (ಎಟಿಎಫ್) ಮತ್ತು ಜಾಗತಿಕ ರಾಜಕೀಯ ಬಿಕ್ಕಟ್ಟಿನಿಂದಾಗಿ ದೇಶದ ವಿಮಾನಯಾನ ಉದ್ಯಮವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹2 ಸಾವಿರ ಕೋಟಿಯಿಂದ ₹3 ಸಾವಿರ ಕೋಟಿಯಷ್ಟು ನಷ್ಟ ಕಾಣುವ ಸಾಧ್ಯತೆಯಿದೆ ಎಂದು ಅಂದಾಜಿಸಿದೆ.

ಪ್ರಾಟ್ ಆ್ಯಂಡ್ ವಿಟ್ನಿಯ ಎಂಜಿನ್ ಪೂರೈಕೆಯಲ್ಲಿ ಅಡಚಣೆ ಉಂಟಾಗಿದೆ. ಇದು ಉದ್ಯಮದ ಸಾಮರ್ಥ್ಯ ಮತ್ತು ವೆಚ್ಚದ ಮೇಲೆ ಪರಿಣಾಮ ಬೀರುತ್ತಿದೆ ಎಂದು ತಿಳಿಸಿದೆ.

2025–26ರ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ದೇಶೀಯ ವಿಮಾನ ಮಾರ್ಗದಲ್ಲಿ 4.22 ಕೋಟಿಗೂ ಹೆಚ್ಚು ಪ್ರಯಾಣಿಕರು ಸಂಚಾರ ಮಾಡಿದ್ದಾರೆ. 2024–25ರ ಆರ್ಥಿಕ ವರ್ಷದಲ್ಲಿ ಪ್ರಯಾಣಿಕರ ಸಂಚಾರದ ಬೆಳವಣಿಗೆ ಶೇ 7.6ರಷ್ಟಿತ್ತು.

ಜಾಗತಿಕ ರಾಜಕೀಯ ಬಿಕ್ಕಟ್ಟು, ಇಸ್ರೇಲ್–ಇರಾನ್ ಸಂಘರ್ಷದಿಂದ ಕಚ್ಚಾ ತೈಲ ಬೆಲೆ ಏರಿಕೆ, ಇರಾನ್ ಮತ್ತು ಪಾಕಿಸ್ತಾನ ತಮ್ಮ ವಾಯು ಪ್ರದೇಶದಲ್ಲಿ ವಿಮಾನ ಹಾರಾಟವನ್ನು ನಿರ್ಬಂಧಿಸಿದ್ದು, ಇತ್ತೀಚೆಗೆ ನಡೆದ ವಿಮಾನ ದುರಂತದ ಬಳಿಕ ವಿಮಾ ಕಂತು ಹೆಚ್ಚಳ ಸಾಧ್ಯತೆ ಮತ್ತು ಪ್ರಯಾಣಿಕರು ತಮ್ಮ ಪ್ರಯಾಣವನ್ನು ಮುಂದೂಡುತ್ತಿರುವುದು ವಲಯಕ್ಕೆ ಸವಾಲಾಗಿದೆ.

ಭಾರತ ಮತ್ತು ಪಾಕಿಸ್ತಾನದ ಸಂಘರ್ಷದ ನಂತರ ವಿಮಾನ ಹಾರಾಟದ ರದ್ದತಿ ಮತ್ತು ಕಾರ್ಯಾಚರಣೆಯಲ್ಲಿನ ಸಮಸ್ಯೆಗಳಿಂದ ದೇಶದ ವಿಮಾನಯಾನ ಉದ್ಯಮದ ನಿರ್ವಹಣಾ ವೆಚ್ಚ ಕೆಲ ತಿಂಗಳಿನಿಂದ ಹೆಚ್ಚುತ್ತಿದೆ. ಆದರೂ ಇಲ್ಲಿಯವರೆಗೆ ಪ್ರಯಾಣಿಕರ ಸಂಚಾರ ಮತ್ತು ದರ ಸ್ಥಿರವಾಗಿದೆ ಎಂದು ತಿಳಿಸಿದೆ.

ಮುಖ್ಯಾಂಶಗಳು

- 2025–26ರಲ್ಲಿ ಉದ್ಯಮ ₹3 ಸಾವಿರ ಕೋಟಿ ನಷ್ಟ ಕಾಣುವ ಸಾಧ್ಯತೆ
- ಮೊದಲ ತ್ರೈಮಾಸಿಕದಲ್ಲಿ 4.22 ಕೋಟಿ ಪ್ರಯಾಣಿಕರ ಸಂಚಾರ
- ಮೇ 30ಗಳಿಗೆ ಹೋಲಿಸಿದರೆ ಜೂನ್‌ನಲ್ಲಿ ಶೇ 2.3ರಷ್ಟು ಇಳಿಕೆ

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100ಕ್ಕೆ	₹580
12ಕ್ಕೆ	₹80
ಮೈಸೂರು: 100ಕ್ಕೆ	₹590

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹247-568
ದ್ವಿತಳಿ (ಬಿ.ವಿ)	₹350-726

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹203
ಆರ್‌ಎಸ್‌ಎಸ್-5	₹197
ಗುಡ್ ಲಾಟ್	₹183

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1430 (1430)
ಸೋಯಾ (ರಿಫೈನ್ಡ್)	₹1205 (1200)
ಸೂರ್ಯಕಾಂತಿ (ರಿಫೈನ್ಡ್)	₹1355 (1350)
ಪಾಮೋಲಿನ್	₹1190 (1185)

ವಿದೇಶಿ ವಿನಿಮಯ ಸಂಗ್ರಹ ಇಳಿಕೆ

ಮುಂಬೈ (ಪಿಟಿಐ): ಜುಲೈ 4ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹ ಪ್ರಮಾಣ ₹26,177 ಕೋಟಿಯಷ್ಟು ಕಡಿಮೆಯಾಗಿದೆ. ಒಟ್ಟು ಮೀಸಲು ಸಂಗ್ರಹ ₹60.07 ಲಕ್ಷ ಕೋಟಿಗೆ ಇಳಿದಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಮೀಸಲು ಸಂಗ್ರಹ ₹60.51 ಲಕ್ಷ ಕೋಟಿಯಷ್ಟಾಗಿತ್ತು. ಇದು ಇದುವರೆಗಿನ ಸಾರ್ವಕಾಲಿಕ ಗರಿಷ್ಠ ಮಟ್ಟವಾಗಿದೆ.

ವಿದೇಶಿ ಕರೆನ್ಸಿ ಸಂಗ್ರಹವು ₹30,367 ಕೋಟಿ ಕಡಿಮೆಯಾಗಿದ್ದು, ₹50.76 ಲಕ್ಷ ಕೋಟಿಯಾಗಿದೆ.

ಚಿನ್ನದ ಮೀಸಲು ಸಂಗ್ರಹವು ₹7.28 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹334 ಕೋಟಿಯಷ್ಟು ಏರಿಕೆಯಾಗಿದ್ದು, ₹1.61 ಲಕ್ಷ ಕೋಟಿಯಾಗಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹40,652 ಕೋಟಿಯಾಗಿದೆ ಎಂದು ತಿಳಿಸಿದೆ.

ಸುದ್ದಿ 2 ನಿಮಿಷ

ನೇರ ತೆರಿಗೆ ಸಂಗ್ರಹ ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ 1ರಿಂದ ಜುಲೈ 10ರ ವರೆಗೆ ದೇಶದ ನಿವ್ವಳ ನೇರ ತೆರಿಗೆ ಸಂಗ್ರಹವು ₹5.63 ಲಕ್ಷ ಕೋಟಿಯಾಗಿದೆ.

2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹5.70 ಲಕ್ಷ ಕೋಟಿಯಾಗಿತ್ತು. ಇದಕ್ಕೆ ಹೋಲಿಸಿದರೆ ಸಂಗ್ರಹ ಪ್ರಮಾಣವು ಶೇ 1.34ರಷ್ಟು ಇಳಿಕೆಯಾಗಿದೆ. ಹೆಚ್ಚಿದ ಮರುಪಾವತಿಯಿಂದ (ರೀಫಂಡ್) ಸಂಗ್ರಹ ಪ್ರಮಾಣ ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಕಾರ್ಪೊರೇಟ್ ತೆರಿಗೆ ಸಂಗ್ರಹ ₹2.07 ಲಕ್ಷ ಕೋಟಿಯಷ್ಟಿತ್ತು. ಅದು ಈ ಬಾರಿ ₹2 ಲಕ್ಷ ಕೋಟಿಗೆ ಇಳಿದಿದ್ದು, ಶೇ 3.67ರಷ್ಟು ಕಡಿಮೆಯಾಗಿದೆ ಎಂದು ತಿಳಿಸಿದೆ.

ಕಾರ್ಪೊರೇಟ್‌ಯೇತರ ತೆರಿಗೆ ₹3.45 ಲಕ್ಷ ಕೋಟಿಯಾಗಿದೆ. ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ಸಂಗ್ರಹ ₹17,874 ಕೋಟಿಯಾಗಿದೆ. ಮರುಪಾವತಿಯ ಪ್ರಮಾಣದಲ್ಲಿ ಶೇ 38ರಷ್ಟು ಏರಿಕೆಯಾಗಿದ್ದು, ₹1.02 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು, ನೇರ ತೆರಿಗೆ ಮೂಲಕ ₹25.20 ಲಕ್ಷ ಕೋಟಿ ಸಂಗ್ರಹಿಸಲು ಗುರಿ ಹೊಂದಿದೆ. ಇದು ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 12.7ರಷ್ಟು ಹೆಚ್ಚಳ. ಈ ಪೈಕಿ ಜುಲೈ 10ರ ವರೆಗೆ ಶೇ 22.34ರಷ್ಟು ತೆರಿಗೆ ಸಂಗ್ರಹಿಸಿದೆ. ಷೇರು ವಹಿವಾಟು ತೆರಿಗೆ ಮೂಲಕ ₹78 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಸರ್ಕಾರ ಹೊಂದಿದೆ.



₹858 ಕೋಟಿ ಸಾಲ ಪಡೆದ ಐಐಎಫ್‌ಎಲ್ ಹೋಂ ಫೈನಾನ್ಸ್

ನವದೆಹಲಿ (ಪಿಟಿಐ): ಗೃಹ ಸಾಲ ನೀಡಲು ಏಷ್ಯನ್ ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ ನಿಂದ (ಎಐಐಬಿ) ₹858 ಕೋಟಿ ಸಾಲ ಪಡೆದುಕೊಳ್ಳಲಾಗಿದೆ ಎಂದು ಐಐಎಫ್‌ಎಲ್ ಹೋಂ ಫೈನಾನ್ಸ್ ಶನಿವಾರ ತಿಳಿಸಿದೆ.

ಆರ್ಥಿಕವಾಗಿ ಹಿಂದುಳಿದವರು ಮತ್ತು ಕಡಿಮೆ ಆದಾಯ ಹೊಂದಿದವರಿಗೆ ಗೃಹ ಸಾಲ ಕೈಗೆಟುಕುವಂತೆ ಮಾಡಲು ಈ ಪಾಲುದಾರಿಕೆ ಮಾಡಿಕೊಳ್ಳಲಾಗಿದೆ. ಈ ಸಾಲದ ನೆರವಿನಿಂದ ಗ್ರಾಹಕರು ಸ್ವಂತ ಮನೆ ಹೊಂದಬಹುದಾಗಿದೆ ಎಂದು ತಿಳಿಸಿದೆ. ದೇಶದ 18 ರಾಜ್ಯಗಳಲ್ಲಿ 376 ಶಾಖೆಗಳನ್ನು ಐಐಎಫ್‌ಎಲ್ ಹೋಂ ಫೈನಾನ್ಸ್ ಹೊಂದಿದೆ.

ಚಿಟಿಕೆ ಸುದ್ದಿ

ಆರ್‌ಪಿಎಫ್‌ಗೆ ಮೊದಲ ಮಹಿಳಾ ಮಹಾನಿರ್ದೇಶಕಿ

ನವದೆಹಲಿ (ಪಿಟಿಐ): ರೈಲ್ವೆ ಭದ್ರತಾ ಪಡೆಯ (ಆರ್‌ಪಿಎಫ್) ಮಹಾನಿರ್ದೇಶಕರನ್ನಾಗಿ ಹಿರಿಯ ಐಪಿಎಸ್ ಅಧಿಕಾರಿ ಸೋನಾಲಿ ಮಿಶ್ರಾ ಅವರನ್ನು ಕೇಂದ್ರ ಸರ್ಕಾರ ನೇಮಕ ಮಾಡಿದೆ. ಸೋನಾಲಿ ಅವರು ಈ ಹುದ್ದೆಗೆ ಏರುತ್ತಿರುವ ಮೊದಲ ಮಹಿಳಾ ಐಪಿಎಸ್ ಅಧಿಕಾರಿಯಾಗಿದ್ದಾರೆ.

ಸದ್ಯ ಸೋನಾಲಿ ಅವರು ಮಧ್ಯಪ್ರದೇಶ ಪೊಲೀಸ್‌ನಲ್ಲಿ ಹೆಚ್ಚುವರಿ ಮಹಾನಿರ್ದೇಶಕರಾಗಿ (ಆಯ್ಕೆ) ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಮಧ್ಯಪ್ರದೇಶ ಕೇಡರ್‌ನ 1993ರ ಬ್ಯಾಚ್‌ನವರಾಗಿದ್ದಾರೆ.

ತಮ್ಮ ನಿವೃತ್ತಿಯವರೆಗೆ (ಅಕ್ಟೋಬರ್ 31, 2026) ಇವರು ರೈಲ್ವೆ ಭದ್ರತಾ ಪಡೆಯ ಮಹಾನಿರ್ದೇಶಕರಾಗಿ ಕೆಲಸ ಮಾಡಲಿದ್ದಾರೆ. ಈ ಹುದ್ದೆಯಲ್ಲಿ ಸದ್ಯ ಮನೋಜ್ ಯಾದವ್ ಅವರು ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಇದೇ ಜುಲೈ 31ಕ್ಕೆ ನಿವೃತ್ತಿ ಹೊಂದಲಿದ್ದಾರೆ.

ರಜೆ ಮೇಲೆ ತೆರಳುವಂತೆ ಹಸೀನಾ ಪುತ್ರಿ ಸೈಮಾಗೆ ಸೂಚನೆ

ಪ್ರಜಾವಾಣಿ ವಾರ್ತೆ



ನವದೆಹಲಿ: ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ಆಗ್ನೇಯ ಏಷ್ಯಾದ ನಿರ್ದೇಶಕಿ, ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಪುತ್ರಿ ಸೈಮಾ ವಾಝೆದ್ ಅವರನ್ನು ರಜೆಯ ಮೇಲೆ ತೆರಳುವಂತೆ ಡಬ್ಲ್ಯುಎಚ್‌ಒ ಸೂಚಿಸಿದೆ.

ಡಬ್ಲ್ಯುಎಚ್‌ಒದಲ್ಲಿ ಉದ್ಯೋಗ ಪಡೆಯಲು ಶೈಕ್ಷಣಿಕ ಅರ್ಹತೆ ಮತ್ತು ತಾವು ನಡೆಸುವ ಪ್ರತಿಷ್ಠಾನಕ್ಕೆ ಹಣ ಸಂಗ್ರಹಿಸಲು ಅಧಿಕಾರದ ದುರುಪಯೋಗ ಮಾಡಿದ್ದಾರೆ ಎಂದು ಆರೋಪಿಸಿ ಬಾಂಗ್ಲಾದೇಶದ ಭ್ರಷ್ಟಾಚಾರ ನಿಗ್ರಹ ಆಯೋಗವು ಅವರ ವಿರುದ್ಧ ಕೆಲ ತಿಂಗಳ ಹಿಂದೆಯಷ್ಟೆ ಪ್ರಕರಣ ದಾಖಲಿಸಿತ್ತು.

ಸೈಮಾ ಅವರು ಶುಕ್ರವಾರದಿಂದ ರಜೆಯಲ್ಲಿರುವುದಾಗಿ ಡಬ್ಲ್ಯುಎಚ್‌ಒ ಮಹಾ ನಿರ್ದೇಶಕ ಟೆಡ್ರೊಸ್ ಅದನೊಮ್ ಗೆಬ್ರಿಯೆಸಸ್ ಅವರು ಸಿಬ್ಬಂದಿಗೆ ಇ-ಮೇಲ್ ಹಂಚಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

‘ಸೈಮಾ ಅವರು ಪ್ರಸ್ತುತ ರಜೆಯಲ್ಲಿದ್ದಾರೆ. ಈ ಅವಧಿಯಲ್ಲಿ ಕ್ಯಾಥರೀನಾ ಬೊಹ್ಮೆ ಅವರಿಗೆ ಉಸ್ತುವಾರಿ ವಹಿಸಲಾಗಿದೆ’ ಎಂದು ಡಬ್ಲ್ಯುಎಚ್‌ಒ ತಿಳಿಸಿದೆ.

2023ರಲ್ಲಿ ನಡೆದ ಸೈಮಾ ಅವರ ಆಯ್ಕೆ ವೇಳೆ ವಿವಾದ ಏರ್ಪಟ್ಟಿತ್ತು. ಪ್ರಧಾನಿ ಹಸೀನಾ ತಮ್ಮ ಮಗಳಿಗೆ ಡಬ್ಲ್ಯುಎಚ್‌ಒ ಹುದ್ದೆಗಾಗಿ ಪ್ರಧಾನಿ ಕಚೇರಿಯಿಂದ ಲಾಬಿ ಮಾಡಿದ್ದರು ಎಂಬ ಆರೋಪ ಕೇಳಿ ಬಂದಿತ್ತು. ಅದಾಗ್ಯೂ, ಈ ಆರೋಪಕ್ಕೆ ಭಾರತವಾಗಲಿ, ಬಾಂಗ್ಲಾದೇಶವಾಗಲಿ ಪ್ರತಿಕ್ರಿಯಿಸಿರಲಿಲ್ಲ.


ದಾಳಿ: 28 ಪ್ಯಾಲೆಸ್ಟೀನಿಯರ ಸಾವು

ದೀರ್ ಅಲ್-ಬಲಾಹ್ (ಗಾಜಾ ಪಟ್ಟಿ) (ಎಪಿ): ಗಾಜಾಪಟ್ಟಿ ಮೇಲೆ ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ನಾಲ್ವರು ಮಕ್ಕಳು ಸೇರಿ 28 ಜನ ಮೃತಪಟ್ಟಿದ್ದಾರೆ.

ದೀರ್ ಅಲ್-ಬಲಾಹ್ ಮೇಲೆ ದಾಳಿ ನಡೆದಿದ್ದು, ಮಕ್ಕಳು ಸೇರಿ 13 ಮಂದಿ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಆಡಳಿತ ಸುಧಾರಣೆ ಉದ್ದೇಶ: ಟ್ರಂಪ್ ಸರ್ಕಾರದ ಕ್ರಮ

ಅಮೆರಿಕ: 1,300 ನೌಕರರ ವಜಾ



ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): ಅಮೆರಿಕದ ವಿದೇಶಾಂಗ ಇಲಾಖೆಯ 1,300ಕ್ಕೂ ಅಧಿಕ ನೌಕರರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಆಡಳಿತ ಸುಧಾರಣೆ ಭಾಗವಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಈ ಕ್ರಮ ಕೈಗೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಕ್ರಮವು ಅಮೆರಿಕದ ಜಾಗತಿಕ ನಾಯಕತ್ವಕ್ಕೆ ಹಾನಿ ಉಂಟುಮಾಡಲಿದೆ ಎಂದು ಟ್ರಂಪ್ ವಿರೋಧಿಗಳು ಟೀಕಿಸಿದ್ದಾರೆ.

1,107 ನಾಗರಿಕ ಸೇವಾ ಸಿಬ್ಬಂದಿ ಹಾಗೂ 246 ವಿದೇಶಾಂಗ ಇಲಾಖೆಯ ಅಧಿಕಾರಿಗಳಿಗೆ, ಅವರನ್ನು ವಜಾಗೊಳಿಸಿರುವ ಕುರಿತ ನೋಟಿಸ್‌ಗಳನ್ನು ಕಳುಹಿಸಲಾಗಿದೆ ಎಂದು ವಿದೇಶಾಂಗ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನೌಕರರು ಈಗ ಹೊಂದಿದ್ದ ಹುದ್ದೆಗಳನ್ನು ರದ್ದುಗೊಳಿಸಲಾಗಿದ್ದು, ವಾಷಿಂಗ್ಟನ್‌ನಲ್ಲಿರುವ ವಿದೇಶಾಂಗ ಇಲಾಖೆ ಕಚೇರಿಯ ಇ-ಮೇಲ್, ಡ್ರೈವ್‌ಗಳೊಂದಿಗೆ ಸಂಜೆ 5ರ ಹೊತ್ತಿಗೆ ಎಲ್ಲ ಸಂಪರ್ಕಗಳನ್ನು ಕಡಿತಗೊಳಿಸಲಾಗಿದೆ ಎಂದು ಅವರಿಗೆ ಕಳುಹಿಸಿದ ನೋಟಿಸ್‌ನಲ್ಲಿ ತಿಳಿಸಲಾಗಿದೆ ಎಂದು ‘ಅಸೋಸಿಯೇಟೆಡ್ ಪ್ರೆಸ್’ ವರದಿ ಮಾಡಿದೆ.

ಪ್ರತಿಭಟನೆ: ತಮ್ಮ ವಸ್ತುಗಳ ಜೊತೆಗೆ ಡಜನ್‌ಗೂ ಅಧಿಕ ಮಾಜಿ ಸಹೋದ್ಯೋಗಿಗಳು, ರಾಯಭಾರಿಗಳು, ಕಾಂಗ್ರೆಸ್‌ನ ಸದಸ್ಯರ ಜೊತೆಗೆ ಇಲಾಖೆಯ ಕಚೇರಿಯ ಹೊರಭಾಗದಲ್ಲಿ ಪ್ರತಿಭಟಿಸಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರಕ್ಕೆ ಹಣ ಹಿಂದಿರುಗಿಸಲು ಕೊಲಂಬಿಯಾ ವಿ.ವಿ ಸಮ್ಮತಿ?

ನ್ಯೂಯಾರ್ಕ್: ಯೆಹೂದಿ ವಿದ್ಯಾರ್ಥಿಗಳ ಮೇಲಿನ ದೌರ್ಜನ್ಯ ತಡೆಯುವಲ್ಲಿ ವಿಫಲವಾಗಿದೆ ಎಂಬ ಆರೋಪಗಳನ್ನು ಎದುರಿಸುತ್ತಿರುವ ಕೊಲಂಬಿಯಾ ವಿಶ್ವವಿದ್ಯಾಲಯ, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತಕ್ಕೆ ಪರಿಹಾರ ರೂಪದಲ್ಲಿ ಕೋಟ್ಯಂತರ ರೂಪಾಯಿ ಹಿಂದಿರುಗಿಸಲು ಮುಂದಾಗಿದೆ.

ಈ ಸಂಬಂಧ ಶೀಘ್ರವೇ ಸರ್ಕಾರದ ಜೊತೆ ಕೊಲಂಬಿಯಾ ವಿ.ವಿ ಒಪ್ಪಂದ ಮಾಡಿಕೊಳ್ಳಲಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ‘ನ್ಯೂಯಾರ್ಕ್ ಟೈಮ್ಸ್’ ವರದಿ ಮಾಡಿದೆ.

ಹಿಂದಿರುಗಿಸಬೇಕಾದ ಮೊತ್ತವು ಅಂದಾಜು ₹1,700 ಕೋಟಿಗೂ (200 ಮಿಲಿಯನ್ ಡಾಲರ್) ಅಧಿಕವಾಗಬಹುದು ಎಂದು ಅಂದಾಜಿಸಲಾಗಿದೆ.

ವಿಶ್ವವಿದ್ಯಾಲಯದ ಅಧಿಕಾರಿಗಳು ಮುಂದಿನ ವಾರ ಶ್ವೇತಭವನದಲ್ಲಿ ಟ್ರಂಪ್ ಆಪ್ತರನ್ನು ಭೇಟಿ ಮಾಡಿ, ಒಪ್ಪಂದವನ್ನು ಅಂತಿಮಗೊಳಿಸುವ ಸಾಧ್ಯತೆ ಇದೆ ಎಂದು ವರದಿ ಮಾಡಿದೆ. ‘ಸರ್ಕಾರದೊಂದಿಗೆ ಈ ವಿಚಾರಕ್ಕೆ ಸಂಬಂಧಿಸಿ ಸಮಾಲೋಚನೆ ನಡೆಸಲಾಗುತ್ತಿದೆ. ಪರಿಹಾರ ರೂಪದಲ್ಲಿ ಹಣ ಹಿಂದಿರುಗಿಸುವ ಕುರಿತು ಇನ್ನೂ ಯಾವುದೇ ಒಪ್ಪಂದ ಆಗಿಲ್ಲ’ ಎಂದು ವಿಶ್ವವಿದ್ಯಾಲಯ ವಕ್ತಾರ ವರ್ಜಿನಿಯಾ ಲ್ಯಾಮ್ ಅಬ್ರಾಮ್ಸ್ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ) 12-07-2025	
ಜಾವಾ 70/80(ಹೊಸ)	9700-9800
ಜಾವಾ 80/90(ಹೊಸ)	9200-9300
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	8000-8100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1440 (1440)
ಒಂದು ವಾರದ ಡೆಲಿವರಿ	1435 (1435)
ಪಾಮ್ ವಾರದ ಡೆಲಿವರಿ	1188 (1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1265 (1260)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	97,500 (97,200)
ಬೆಳ್ಳಿ ಕೆ.ಜಿಗೆ	1,12,450 (1,10,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೋಲ್ಕತ್ತ: ಕಾಲೇಜಿನಲ್ಲಿ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ

ಕೋಲ್ಕತ್ತ (ಪಿಟಿಐ): ಕೋಲ್ಕತ್ತದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಐಐಎಂ) ವಿದ್ಯಾರ್ಥಿನಿ ಯೊಬ್ಬಳ ಮೇಲೆ ಸಂಸ್ಥೆಯ ಆವರಣದಲ್ಲಿಯೇ ಅತ್ಯಾಚಾರ ನಡೆದಿದೆ.

‘ಕಾಲೇಜಿನ ಹುಡುಗರ ಹಾಸ್ಟೆಲ್‌ನ ಒಳಗೆ ಶುಕ್ರವಾರ ಕೃತ್ಯ ನಡೆದಿದೆ. ಸಂತ್ರಸ್ತೆಯು ನೀಡಿದ ದೂರಿನ ಆಧಾರದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

‘ಕೌನ್ಸಿಲಿಂಗ್ ನೆಪದಲ್ಲಿ ಯುವತಿಯನ್ನು ಹಾಸ್ಟೆಲ್‌ಗೆ ಕರೆಸಿಕೊಳ್ಳಲಾಗಿತ್ತು. ಅಲ್ಲಿ ನೀಡಿದ ಪಾನೀಯ ಕುಡಿದ ಬಳಿಕ ಆಕೆ ಅಸ್ವಸ್ಥಗೊಂಡಿದ್ದರು. ಪ್ರಜ್ಞೆ ಬಂದಾಗ ತನ್ನ ಮೇಲೆ ಅತ್ಯಾಚಾರವಾಗಿರುವ ಬಗ್ಗೆ ಆಕೆಗೆ ಅರಿವಾಗಿರುವುದಾಗಿ ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ’ ಎಂದು ತಿಳಿಸಿದ್ದಾರೆ.

‘ನನ್ನ ಮಗಳು ಆಟೊ ರಿಕ್ಷಾದಿಂದ ಬಿದ್ದು ಪ್ರಜ್ಞೆ ಕಳೆದುಕೊಂಡಿದ್ದಳು. ಅವಳ ಮೇಲೆ ಅತ್ಯಾಚಾರ ನಡೆದಿಲ್ಲ’ ಎಂದು ಸಂತ್ರಸ್ತೆಯ ತಂದೆ ಹೇಳಿಕೆ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿದೇಶಾಂಗ ಸಚಿವರ ಸಭೆ ಚೀನಾಕ್ಕೆ ಜೈಶಂಕರ್ ಭೇಟಿ



ಎಸ್‌.ಜೈಶಂಕರ್

ಬೀಜಿಂಗ್ (ಪಿಟಿಐ): ಚೀನಾದ ತಿಯಾನ್‌ಜಿನ್ ನಗರದಲ್ಲಿ ಜುಲೈ 15ರಂದು ನಡೆಯುವ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ವಿದೇಶಾಂಗ ಸಚಿವ ಎಸ್. ಜೈಶಂಕರ್ ಮುಂದಿನ ವಾರ ಚೀನಾಕ್ಕೆ ಭೇಟಿ ನೀಡಲಿದ್ದಾರೆ.

ವಿದೇಶಾಂಗ ಸಚಿವ ವಾಂಗ್ ಯಿ ಅವರೊಂದಿಗೆ ಜೈಶಂಕರ್ ಅವರು ಜುಲೈ 13ರಂದು ಮಾತುಕತೆ ನಡೆಸುವರು ಎಂದು ಚೀನಾ ವಿದೇಶಾಂಗ ಸಚಿವಾಲಯ ತಿಳಿಸಿದೆ.

ವಿರಳ ಲೋಹಗಳ ರಫ್ತಿನ ಮೇಲೆ ಹೇರಿರುವ ನಿರ್ಬಂಧ ಸೇರಿ ಅನೇಕ ವಿಚಾರಗಳ ಕುರಿತು ಉಭಯ ನಾಯಕರು ಚರ್ಚಿಸುವ ಸಾಧ್ಯತೆ ಇದೆ.

ಗಡಿ ವಿಚಾರವಾಗಿ 2020ರಲ್ಲಿ ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯ(ಎಲ್‌ಎಸಿ) ವಿವಿಧ ಸ್ಥಳಗಳಲ್ಲಿ ಭಾರತ ಮತ್ತು ಚೀನಾ ಯೋಧರ ನಡುವೆ ಸಂಘರ್ಷ ಉಂಟಾಗಿ, ಉಭಯ ದೇಶಗಳ ನಡುವಿನ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಈ ಸಂಘರ್ಷದ ಬಳಿಕ, ಇದೇ ಮೊದಲ ಬಾರಿಗೆ ಜೈಶಂಕರ್ ಚೀನಾಕ್ಕೆ ಭೇಟಿ ನೀಡುತ್ತಿದ್ದಾರೆ.

ಬಿಹಾರ: ಸೀಟು ಹಂಚಿಕೆಗಾಗಿ ‘ಇಂಡಿಯಾ’ ಚರ್ಚೆ



ತೇಜಸ್ವಿ ಯಾದವ್

ಪಟ್ನಾ (ಪಿಟಿಐ): ಮುಂಬರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಸೀಟುಗಳ ಹಂಚಿಕೆ ಕುರಿತಂತೆ ‘ಇಂಡಿಯಾ’ ಒಕ್ಕೂಟದ ಸದಸ್ಯರು ಶನಿವಾರ ದೀರ್ಘ ಸಮಾಲೋಚನೆ ನಡೆಸಿದರು.

ವಿಧಾನಸಭೆಯ ವಿರೋಧ ಪಕ್ಷದ ನಾಯಕ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ನಿವಾಸದಲ್ಲಿ ಆರು ತಾಸು ಸಭೆ ನಡೆಯಿತು.

‘ಸೀಟು ಹಂಚಿಕೆಯ ಮಾತುಕತೆ ಆರಂಭವಾಗಿದೆ. ಆಂತರಿಕ ವಿಚಾರವಾಗಿದ್ದರಿಂದ ಇದೀಗ ಹೆಚ್ಚಿನ ವಿವರ ನೀಡಲು ಸಾಧ್ಯವಿಲ್ಲ. ಕ್ಷೇತ್ರಗಳ ಹಂಚಿಕೆಯು ಅಂತಿಮಗೊಂಡಾಗ ನಾವೇ ಪ್ರಕಟಿಸುತ್ತೇವೆ’ ಎಂದು ಒಕ್ಕೂಟದ ಸಮನ್ವಯ ಸಮಿತಿಯ ಮುಖ್ಯಸ್ಥರೂ ಆಗಿರುವ ತೇಜಸ್ವಿ ಪತ್ರಕರ್ತರಿಗೆ ತಿಳಿಸಿದರು.

ತೇಜಸ್ವಿ ಯಾದವ್ ‘ಇಂಡಿಯಾ’ ಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿಯಾಗುವ ಸಾಧ್ಯತೆಗಳಿವೆ.

ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಸರ್ಕಾರವು, ನಮ್ಮ ‘ಯುವ ಆಯೋಗ’ ಹಾಗೂ ವೃದ್ಧಾಪ್ಯ ವೇತನ ಹೆಚ್ಚಳದಂತಹ ಜನಪ್ರಿಯ ಯೋಜನೆಗಳನ್ನು ಅನುಕರಿಸಲು ಮುಂದಾಗಿದೆ ಎಂದು ಇದೇ ಸಂದರ್ಭ ದೂರಿದರು.

‘ಮತದಾರರ ಪಟ್ಟಿ ಪರಿಷ್ಕರಣೆ ದೇಶದುದ್ದಕ್ಕೂ ವಿಸ್ತರಿಸದಿರಿ’

ನವದೆಹಲಿ: ‘ಬಿಹಾರದಲ್ಲಿ ಕೈಗೆತ್ತಿಕೊಂಡಿರುವ ಮತದಾರರ ಪಟ್ಟಿಯನ್ನು ಸಮಗ್ರವಾಗಿ ಪರಿಷ್ಕರಣೆ ಕಾರ್ಯವನ್ನು ದೇಶದುದ್ದಕ್ಕೂ ವಿಸ್ತರಿಸಬಾರದು’ ಎಂದು ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ಶನಿವಾರ ಆಗ್ರಹಿಸಿದೆ.

ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಕಾರ್ಯವನ್ನು ದೇಶದಾದ್ಯಂತ ವಿಸ್ತರಿಸಲು ಚುನಾವಣಾ ಆಯೋಗವು ಕೆಲಸ ಆರಂಭಿಸಿದೆ ಎನ್ನಲಾಗುತ್ತಿದೆ. ರಾಜ್ಯದಲ್ಲಿನ ಆಯೋಗದ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಈ ಬಗ್ಗೆ ಮಾಹಿತಿ ನೀಡಲಾಗಿದೆ ಎಂಬ ವರದಿಗಳೂ ಇವೆ.

‘ಬಿಜೆಪಿ ನಿಯಂತ್ರಣ’ದಲ್ಲಿ ಇರುವ ಆಯೋಗದ ಈ ಕ್ರಮವು, ದೇಶದ ಜನರನ್ನು ಅನುಮಾನದಿಂದ ನೋಡುವ, ಮತದಾನದ ಹಕ್ಕಿಗೆ ಬೆದರಿಕೆ ಒಡ್ಡುವ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿ ಅಕ್ರಮ ನಡೆಯುವಂತೆ ಮಾಡುತ್ತದೆ’ ಎಂದು ಪಕ್ಷ ಆರೋಪಿಸಿದೆ.

‘ಸಮಗ್ರ ಪರಿಷ್ಕರಣೆ ವೇಳೆ ಆಧಾರ್ ಕಾರ್ಡ್, ಮತದಾರರ ಚೀಟಿ ಮತ್ತು ಪಡಿತರ ಚೀಟಿಯನ್ನು ಪರಿಗಣಿಸಬೇಕು ಎಂದು ಸುಪ್ರೀಂ ಕೋರ್ಟ್ ನೀಡಿರುವ ಸ್ಪಷ್ಟ ಆದೇಶವನ್ನು ಆಯೋಗವು ನಿರಾಕರಿಸುವಂತಿಲ್ಲ’ ಎಂದೂ ಅದು ಹೇಳಿದೆ.

ಲಡಾಖ್‌ನಲ್ಲಿ ಸೇನಾ ಮೂಲಸೌಕರ್ಯಕ್ಕೆ ಸಿದ್ಧತೆ

ನವದೆಹಲಿ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ಸೇನಾ ಸಾಮರ್ಥ್ಯವನ್ನು ವಿಸ್ತರಿಸಲು ರಕ್ಷಣಾ ಸಚಿವಾಲಯ ಯೋಜಿಸಿದೆ. ಕ್ಷಿಪಣಿ ಸಂಗ್ರಹ ಕೇಂದ್ರಗಳು, ವಾಯುನೆಲೆ ಹಾಗೂ ಪಡೆಗಳಿಗೆ ವಸತಿ ಕೇಂದ್ರವನ್ನು ಸ್ಥಾಪಿಸಲು ಮುಂದಾಗಿದೆ.

ಭಾರತ ಮತ್ತು ಚೀನಾ ನಡುವಿನ ಗಡಿ ಉದ್ವಿಗ್ನತೆ ನಡುವೆ ಭಾರತ ಈ ಕ್ರಮ ಕೈಗೊಂಡಿದೆ.


ಅಲ್ಲದೇ ಕಾರಾಕೋರಂ ಸಮೀಪವಿರುವ ಭಾರತದ ಅತಿ ಎತ್ತರದ ಭೂಪ್ರದೇಶ ದೌಲತ್ ಬೇಗ್ ಓಲ್ಡಿಗೆ ರಸ್ತೆ ಸಂಪರ್ಕವನ್ನು ಸುಧಾರಿಸಲಾಗುವುದು. ಯುದ್ಧ ಸಾಮಗ್ರಿಗಳ ಶೇಖರಣೆಗೆ ವ್ಯವಸ್ಥೆ ಮಾಡಲಾಗುವುದು. ಹೆಲಿಕಾಪ್ಟರ್‌ಗಳು ಹಾಗೂ ಮಾನವರಹಿತ ವೈಮಾನಿಕ ವಾಹನಗಳಿಗೆ ವಾಯುನೆಲೆ ರಚಿಸಲಾಗುವುದು.

ಈ ಎಲ್ಲ ಯೋಜನೆಗಳ ಅನುಷ್ಠಾನಕ್ಕೆ ಲಡಾಖ್‌ನಲ್ಲಿ ಒಟ್ಟು 300 ಹೆಕ್ಟೇರ್‌ಗಿಂತ ಹೆಚ್ಚು ಭೂ ಪ್ರದೇಶದ ಅಗತ್ಯವಿದೆ.

ಲಡಾಖ್‌ನಲ್ಲಿ 25 ಸೇನಾ ಮೂಲಸೌಕರ್ಯ ಕೇಂದ್ರ ಸ್ಥಾಪಿಸುವ ಯೋಜನೆಯಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿ ಇತ್ತೀಚೆಗೆ ವನ್ಯಜೀವಿ ಮಂಡಳಿಯಿಂದ ಅನುಮತಿ ಪಡೆಯಲಾಗಿದೆ.

51 ಸಾವಿರ ಮಂದಿಗೆ ನೇಮಕಾತಿ ಪತ್ರ ವಿತರಿಸಿದ ಪ್ರಧಾನಿ ಮೋದಿ

‘ಉದ್ಯೋಗ ಸೃಷ್ಟಿಯೊಂದಿಗೆ ರಾಷ್ಟ್ರ ಬಲವರ್ಧನೆ’



ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಕಳೆದ 11 ವರ್ಷಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ಕೇಂದ್ರ ಸರ್ಕಾರ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸಿದೆ. ಇದರಿಂದಾಗಿ ಪ್ರತಿಯೊಂದು ಕ್ಷೇತ್ರದ ಬಲವರ್ಧನೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಪ್ರತಿಪಾದಿಸಿದ್ದಾರೆ.

‘ರೋಜಗಾರ್ ಮೇಳ’ದ ಭಾಗವಾಗಿ ವಿಡಿಯೊ ಕಾನ್ಫರೆನ್ಸ್ ಮೂಲಕ 51 ಸಾವಿರ ಮಂದಿಗೆ ನೇಮಕಾತಿ ಪತ್ರವನ್ನು ಪ್ರಧಾನಿ ವಿತರಿಸಿದರು. ಈ ವೇಳೆ ಉದ್ಯೋಗ ಸೃಷ್ಟಿ ಹಾಗೂ ಬಡತನ ನಿರ್ಮೂಲನೆಗಾಗಿ ತಮ್ಮ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಮಾತನಾಡಿದರು.

ಇತ್ತೀಚೆಗೆ ಐದು ರಾಷ್ಟ್ರಗಳ ಪ್ರವಾಸ ಕೈಗೊಂಡಿದ್ದರ ಬಗ್ಗೆಯೂ ಮಾತನಾಡಿ, ‘ಭಾರತವು ಯುವಶಕ್ತಿ ಹಾಗೂ ಪ್ರಜಾಪ್ರಭುತ್ವ ಎಂಬ ಎರಡು ಅನಂತ ಶಕ್ತಿಗಳನ್ನು ಹೊಂದಿದೆ ಎಂಬುದನ್ನು ಇಡೀ ಜಗತ್ತು ಒಪ್ಪಿಕೊಂಡಿದೆ. ಪ್ರವಾಸದ ವೇಳೆ ವಿವಿಧ ದೇಶಗಳೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳು ಭಾರತದ ಯುವಜನತೆಗೆ ಉತ್ಪಾದನಾ ಹಾಗೂ ಸೇವಾ ವಲಯಗಳಲ್ಲಿ ವಿಪುಲ ಅವಕಾಶಗಳನ್ನು ಸೃಷ್ಟಿಸಲಿದೆ’ ಎಂದೂ ಹೇಳಿದ್ದಾರೆ.

ಮೋದಿ ಹೇಳಿದ್ದೇನು?

- ಉದ್ಯೋಗ ಸೃಷ್ಟಿಯ ಮೂಲಕ 10 ವರ್ಷದಲ್ಲಿ 25 ಕೋಟಿ ಮಂದಿಯನ್ನು ಬಡತನದಿಂದ ಹೊರಗೆ ತರಲಾಗಿದೆ
- ಕಳೆದೊಂದು ದಶಕದಲ್ಲಿ 90 ಕೋಟಿ ಮಂದಿ ಸರ್ಕಾರದ ಕಲ್ಯಾಣ ಯೋಜನೆಗಳ ಫಲಾನುಭವಿಗಳಾಗಿದ್ದಾರೆ
- ಉತ್ಪಾದನಾ ಕ್ಷೇತ್ರಕ್ಕೆ ನೀಡಿದ ಉತ್ತೇಜನ ಫಲ ನೀಡಿದೆ. 11 ವರ್ಷಗಳಲ್ಲಿ ಉತ್ಪಾದನಾ ವಲಯದ ಮೌಲ್ಯ ₹11 ಲಕ್ಷ ಕೋಟಿಗೆ ಏರಿಕೆಯಾಗಿದೆ
- ಆಪರೇಷನ್ ಸಿಂಧೂರದ ಬಳಿಕ ರಕ್ಷಣಾ ಉತ್ಪಾದನಾ ಕ್ಷೇತ್ರವು ಎಲ್ಲರ ಗಮನ ಸೆಳೆದಿದೆ. ಈ ವಲಯದ ಮೌಲ್ಯ ₹1.25 ಲಕ್ಷ ಕೋಟಿಯ ಗಡಿದಾಟಿದೆ
- ಲೊಕೊಮೋಟಿವ್ ಉತ್ಪಾದನೆಯಲ್ಲಿ ಭಾರತ ಅತಿದೊಡ್ಡ ರಾಷ್ಟ್ರವಾಗಿ ಹೊರಹೊಮ್ಮಿದೆ. ಆಟೊಮೊಬೈಲ್ ಕ್ಷೇತ್ರವು 5 ವರ್ಷದಲ್ಲಿ ₹3.43 ಲಕ್ಷ ಕೋಟಿ (40 ಬಿಲಿಯನ್ ಡಾಲರ್) ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸಿದೆ

ಜವಾರಿಯಾ ಎಸ್.ಪೂನಾವಾಲಾ ಬೆಂಗಳೂರು ಬೇಸಿಗೆ ಡರ್ಬಿಗೆ ಬಿಟಿಸಿ ಸಜ್ಜು

ಸಾವರಿನ್ ಕಿಂಗ್–ಫಿನ್‌ಬಾಸ್ ಪೈಪೋಟಿ

• ಡಿ. ರವಿಕುಮಾರ್

ಬೆಂಗಳೂರು: ರೇಸ್‌ಪ್ರಿಯರು ಕಾತುರದಿಂದ ಎದುರುನೋಡುತ್ತಿರುವ ವರ್ಣರಂಜಿತ ‘ಬೆಂಗಳೂರು ಬೇಸಿಗೆ ಡರ್ಬಿ’ಗೆ ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಸಜ್ಜಾಗಿದೆ. ಜವಾರಿಯಾ ಎಸ್. ಪೂನಾವಾಲಾ ಪ್ರಾಯೋಜಕತ್ವದಲ್ಲಿ ಏರ್ಪಡಿಸಿರುವ ಡರ್ಬಿ ಸುಮಾರು ₹2.5 ಕೋಟಿ ಬಹುಮಾನದ ಮೊತ್ತ ಹೊಂದಿದೆ.

ಡರ್ಬಿ ವಿಜೇತ ಕುದುರೆಗೆ ಸುಮಾರು ₹ 1.22 ಕೋಟಿ ಮತ್ತು ₹ 3 ಲಕ್ಷ ಮೌಲ್ಯದ ಆಕರ್ಷಕ ಟ್ರೋಫಿ ದೊರಕಲಿದೆ. ಕಣದಲ್ಲಿ ಆರು ಹೆಣ್ಣು ಕುದುರೆಗಳು ಸೇರಿದಂತೆ ಒಟ್ಟು 16 ಕುದುರೆಗಳು ಸೆಣಸಲಿದ್ದು, ರೋಚಕ ಫಲಿತಾಂಶ ನಿರೀಕ್ಷಿಸಲಾಗಿದೆ. ಇವುಗಳಲ್ಲಿ, ಫಿನ್‌ಬಾಸ್ ಮತ್ತು ಸಾವರಿನ್ ಕಿಂಗ್ ಪ್ರಮುಖ ಸ್ಪರ್ಧಿಗಳು.

ಜುವೆನೈಲ್ ಮಿಲಿಯನ್ ರೇಸ್‌ನಲ್ಲಿ ಸಾವರಿನ್ ಕಿಂಗ್ ಗೆದ್ದಾಗ, ಫಿನ್‌ಬಾಸ್ ತೀವ್ರ ಅಡಚಣೆಯಿಂದಾಗಿ ಎರಡನೇ ಸ್ಥಾನ ಪಡೆದಿತ್ತು. ಆದರೆ, ನಂತರದ ಫಿಲ್ಲೀಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್‌ನಲ್ಲಿ ನಿರಾಯಾಸ ಗೆಲುವು ಸಾಧಿಸಿದೆ. ತೀವ್ರ ಪೈಪೋಟಿಯಿದ್ದ ಕೋಲ್ಟ್ಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ರೇಸ್‌ನಲ್ಲಿ ನಂತರ ಸಾವರಿನ್ ಕಿಂಗ್ ರೋಚಕ ಜಯ ಗಳಿಸಿತ್ತು.

ಫಿನ್‌ಬಾಸ್ ನಿರಾಯಾಸವಾಗಿ ಗೆದ್ದಿದ್ದರೂ, ತನ್ನ ಎರಡೂ ಗೆಲುವಿನಲ್ಲಿ ಕೊನೆಯ 400 ಮೀಟರ್ಸ್‌ನಲ್ಲಿ ಸಾವರಿನ್ ಕಿಂಗ್ ತೋರಿರುವ ವೇಗವರ್ಧನೆ ಗಮನಿಸಿದಲ್ಲಿ, ಸಾವರಿನ್ ಕಿಂಗ್ ತುಸು ಮೇಲುಗೈ ಹೊಂದಿದೆ. ಕೋಲ್ಟ್ಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್‌ನಲ್ಲಿ ಇದೇ ಕುದುರೆಗೆ ಅತ್ಯಂತ ನಿಕಟ ಅಂತರದಲ್ಲಿ ಸ್ಟಾರ್ಮ್ ಸೀ, ರೆಡ್ ಬಿಷಪ್ ಮತ್ತು ಪ್ರೊಕೊಫಿವ್ ಸೋತಿವೆ. ಈ ಕುದುರೆಗಳ ಗೆಲುವಿನ ಅವಕಾಶವನ್ನು ತಳ್ಳಿಹಾಕುವಂತಿಲ್ಲ.

ಭಾನುವಾರ ಎಂಟು ರೇಸ್‌ಗಳನ್ನು ಏರ್ಪಡಿಸಲಾಗಿದೆ. ಮೊದಲನೇ ರೇಸ್ ಮಧ್ಯಾಹ್ನ 1.15ಕ್ಕೆ ಪ್ರಾರಂಭವಾಗಲಿದೆ. ಜವಾರಿಯಾ ಎಸ್. ಪೂನಾವಾಲಾ ಬೆಂಗಳೂರು ಬೇಸಿಗೆ ಡರ್ಬಿಯನ್ನು ಸಂಜೆ 4ಕ್ಕೆ ಏರ್ಪಡಿಸಲಾಗಿದೆ.

ಉಚಿತ ಬುದ್ಧಿಕೌಶಲ ಸ್ಪರ್ಧೆ: ರೇಸ್ ಪ್ರಿಯರಿಗಾಗಿ ಉಚಿತ ಬುದ್ಧಿಕೌಶಲ ಸ್ಪರ್ಧೆ ಏರ್ಪಡಿಸಲಾಗಿದೆ. ಜವಾರಿಯಾ ಎಸ್. ಪೂನಾವಾಲಾ ಬೆಂಗಳೂರು ಬೇಸಿಗೆ ಡರ್ಬಿ ರೇಸ್‌ನಲ್ಲಿ ಕ್ರಮವಾಗಿ ಮೊದಲ ನಾಲ್ಕು ಸ್ಥಾನ ಪಡೆಯುವ ಕುದುರೆಗಳನ್ನು ನಾಮನಿರ್ದೇಶನ ಮಾಡಿ ವಿಜೇತರಾದ ನಾಲ್ವರಿಗೆ ಬಹುಮಾನವಿದೆ.

ಡರ್ಬಿ ನಡೆಯುವ ಸಮಯ: ಸಂಜೆ 4



ಡರ್ಬಿ ಸ್ಪರ್ಧಿಗಳ ವಿವರ

ಸಂಖ್ಯೆ	ಕುದುರೆ ಹೆಸರು	ಟ್ರೈನರ್	ಜಾಕಿ	ತೂಕ (ಕೆ.ಜಿ)	ಡ್ರಾ ನಂ.
1	ಚರಿಸ್ಮಾಟಿಕ್	ಪ್ರಸನ್ನಕುಮಾರ್	ವೈ.ಎಸ್.ಶ್ರೀನಾಥ್	56	15
2	ಗನ್‌ಸ್ಮೋಕ್	ಎಂ.ನರೇಡು	ಮುಕೇಶ್ ಕುಮಾರ್	56	14
3	ಮ್ಯಾಟಿಸ್	ಪೆಸಿ ಶ್ರಾಫ್	ಎ.ಪ್ರಕಾಶ್	56	5
4	ಮೈಂಡ್‌ಫುಲ್	ದೀಪೇಶ್ ನರೇಡು	ಯಶ್ ನರೇಡು	56	11
5	ಪ್ರೊಕೊಫಿವ್	ಪ್ರಸನ್ನಕುಮಾರ್	ಸೂರಜ್ ನರೇಡು	56	4
6	ರೆಡ್ ಬಿಷಪ್	ಪೆಸಿ ಶ್ರಾಫ್	ಎ.ಸಂದೇಶ್	56	6
7	ಸಾವರಿನ್ ಕಿಂಗ್	ಆಧಿರಾಜ್‌ಸಿಂಗ್ ಜೋಧ	ಆಂಟೊನಿ ರಾಜ್	56	13
8	ಸ್ಟಾರ್ಮ್ ಸೀ	ಎಂ.ಕೆ.ಜಾಧವ್	ಎನ್.ಎಸ್.ಪರಮಾರ್	56	16
9	ಸುಪ್ರೀಮ್ ಸಕ್ಸಸ್	ವಿ.ಲೋಕನಾಥ್	ಆರ್.ಎನ್. ದರ್ಶನ್	56	1
10	ವಾಕಿಂಗ್ ಥಂಡರ್	ಎಲ್.ವಿ.ಆರ್.ದೇಶ್‌ಮುಖ್	ಎ.ಎ.ಅರ್ಷದ್ ಅಸ್ಬಾರ್	56	10
11	ಎಲಿಸಿಯಮ್	ಎಸ್.ಎಸ್. ಅತೋಲಾಹಿ	ಅಕ್ಷಯ್‌ಕುಮಾರ್	54.5	8
12	ಫಿನ್‌ಬಾಸ್	ಪೆಸಿ ಶ್ರಾಫ್	ಟ್ರೆವರ್ ಪಟೇಲ್	54.5	2
13	ಮಿರಾಕಲ್ ಸ್ಟಾರ್	ಪದ್ಮನಾಭನ್	ನೀರಜ್ ರಾವಲ್	54.5	3
14	ಮೂನ್ ಸ್ಟಾರ್	ಅರವಿಂದ್ ಗಣಪತಿ	ವಿವೇಕ್.ಜಿ	54.5	12
15	ನಾರ್ಥನ್ ವೇವ್ಸ್	ಜಿ.ಶಶಿಕಾಂತ್	ಕೆ.ಸಾಯಿಕಿರಣ್	54.5	7
16	ಸನ್‌ಶೈನ್	ಇರ್ಫಾನ್ ಘಟಾಲ	ಎಸ್.ಸಕ್ಲೈನ್	54.5	9

ಬೆಂಗಳೂರು ರೇಸ್

ದಿನದ ಒಟ್ಟು ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಇಂತಿವೆ

1. **ಟರ್ಫ್ ಅಥಾರಿಟೀಸ್ ಆಫ್ ಇಂಡಿಯಾ ಟ್ರೋಫಿ**; 1800 ಮೀ. ಲಕ್ಸ್ ಎಟರ್ನಾ 4, ನಾಟಿ ಸ್ಕಾಟಿ 3, ಸ್ಟಾರ್ಮ್ ಶ್ಯಾಡೊ 5
2. **ಇಂಡಿಯನ್ ಪ್ಯಾಟರ್ನ್ ಕಮಿಟಿ ಟ್ರೋಫಿ-ಡಿ.1**; 1200 ಮೀ. ಮನಿ ಬ್ಯಾಗ್ಸ್ 1, ಮಿಸ್ಟಿಕ್ ಚಾರ್ಮ್ 9, ಜೀವಾ 3
3. **ಮುಂಬೈ ಕಪ್**; 1200 ಮೀ. ಕ್ರೆಡೆನ್ಸ್ 4, ಇಂಪೀರಿಯಲ್ ಬ್ಲೂ 1, ಕ್ವಾರ್ 5
4. **ಅಮೋಕ್‌ಬಾಶ್ ಬಿಟಿಸಿ ಆನಿವರ್ಸರಿ ಕಪ್**; 1400ಮೀ. ಪ್ರಾಣ 5, ಆಫ್ರಿಕನ್ ಗೋಲ್ಡ್ 2, ಮೆರೊಪಿ 4
5. **ಫೈವ್ ಸ್ಟಾರ್ ಸಿಪ್ಪಿಂಗ್ ಮಿಲಿಯನ್**; 1600 ಮೀ. ಸ್ಕೋಯೆನ್‌ಬರ್ಗ್ 6, ನೈಟ್ ರಿಜೆಂಟ್ 5, ಸಿಗಾರ್ ಗೆಲಾಕ್ಸಿ 3
6. **ಜವಾರೀ ಎಸ್**.ಪೂನಾವಾಲ ಬೆಂಗಳೂರು ಬೇಸಿಗೆ ಡರ್ಬಿ ಸಾವರಿನ್ ಕಿಂಗ್ 7. ಫಿನ್ಬಾಸ್ 12, ಎಲಿಸಿಯಮ್ 11
7. **ಹೈದರಾಬಾದ್ ಸಲ್ವಾರ್**; 1400 ಮೀ. ಡಾನ್ ಕಾರ್ಲೋಸ್ 2, ಮೌಂಟೇನ್ ಜ್ಯೂಯಲ್ 4, ಹಿಡನ್ ಡ್ರೀಮ್ಸ್ 6
8. **ಇಂಡಿಯನ್ ಪ್ಯಾಟರ್ನ್ ಕಮಿಟಿ ಟ್ರೋಫಿ-ಡಿ.2**; 1200 ಮೀ. ಫ್ಲೆಮಿಂಗ್ ಸ್ವೋರ್ಡ್ 3, ಗ್ಲೇಝ್ 8, ಔಟ್ ಇನ್ಟು ಸ್ಪಾಟ್‌ಲೈಟ್

ಉತ್ತಮ ಬೆಟ್: ಮನಿ ಬ್ಯಾಗ್ಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8 [1]	3,4,5	6,7,8

ಲಾರ್ಡ್ಸ್‌ನಲ್ಲಿ ಕನ್ನಡಿಗ ರಾಹುಲ್ ಹೊಳಪು

ರಿಷಭ್, ಜಡೇಜ ದಿಟ್ಟ ಆಟ • ಮೊದಲ ಇನಿಂಗ್ಸ್‌ನಲ್ಲಿ ತಂಡಗಳ ಮೊತ್ತ ಸಮಬಲ

• ಸಿಡ್ನಿ ಕಿರಣ್

ಲಂಡನ್: ಈ ಕಾಲದಲ್ಲಿಯೂ ರಾಜ ಮನೆತನಕ್ಕೆ ಉನ್ನತ ಗೌರವ ಕೊಡುವ ನೆಲ ಇದು. ಇಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ ಅವರ ಕಲಾತ್ಮಕ ಆಟವು ರಾಜ ಮತ್ತು ರಾಣಿಯರ ಕಿರೀಟದಲ್ಲಿರುವ ಅಮೂಲ್ಯ ವಜ್ರದಂತೆ ಹೊಳೆಯಿತು.

ಲಾರ್ಡ್ಸ್ ಅಂಗಳದಲ್ಲಿ ನಡೆಯುತ್ತಿರುವ ಮೂರನೇ ಟೆಸ್ಟ್ ಪಂದ್ಯದ ಮೂರನೇ ದಿನವಾದ ಶನಿವಾರ ಆತಿಥೇಯ ಇಂಗ್ಲೆಂಡ್ ಬೌಲರ್‌ಗಳ ಛಲದ ಆಟದ ಮುಂದೆ ರಾಹುಲ್ ಶತಕ ಗಳಿಸಿದರು. 33 ವರ್ಷದ ರಾಹುಲ್ ಅವರಿಗೆ ಈ ಸರಣಿಯಲ್ಲಿ ಇದು ಎರಡನೇ ಶತಕ. ಲೀಡ್ಸ್‌ನಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಮೂರಂಕಿ ಮೊತ್ತ ಗಳಿಸಿದ್ದರು. ಲಾರ್ಡ್ಸ್‌ನಲ್ಲಿ ಅವರು 177 ಎಸೆತಗಳಲ್ಲಿ 100 ರನ್ ಗಳಿಸಿದರು. ಈ ಐತಿಹಾಸಿಕ ಕ್ರೀಡಾಂಗಣದ 'ಗೌರವ ಫಲಕ'ದ ಮೇಲೆ ಎರಡನೇ ಬಾರಿ ರಾಹುಲ್ ಹೆಸರು ಅಚ್ಚಾಯಿತು.

ಪರಿವರ್ತನೆ ಘಟ್ಟದಲ್ಲಿರುವ ಭಾರತ ತಂಡದಲ್ಲಿ ಯುವ ಆಟಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅದರಲ್ಲಿ ಅನುಭವಿ, ಪರಿಣತ ಬ್ಯಾಟರ್ ಆಗಿರುವ ರಾಹುಲ್ ಈ ಕ್ರೀಡಾಂಗಣದಲ್ಲಿ ಎರಡು ಶತಕ ಹೊಡೆದ ಭಾರತದ ಎರಡನೇ ಆಟಗಾರನಾದರು. ದಿಲೀಪ್ ವೆಂಗಸರ್ಕಾರ್ ಅವರು ಮೂರು ಸಲ ಇಲ್ಲಿ ಶತಕ ಹೊಡೆದಿದ್ದಾರೆ.



ಕೆ.ಎಲ್. ರಾಹುಲ್ ಶತಕ ಸಂಭ್ರಮ

ಬಿರುಬೇಸಿಗೆಯ ಕಾವಿನಲ್ಲಿ ರಾಹುಲ್ ತಾಳ್ಮೆಯ ಆಟ ಗಮನ ಸೆಳೆಯಿತು. ಅವರ ಮುಖದ ಮೇಲೆ ಒಂದಿನಿತೂ ದಣಿವಿನ ಛಾಯೆ ಸುಳಿಯಲಿಲ್ಲ. ಅವರೊಂದಿಗೆ ಉಪ ನಾಯಕ ರಿಷಭ್ ಪಂತ್ (74) ಮತ್ತು ರವೀಂದ್ರ ಜಡೇಜ (72) ಉಪಯುಕ್ತ ಕಾಣಿಕೆ ನೀಡಿದರು. ಹೀಗಾಗಿ, ಭಾರತ ತಂಡವು ಇಂಗ್ಲೆಂಡ್ ಗಳಿಸಿದಷ್ಟೇ (387) ರನ್ ಗಳಿಸಲು ಸಾಧ್ಯವಾಯಿತು. ಎರಡನೇ ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡ ವಿಕೆಟ್ ನಷ್ಟವಿಲ್ಲದೆ 2 ರನ್ ಗಳಿಸಿದೆ.

ಇಂಗ್ಲೆಂಡ್ ತಂಡವು ಶುಕ್ರವಾರ 387 ರನ್‌ಗಳಿಗೆ ಆಲೌಟ್ ಆಗಿತ್ತು. ದಿನದಾಟದ ಮುಕ್ತಾಯಕ್ಕೆ ಭಾರತ ತಂಡವು 3 ವಿಕೆಟ್‌ಗಳಿಗೆ 145 ರನ್ ಗಳಿಸಿತ್ತು. ರಾಹುಲ್ ಮತ್ತು ಉಪನಾಯಕ ರಿಷಭ್ ಪಂತ್ ಕ್ರೀಸ್‌ನಲ್ಲಿದ್ದರು. ಮೂರನೇ ದಿನದಾಟದಲ್ಲಿ ಜೋಫ್ರಾ ಆರ್ಚರ್ ಹಾಕಿದ ಮೊದಲ ಓವರ್‌ನ ಎರಡನೇ ಎಸೆತವನ್ನು ಬೌಂಡರಿಗೆರೆ ದಾಟಿಸಿದ ರಿಷಭ್ ಅವರು ಆಕ್ರಮಣಕಾರಿಯಾಗುವ ಸಂದೇಶ ರವಾನಿಸಿದರು. ಆದರೆ ಇದರಿಂದ ಎಚ್ಚೆತ್ತುಕೊಂಡ ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಫೀಲ್ಡಿಂಗ್ ಸಂಯೋಜನೆಯಲ್ಲಿ ಕೆಲವು ಅಸಾಂಪ್ರದಾಯಿಕ ಪ್ರಯತ್ನಗಳನ್ನು ಮಾಡಿದರು. ಜಡತ್ವದಿಂದ ಕೂಡಿದ್ದ ಪಿಚ್‌ನಲ್ಲಿ ಅನಿರೀಕ್ಷಿತ ಪುಟಿತ ಮತ್ತು ವೇಗದ ಎಸೆತಗಳನ್ನು ಎದುರಿಸಲು ರಾಹುಲ್ ಮತ್ತು ಪಂತ್ ಇಬ್ಬರೂ ಅಪಾರ ಎಚ್ಚರಿಕೆ ವಹಿಸಬೇಕಾಯಿತು.

ರಾಹುಲ್ ಅವರು ರಕ್ಷಣಾತ್ಮಕ ಆಟಕ್ಕೆ ಹೆಚ್ಚು ಒತ್ತು ನೀಡಿದರು. ಆಫ್‌ಸ್ಟಂಪ್ ಮೇಲಿನ ದಾಳಿಯನ್ನೂ ಅವರು ಚಾಣಾಕ್ಷತೆಯಿಂದ ನಿರ್ವಹಿಸಿದರು. ತಪಸ್ವಿಯಂತೆ ಶಾಂತ ಮತ್ತು ಏಕಾಗ್ರಚಿತ್ತದೊಂದಿಗೆ ಬ್ಯಾಟಿಂಗ್ ಮಾಡಿದರು. ಒಂದಿಷ್ಟು ಹೊತ್ತಿನ ನಂತರ ಆಟದ ವೇಗ ಹೆಚ್ಚಿಸುವ ನಿರ್ಧಾರ ಮಾಡಿದರು. ಈ ಹಂತದಲ್ಲಿ ಕೆಲವು ಹೊಡೆತಗಳು ದಿಕ್ಕು ತಪ್ಪಿದವು ಆದರೆ ಸುರಕ್ಷಿತವಾಗಿ ಉಳಿದರು. ನೇರ ಡ್ರೈವ್, ಪುಲ್ ಮತ್ತು ಕವರ್ ಡ್ರೈವ್‌ಗಳ ಆಕರ್ಷಕ ಆಟ ಅವರಿಂದ ಹೊರಹೊಮ್ಮಿತು.

ಇನ್ನೊಂದು ಬದಿಯಲ್ಲಿ ಪಂತ್ ಎಂದಿನಂತೆ ತಮ್ಮ ನೈಜ ಶೈಲಿ ಆಟದಲ್ಲಿ ಮಗ್ನರಾಗಿದ್ದರು. ಕ್ರೀಸ್‌ನಲ್ಲಿ ಎದ್ದು, ಬಿದ್ದು, ಹೊರಳಾಡಿ ಹೊಡೆತಗಳನ್ನು ಪ್ರಯೋಗಿಸುವ ಧೈರ್ಯವನ್ನು ಇಲ್ಲಿಯೂ ಪ್ರದರ್ಶಿಸಿದರು. ಬೌನ್ಸರ್ ಒಂದನ್ನು ಸಿಕ್ಸರ್‌ಗೆ ಎತ್ತಿ ಅರ್ಧಶತಕದ ಗಡಿ ದಾಟಿದರು. ಆದರೆ ಊಟದ ವಿರಾಮಕ್ಕೆ ಮುನ್ನ ಒಂದು ಓವರ್ ಬಾಕಿಯಿದ್ದಾಗ ಪಂತ್ ರನೌಟ್ ಆದರು. ಸ್ಟೋಕ್ಸ್ ನಿಖರ ಥ್ರೋಗೆ ಅವರ ವಿಕೆಟ್ ಪತನವಾಯಿತು. 141 ರನ್‌ಗಳ ನಾಲ್ಕನೇ ವಿಕೆಟ್ ಜೊತೆಯಾಟ ಮುರಿಯಿತು.


ರಿಷಭ್ ಪಂತ್ ಪಿಟಿಐ ಚಿತ್ರಗಳು

ವಿರಾಮದ ನಂತರ ರಾಹುಲ್ ಶತಕ ಪೂರೈಸಿದರು. ಇದಾಗಿ ಕೆಲವು ನಿಮಿಷಗಳ ನಂತರ ಶೋಯಬ್ ಬಶೀರ್ ಎಸೆತವನ್ನು ತುಸು 'ಆಲಸ್ಯ'ದಿಂದ ಆಡಿದ ರಾಹುಲ್ ಸ್ಲಿಪ್‌ನಲ್ಲಿದ್ದ ಹ್ಯಾರಿ ಬ್ರೂಕ್‌ಗೆ ಕ್ಯಾಚಿತ್ತರು. ಈ ಹಂತದಲ್ಲಿ ಮತ್ತೆ ಜೋಫ್ರಾರನ್ನು ಸ್ಟೋಕ್ಸ್ ಅವರು ಬೌಲಿಂಗ್‌ಗೆ ಇಳಿಸಿದರು. ರವೀಂದ್ರ ಜಡೇಜ ಮತ್ತು ನಿತೀಶ್ ಕುಮಾರ್ ರೆಡ್ಡಿ ಅವರನ್ನು ಆರ್ಚರ್ ಕಾಡಿದರು. ಆದರೂ ಅವರಿಬ್ಬರು ಆರನೇ ವಿಕೆಟ್ ಜೊತೆಯಾಟದಲ್ಲಿ 72 ರನ್ ಸೇರಿಸಿದರು. ನಂತರದಲ್ಲಿ ಜಡೇಜ ಅವರನ್ನು ಸೇರಿಕೊಂಡ ವಾಷಿಂಗ್ಟನ್ ಸುಂದರ್ (23) ಏಳನೇ ವಿಕೆಟ್‌ಗೆ 50 ರನ್ ಸೇರಿಸಿದರು. ಆದರೆ, ಕೊನೆಯ ನಾಲ್ಕು ವಿಕೆಟ್‌ಗಳು 11 ರನ್ ಅಂತರದಲ್ಲಿ ಉರುಳಿದವು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 112.3 ಓವರ್‌ಗಳಲ್ಲಿ 387. ಭಾರತ: 119.2 ಓವರ್‌ಗಳಲ್ಲಿ 387 (ಕೆ.ಎಲ್. ರಾಹುಲ್ 100, ರಿಷಭ್ ಪಂತ್ 74, ರವೀಂದ್ರ ಜಡೇಜ 72, ನಿತೀಶ್ ಕುಮಾರ್ ರೆಡ್ಡಿ 30, ವಾಷಿಂಗ್ಟನ್ ಸುಂದರ್ 23; ಕ್ರಿಸ್ ವೋಕ್ಸ್ 84ಕ್ಕೆ 3, ಜೋಫ್ರಾ ಆರ್ಚರ್ 52ಕ್ಕೆ 2, ಬೆನ್ ಸ್ಟೋಕ್ಸ್ 63ಕ್ಕೆ 2). ಎರಡನೇ ಇನಿಂಗ್ಸ್: ಇಂಗ್ಲೆಂಡ್ 1 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 2 ರನ್.


ಪೋಲೆಂಡ್‌ನ ಇಗಾ ಶ್ವಾಂಟೆಕ್ ವಿಂಬಲ್ಡನ್ ಟ್ರೋಫಿಯೊಂದಿಗೆ ಎಎಫ್‌ಪಿ ಚಿತ್ರ

ಸವಾಲೇ ಆಗದ ಅನಿಸಿಮೋವಾ

ಶ್ವಾಂಟೆಕ್‌ಗೆ ಕಿರೀಟ

ಲಂಡನ್ (ರಾಯಿಟರ್ಸ್): ನಿರೀಕ್ಷೆ ಮೀರಿ ಏಕಪಕ್ಷೀಯವಾದ ಫೈನಲ್‌ನಲ್ಲಿ ಎಂಟನೇ ಶ್ರೇಯಾಂಕದ ಇಗಾ ಶ್ವಾಂಟೆಕ್ 6–0, 6–0ಯಿಂದ ಅಮೆರಿಕದ ಅಮಂಡಾ ಅನಿಸಿಮೋವಾ ಅವರನ್ನು ಬಗ್ಗುಬಡಿದು ವಿಂಬಲ್ಡನ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಈ ಪ್ರಶಸ್ತಿ ಗೆದ್ದ ಪೋಲೆಂಡ್‌ನ ಮೊದಲ ಆಟಗಾರ್ತಿ ಅವರು.

ಅನುಭವಿ ಶ್ವಾಂಟೆಕ್, 13ನೇ ಶ್ರೇಯಾಂಕದ ಅನಿಸಿಮೋವಾ ಅವರನ್ನು ಶನಿವಾರ ಕೇವಲ 57 ನಿಮಿಷಗಳಲ್ಲಿ ಸೋಲಿಸಿದರು. ಸೆಂಟರ್ ಕೋರ್ಟ್ ಪ್ರೇಕ್ಷಕರು ಪಂದ್ಯ ಸಾಗಿದ ರೀತಿ ಕಂಡು ನಿಬ್ಬೆರಗಾದರು. ಸೆಮಿಫೈನಲ್‌ನಲ್ಲಿ ಅಗ್ರ ಕ್ರಮಾಂಕದ ಅರಿನಾ ಸಬಲೆಂಕಾ ಅವರಿಗೆ ಆಘಾತ ನೀಡಿ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಫೈನಲ್ ತಲುಪಿದ ಅನಿಸಿಮೋವಾ ಇಲ್ಲಿ ಹೋರಾಟ ತೋರಬಹುದೆಂಬ ನಿರೀಕ್ಷೆಯಿತ್ತು. ಆದರೆ ಅವರಿಗೆ ಈ ಪಂದ್ಯ ದುಃಸ್ವಪ್ನದಂತೆ ಆಯಿತು.


1911ರ ನಂತರ ವಿಂಬಲ್ಡನ್ ಫೈನಲ್ ಪಂದ್ಯವನ್ನು 6–0, 6–0ಯಿಂದ ಸೋತ ಮೊದಲ ಆಟಗಾರ್ತಿ ಎನ್ನುವ ಅನಪೇಕ್ಷಿತ ದಾಖಲೆ ಅನಿಸಿಮೋವಾ ಅವರದಾಯಿತು. 1988ರ ಫ್ರೆಂಚ್ ಓಪನ್ ಫೈನಲ್‌ನಲ್ಲಿ ಸ್ಟೆಫಿ ಗ್ರಾಫ್ ಅವರು ನತಾಶಾ ಜ್ವರೇವಾ ಅವರನ್ನು ಇದೇ ರೀತಿ ಸದೆಬಡಿದ ನಂತರ ಯಾವುದೇ ಗ್ರ್ಯಾನ್‌ಸ್ಲಾಮ್ ಫೈನಲ್ ಈ ರೀತಿಯ ಸ್ಕೋರ್‌ಲೈನ್ ಕಂಡಿರಲಿಲ್ಲ.

ನಾಲ್ಕು ಬಾರಿ ಫ್ರೆಂಚ್ ಓಪನ್ ಮತ್ತು ಒಮ್ಮೆ ಅಮೆರಿಕ ಓಪನ್ ಗೆದ್ದು 'ಹಾರ್ಡ್‌ಕೋರ್ಟ್' ಆಟಗಾರ್ತಿ ಎಂಬ ಖ್ಯಾತಿ ಹೊಂದಿದ್ದ ಶ್ವಾಂಟೆಕ್ ಹುಲ್ಲುಹಾಸಿನ ಈ ಟೂರ್ನಿಯ ಅಂತಿಮ ಪಂದ್ಯವನ್ನು ಇಷ್ಟು ಸಲೀಸಾಗಿ ಜಯಿಸುತ್ತೇನೆಂದು ಕನಸಿನಲ್ಲೂ ಎಣಿಸಿರಲಿಕ್ಕಿಲ್ಲ. ಅವರು ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಈ ಹಿಂದಿನ ಭೇಟಿಗಳಲ್ಲಿ ಎಂದೂ ಕ್ವಾರ್ಟರ್‌ಫೈನಲ್ ದಾಟಿರಲಿಲ್ಲ.

ಸೆಮಿಫೈನಲ್‌ನಲ್ಲಿ ಬೆಲಿಂಡಾ ಬೆನ್ಸಿಕ್ ಅವರಿಗೆ ಕೇವಲ ಎರಡು ಗೇಮ್ ಬಿಟ್ಟುಕೊಟ್ಟಿದ್ದರು. ಫೈನಲ್‌ನಲ್ಲಿ ಇನ್ನೂ ನಿರ್ದಯ ಆಟವಾಡಿದರು. ಒಟ್ಟಾರೆ ಫೈನಲ್ ಹಾದಿಯಲ್ಲಿ ಪೋಲೆಂಡ್ ತಾರೆ ಬಿಟ್ಟುಕೊಟ್ಟಿದ್ದು ಒಂದು ಸೆಟ್ ಮಾತ್ರ.

ಆಧಿಪತ್ಯಕ್ಕೆ ಸಿನ್ನರ್–ಅಲ್ಕರಾಜ್ ಪೈಪೋಟಿ


ಸಿನ್ನರ್


ಅಲ್ಕರಾಜ್

ಲಂಡನ್ (ಎಎಫ್‌ಪಿ): ಪುರುಷರ ಟೆನಿಸ್‌ನಲ್ಲಿ ಉತ್ತುಂಗಕ್ಕೇರಲು ಇಬ್ಬರು ಯುವ ತಾರೆಗಳ ಪೈಪೋಟಿ ತೀವ್ರಗೊಂಡಿದೆ. ಈ ಪೈಪೋಟಿಯ ಮುಂದುವರಿದ ಭಾಗ ಎನ್ನುವಂತೆ ಭಾನುವಾರ ವಿಂಬಲ್ಡನ್ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಕಾರ್ಲೋಸ್ ಅಲ್ಕರಾಜ್ ಅವರು ಯಾನಿಕ್ ಸಿನ್ನರ್ ಅವರನ್ನು ಎದುರಿಸಲಿದ್ದಾರೆ.

ಕೊನೆಯ ಎಂಟು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳಲ್ಲಿ ಏಳನ್ನು ಇವರಿಬ್ಬರು ಹಂಚಿಕೊಂಡಿದ್ದಾರೆ. 2024ರ ಬಳಿಕ ತಲಾ ಮೂರು ಪ್ರಮುಖ ಟೂರ್ನಿಗಳಲ್ಲಿ ಇವರಿಬ್ಬರು ಚಾಂಪಿಯನ್ ಆಗಿದ್ದಾರೆ.

ಟೆನಿಸ್‌ನ 'ಬಿಗ್ ತ್ರೀ' ಎನಿಸಿದ್ದ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್, ಸ್ಪೇನ್‌ನ ರಫೆಲ್ ನಡಾಲ್ ಮತ್ತು ಸರ್ಬಿಯಾದ ನೊವಾಕ್ ಜೊಕೊವಿಚ್ ಅವರ ಪ್ರಾಬಲ್ಯದ ಯುಗ ಅಂತ್ಯಗೊಂಡಿದೆ.

ಸ್ಪೇನ್‌ನ ಅಲ್ಕರಾಜ್ ತಮ್ಮ ಬೆಡಗಿನ ಆಟದಿಂದ ಸೆಂಟರ್ ಕೋರ್ಟ್ ಪ್ರೇಕ್ಷಕರ ಹೃದಯ ಗೆದ್ದು ಶೋಮ್ಯಾನ್ ಎನಿಸಿದ್ದಾರೆ. ಇಟಲಿಯ ಸಿನ್ನರ್ ಅವರದ್ದು ಜೊಕೊವಿಚ್ ತದ್ರೂಪದ ಆಟ. ತೀಕ್ಷ್ಣ ಹೊಡೆತಗಳ ಜೊತೆ ಮೇಲುಗೈ ಅವಕಾಶಗಳನ್ನು ಅವರು ತಪ್ಪಿಸಿಕೊಳ್ಳುವುದೇ ವಿರಳ.

ಎರಡು ಬಾರಿಯ ಚಾಂಪಿಯನ್, 22 ವರ್ಷದ ಅಲ್ಕರಾಜ್ ಅವರು ಮೇಲ್ನೋಟಕ್ಕೆ ಭಾನುವಾರ ಪ್ರಶಸ್ತಿಗೆ ಫೇವರಿಟ್ ಎನಿಸಿದ್ದಾರೆ. ಸ್ಪೇನ್‌ನ ಆಟಗಾರ, ಇಟಲಿಯ ಆಟಗಾರನ ವಿರುದ್ಧ 12 ಮುಖಾಮುಖಿಗಳಲ್ಲಿ ಕೊನೆಯ ಐದರಲ್ಲಿ ಸೇರಿದಂತೆ ಎಂಟರಲ್ಲಿ ಜಯಗಳಿಸಿದ್ದಾರೆ. ಅಲ್ಕರಾಜ್ ಐದು ಗ್ರ್ಯಾನ್‌ಸ್ಲಾಮ್ ಮತ್ತು 23 ವರ್ಷದ ಸಿನ್ನರ್ ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಪ್ಯಾರಾ ಅಥ್ಲೆಟಿಕ್ಸ್: ರಕ್ಷಿತಾ, ಶರತ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ


ರಕ್ಷಿತಾ ರಾಜು

ಬೆಂಗಳೂರು: ಕರ್ನಾಟಕದ ರಕ್ಷಿತಾ ರಾಜು ಮತ್ತು ಶರತ್ ಮಾಕನಹಳ್ಳಿ ಶಂಕರಪ್ಪ ಅವರು ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಏಳನೇ ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದರು.

ಮಹಿಳೆಯರ 1500 ಮೀಟರ್ ಓಟದಲ್ಲಿ (ಟಿ12, ಟಿ12 ಮತ್ತು ಟಿ13) ರಕ್ಷಿತಾ ರಾಜು ಅವರು ಚಿನ್ನದ ಸಾಧನೆ ಮಾಡಿದರು. ಅಂಧ ಅಥ್ಲೀಟ್‌ಗಳು ಭಾಗವಹಿಸಿದ ಈ ವಿಭಾಗದಲ್ಲಿ ರಕ್ಷಿತಾ 5ನಿಮಿಷ, 19.90ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ರಾಧಾ ವೆಂಕಟೇಶ್ (5ನಿ, 41.70ಸೆ) ಬೆಳ್ಳಿ ಪದಕ ಜಯಿಸಿದರು.

ಪುರುಷರ ವಿಭಾಗದ 5000 ಮೀಟರ್ಸ್ (ಟಿ11 ಮತ್ತು ಟಿ12) ವಿಭಾಗದಲ್ಲಿ ಶಂಕರಪ್ಪ (13ನಿ,50.90ಸೆ) ಚಿನ್ನದ ಪದಕ ಜಯಿಸಿದರು.

ಮಹಿಳೆಯರ ಶಾಟ್‌ಪಟ್‌ನಲ್ಲಿ ಮೇಧಾ ಜಯಂತ್ (5.18 ಮೀಟರ್ಸ್) ಬೆಳ್ಳಿ ಸಾಧನೆ ಮಾಡಿದರು. ಅವರು ಎಫ್32, 33 ಮತ್ತು 34 ಕೆಟಗರಿಗಳಲ್ಲಿ ಈ ಸಾಧನೆ ಮಾಡಿದರು. ಶಾಟ್‌ಪಟ್ ಎಫ್57 ವಿಭಾಗದಲ್ಲಿ ಶಿಲ್ಪಾ ಕಂಚುಗರಕೊಪ್ಪಲು (6.50 ಮೀ) ಎರಡನೇ ಸ್ಥಾನ ಪಡೆದರು.


ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಟಿ64 ಪುರುಷರ ವಿಭಾಗದ 200 ಮೀಟರ್ ಓಟದಲ್ಲಿ ಚಿನ್ನ ಗೆದ್ದ ಎಸ್‌ಎಸ್‌ಸಿಬಿಯ ಅಜಯ್ ಕುಮಾರ್ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಸಂಕ್ಷಿಪ್ತ ಸುದ್ದಿ

ಡೈಮಂಡ್ ಲೀಗ್ ಮಿಂಚಿದ ಕುಜೂರ್

ಮೊನಾಕೊ (ಪಿಟಿಐ): ಭಾರತದ ಅನುಭವಿ ಅಥ್ಲೀಟ್ ಅವಿನಾಶ್ ಸಾಬ್ಳೆ ಅವರು ಮೊನಾಕೊ ಡೈಮಂಡ್ ಲೀಗ್‌ನಲ್ಲಿ ತಮ್ಮ ಮೆಚ್ಚಿನ 3000 ಮೀ. ಸ್ಟೀಪಲ್‌ಚೇಸ್ ಓಟದ ವೇಳೆ ಬಿದ್ದು ಗಾಯಗೊಂಡರು. ಆದರೆ ಪುರುಷರ 23 ವರ್ಷದೊಳಗಿನವರ ವಿಭಾಗದಲ್ಲಿ ಉದಯೋನ್ಮುಖ ತಾರೆ ಅನಿಮೇಶ್ ಕುಜೂರ್ 200 ಮೀ. ಓಟದಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದು ಗಮನಸೆಳೆಯಿತು.

ಏಷ್ಯನ್ ಚಾಂಪಿಯನ್ ಆಗಿರುವ ಸಾಬ್ಳೆ, ಶುಕ್ರವಾರ ರಾತ್ರಿ ಓಟದ ಆರಂಭದಲ್ಲೇ ಬಿದ್ದು ಸ್ವಲ್ಪ ನರಳಿದಂತೆ ಕಂಡರು. ಈ ಓಟದಲ್ಲಿ ಮೊರಾಕೊದ ಸೌಫಿಯಾನ್ ಎಲ್ ಬಕ್ಕಲಿ ಅಗ್ರಸ್ಥಾನ ಪಡೆದರು.

ಭಾರತ 'ಎ' ತಂಡಕ್ಕೆ ಮಣಿದ ಫ್ರಾನ್ಸ್

ಈಂಡ್‌ಹೋವೆನ್ (ನೆದರ್ಲೆಂಡ್ಸ್), (ಪಿಟಿಐ): ಭಾರತ ಪುರುಷರ ಹಾಕಿ 'ಎ' ತಂಡ, ಯುರೋಪ್ ಪ್ರವಾಸದಲ್ಲಿ ಸತತ ಮೂರನೇ ಗೆಲುವು ಪಡೆಯಿತು. ಶನಿವಾರ ನಡೆದ ಪಂದ್ಯದಲ್ಲಿ ಫ್ರಾನ್ಸ್ ತಂಡವನ್ನು 3–2 ಗೋಲುಗಳಿಂದ ಸೋಲಿಸಿತು.

ಭಾರತದ ಪರ ಮುನ್ಪಡೆ ಆಟಗಾರ ಆದಿತ್ಯ ಅರ್ಜುನ್ ಲಾಲಗೆ ಎರಡು ಗೋಲು ಗಳಿಸಿದರೆ, ಬಾಬಿ ಸಿಂಗ್ ಧಾಮಿ ಮತ್ತೊಂದು ಗೋಲು ಗಳಿಸಿದರು. ಕ್ಲೆಮೆಂಟ್ ಅವರು ಫ್ರಾನ್ಸ್‌ನ ಎರಡೂ ಗೋಲುಗಳನ್ನು ಗಳಿಸಿದರು.

ಭಾರತ 'ಎ' ತಂಡವು ಭಾನುವಾರ ಮತ್ತೊಮ್ಮೆ ಫ್ರಾನ್ಸ್ ತಂಡವನ್ನು ಎದುರಿಸಲಿದೆ.